ಶಿವನಸಮುದ್ರ ಜಲವಿದ್ಯುತ್ ಯೋಜನೆ

ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಸತೀಶ್ ಕುಮಾರ್ ಎಂ.

ಮಾರ್ಗದರ್ಶಕರು

ಡಾ ಎನ್ ಚಿನ್ನಸ್ವಾಮಿ ಸೋಸಲೆ

ಪ್ರವಾಚಕರು

ಚರಿತ್ರೆ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಶಿವನಸಮುದ್ರ ಜಲವಿದ್ಯುತ್ ಯೋಜನೆ

ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ
ಸತೀಶ್ ಕುಮಾರ್ ಎಂ.

ಮಾರ್ಗದರ್ಶಕರು
ಡಾ ಎನ್ ಚಿನ್ನಸ್ವಾಮಿ ಸೋಸಲೆ
ಪ್ರವಾಚಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

ಮಾರ್ಗದರ್ಶಕರ ದೃಢೀಕರಣ ಪತ್ರ

ಶಿವನಸಮುದ್ರ ಜಲವಿದ್ಯುತ್ ಯೋಜನೆ : ಚಾರಿತ್ರಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ವಿಭಾಗದ ಎಂ.ಫಿಲ್.ಪದವಿಗಾಗಿ **ಸತೀಶ್ ಕುಮಾರ್ ಎಂ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎನ್.ಚಿನ್ನಸ್ವಾಮಿ ಸೋಸಲೆ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 14.10.09

ಸಂಶೋಧಕರ ಪ್ರಮಾಣ ಪತ್ರ

ಶಿವನಸಮುದ್ರ ಜಲವಿದ್ಯುತ್ ಯೋಜನೆ : ಚಾರಿತ್ರಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Sathishkumar.M

ಸ್ಥಳ : ವಿದ್ಯಾರಣ್ಯ

ದಿನಾಂಕ : 14/10/09

ಸತೀಶ್ ಕುಮಾರ್ ಎಂ.
ಸಂಶೋಧಕ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

೧೯೩೭ರ ಮೈಸೂರು ರಾಜ್ಯದ ವಿದ್ಯುತ್ ವಿತರಣಾ ನಕ್ಷೆ



ಕೃಪೆ : ಗಜಾನನ ಶರ್ಮ, ಬೆಳಕಾಯಿತು ಕರ್ನಾಟಕ, ಸಾಗರ, ೨೦೦೪

೧೯೪೭ರ ಮೈಸೂರು ರಾಜ್ಯದ ವಿದ್ಯುತ್ ವಿತರಣಾ ನಕ್ಷೆ



ಕೃಪೆ : ಗಜಾನನ ಶರ್ಮ, ಬೆಳಕಾಯಿತು ಕರ್ನಾಟಕ, ಸಾಗರ, ೨೦೦೪

ಅಧ್ಯಾಯ ೧

ಪ್ರವೇಶ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವಿಧಿ-ವಿಧಾನಗಳು ಮತ್ತು ವ್ಯಾಪ್ತಿ

೧.೩. ಚಾರಿತ್ರಿಕ ಹಿನ್ನೆಲೆ

೧

ಪ್ರವೇಶ

ಪ್ರವೇಶ

ಆಧುನಿಕ ಯುಗದಲ್ಲಿ ಇತಿಹಾಸದ ಕುರಿತು ನಡೆಯುವ ಅಧ್ಯಯನಗಳು ಹೊಸ ರೂಪವನ್ನು ಪಡೆದುಕೊಂಡಿವೆ. ಇತಿಹಾಸ ಕೇವಲ ವಂಶ ಪರಂಪರೆಯ ನೆನಪು ಮಾತ್ರವಾಗಿರದೆ ಈಗಾಗಲೇ ಆಗಿ ಹೋಗಿರಬಹುದಾದ ಅನೇಕ ಚಾರಿತ್ರಿಕ ಸಂಗತಿಗಳ ಕುರಿತು ಅಧ್ಯಯನಗಳಾಗಿ ಸಾಗಿ ಬಂದಿವೆ. ಪ್ರಸ್ತುತ ಈ ಅಧ್ಯಯನವೂ ಕೂಡಾ ಚಾರಿತ್ರಿಕ ಹಿನ್ನೆಲೆಯುಳ್ಳ ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದ್ದಾಗಿದೆ.

೧೯೦೦ರ ಸಂದರ್ಭದಲ್ಲಿ ಮೈಸೂರು ಅರಸರು ಬ್ರಿಟೀಷರ ಆಡಳಿತ ಉಸ್ತುವಾರಿಯಲ್ಲೇ ತಮ್ಮ ಅರಸು ಪರಂಪರೆಯನ್ನು ಪಡೆದರು. ಮೈಸೂರು ಭಾರತದ ಇತರ ರಾಜ್ಯಗಳಂತೆಯೇ ಬಹಳ ಹಿಂದುಳಿದಿತ್ತು. ೧೯೦೦ರ ಜನಗಣತಿಯಂತೆ ಮೈಸೂರು ರಾಜ್ಯದ ಜನಸಂಖ್ಯೆ ೫೫ಲಕ್ಷ ಮತ್ತು ರಾಜ್ಯದ ವರಮಾನ ೧ ಕೋಟಿ ೫೦ ಲಕ್ಷ ರೂಪಾಯಿಗಳು.[೧] ಕೋಲಾರದ ಚಿನ್ನದ ಗಣಿ ಮತ್ತು ಕೆಲವೊಂದು ಹತ್ತಿಗಿರಣಿಗಳನ್ನು ಬಿಟ್ಟರೆ ಹೇಳಿಕೊಳ್ಳುವಂತಹ ಕೈಗಾರಿಕೆಗಳು ಇರಲಿಲ್ಲ. ಮೈಸೂರು ರಾಜ್ಯವು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಸಂದರ್ಭವದು. ಹಳ್ಳಿಗಾಡಿನ ಜನರ ಬದುಕು ದುರ್ಬರವಾಗಿತ್ತು. ಬೇಸಾಯವೇ ಜನರ ಬದುಕಾಗಿತ್ತು. ಉತ್ತಮ ನೀರಾವರಿ ಸೌಲಭ್ಯಗಳಿರಲಿಲ್ಲ. ಈ ಸಂದರ್ಭದಲ್ಲಿ ಮೈಸೂರು ಅರಸರು ಜನರ ಬದುಕಿನ ಉನ್ನತೀಕರಣಕ್ಕೆ ಶ್ರಮಿಸತೊಡಗಿದರು.

ಅಲ್ಲಲ್ಲಿ ನದಿಗಳಿಗೆ ಸಣ್ಣ-ಸಣ್ಣ ಅಣೆಕಟ್ಟುಗಳನ್ನು ಕಟ್ಟಿ ಗ್ರಾಮೀಣ ಕೃಷಿಕರಿಗೆ ನೀರಿನ ಸೌಲಭ್ಯ ಕಲ್ಪಿಸಲು ಪ್ರಯತ್ನಿಸಲಾಗಿತ್ತು. ಮೈಸೂರು ರಾಜ್ಯವನ್ನು ಮುನ್ನಡೆಸುವ ಧೀರ ಸಂಕಲ್ಪದಿಂದ ಆಡಳಿತದಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಕತ್ತಲೆ ತುಂಬಿದ ಪ್ರಜೆಗಳ ಬದುಕಿಗೆ ಬೆಳಕು ತರಲು ಪ್ರಯತ್ನಿಸುವ ಕೆಲಸ ಈ ಸಂದರ್ಭದಲ್ಲಿ ಹೆಚ್ಚಾಗಿ ಕಂಡುಬಂದಿತು.

ಮೈಸೂರು ಅರಸರು ಭಾರತ ದೇಶಿಯ ರಾಜರುಗಳಲ್ಲಿ ಅತ್ಯಂತ ಪ್ರಗತಿಪರರೆನ್ನಿಸಿಕೊಳ್ಳುವ ಹಂತಕ್ಕೆ ತಲುಪಿದರು. ಅವರ ಈ ಪ್ರಯತ್ನಕ್ಕೆ ಸಹಕಾರಿಯಾಗಿ ನಾಡನ್ನು ಬೆಳಕಿನತ್ತ ಮುನ್ನಡೆಸಲು ಕೈ ಹಿಡಿದು ಸಾಗಿದವಳೇ ದಕ್ಷಿಣದ ಗಂಗೆ ಕಾವೇರಿ.

ವಿಸ್ತಾರವಾದ ಮೈಸೂರು ರಾಜ್ಯವು ಪ್ರಾಕೃತಿಕ ಸಂಪತ್ತುಗಳಿಂದ ಕೂಡಿತ್ತು. ನೆಲ, ಜಲ, ಚಿನ್ನ, ಕಬ್ಬಿಣ, ಖನಿಜಗಳ ಸಂಪತ್ತಿಗೆ ಕೊರತೆ ಇರಲಿಲ್ಲ. ಅದರಂತೆ ಕಾವೇರಿ ನದಿಯು ಮೈಸೂರು ರಾಜ್ಯಕ್ಕೆ ಜೀವ ನದಿಯಾಗಿತ್ತು. "ತಲಕಾವೇರಿ" ಎಂಬಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಸಿದ್ದಾಪುರದವರೆಗೂ ಹರಿದು ಅಲ್ಲಿಂದ ಉತ್ತರಾಭಿಮುಖವಾಗಿ ಮೈಸೂರು ರಾಜ್ಯವನ್ನು ಪ್ರವೇಶಿಸುತ್ತಿತ್ತು. ಮುಂದೆ ಶಿವನಸಮುದ್ರದಲ್ಲಿ(ಪ್ರಸ್ತುತ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು) ಕಾವೇರಿ ನದಿಯು ಇಬ್ಭಾಗವಾಗಿ ಈ ದ್ವೀಪವನ್ನು ನಿರ್ಮಿಸಿದೆ. ಈ ದ್ವೀಪದ ಉದ್ದವು ಸುಮಾರು ಮೂರು ಮೈಲಿ, ಅಗಲು ಸುಮಾರು ಮುಕ್ಕಾಲು ಮೈಲಿ, ಎರಡು ಜಲಪಾತಗಳು ಇದ್ದು ಅವುಗಳೆಂದರೆ ಗಗನಚುಕ್ಕಿ, ಭರಚುಕ್ಕಿ, ಗಗನ ಚುಕ್ಕಿಯು ಮೈಸೂರು ಪ್ರಾಂತ್ಯಕ್ಕೂ, ಭರಚುಕ್ಕಿ ಮದ್ರಾಸ್ ಪ್ರಾಂತ್ಯಕ್ಕೂ ಸೇರಿದ್ದವು. ಇವುಗಳ ಆಳ ೨೫೦ ಅಡಿಗಳೆಂದು ಅಂದಾಜು ಮಾಡಲಾಗಿತ್ತು.[೨] ತಲಕಾವೇರಿಯಿಂದ ಹಿಡಿದು ಜಲಪಾತದವರೆಗೆ ಒಟ್ಟು ೧೨ ಚಿಕ್ಕ ಅಣೆಕಟ್ಟೆಗಳನ್ನು ಅಂದಿನ ಕಾಲದಲ್ಲಿಯೇ ನಿರ್ಮಿಸಲಾಗಿತ್ತು.[೩] ಸಣ್ಣ-ಪುಟ್ಟ ನೀರಾವರಿ ಪ್ರಯೋಜನಕ್ಕಾಗಿ ಅರಸರು, ಪಾಳೆಯಗಾರರು ಕಾವೇರಿ ನದಿಗೆ ಈ ಅಣೆಕಟ್ಟುಗಳನ್ನು ಕಟ್ಟಿದರು.

ಈ ದ್ವೀಪದ ದಕ್ಷಿಣ ಭಾಗದಲ್ಲಿ ಹರಿಯುತ್ತಿದ್ದ ದಕ್ಷಿಣ ಕಾವೇರಿಗೆ ಅಡ್ಡವಾಗಿ ಕಟ್ಟಿದ "ಸತ್ಯಗಾಲ" ಸೇತುವೆಯು ದ್ವೀಪವನ್ನು ಅಂದಿನ ಮದ್ರಾಸ್ ಪ್ರಾಂತ್ಯಕ್ಕೆ ಸಂಪರ್ಕಿಸುತ್ತಿದ್ದರೆ ಉತ್ತರ ಭಾಗದಲ್ಲಿ ಹರಿಯುತ್ತಿದ್ದ ಉತ್ತರ ಕಾವೇರಿಗೆ ಕಟ್ಟಿದ "ಶಿವನಸಮುದ್ರ" ಸೇತುವೆಯು ದ್ವೀಪವನ್ನು ಮೈಸೂರು ಪ್ರಾಂತ್ಯಕ್ಕೆ ಸಂಪರ್ಕಿಸುತ್ತಿತ್ತು.[೪] ಶಿವನಸಮುದ್ರ ದ್ವೀಪವು ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಜಾಗೀರುದಾರರು (ನಾಲ್ವಡಿ ಕೃಷ್ಣರಾಜ ಒಡೆಯರ) ಪ್ರಾಪ್ತ ವಯಸ್ಕರಾಗಿಲ್ಲದ ಕಾರಣದಿಂದ ೧೯೦೦ರವರೆಗೆ ಇಡೀ ದ್ವೀಪ ಬ್ರಿಟೀಷರ ಒಡೆತನದಲ್ಲಿ ಮುಂದುವರೆದಿತ್ತು.

೧೮೯೦ರ ಹೊತ್ತಿಗಾಗಲೇ ಅಮೇರಿಕಾ ಮತ್ತು ಯೂರೋಪುಗಳಲ್ಲಿ ಜಲವಿದ್ಯುತ್ ಉತ್ಪಾದನೆಗೆ ಜಲಪಾತಗಳಿರುವ ಪ್ರದೇಶಗಳು ಸೂಕ್ತ ಮತ್ತು ಸುಲಭ ಮಾರ್ಗವೆಂದು ಮನವರಿಕೆಯಾದುದರಿಂದ ಎಲ್ಲೆಲ್ಲಿ ಜಲವಿದ್ಯುತ್ ಉತ್ಪಾದನೆಗೆ ಅವಕಾಶವಿದೆಯೆಂದು ತಜ್ಞರು ಹುಡುಕಾಟವನ್ನು ಪ್ರಾರಂಭಿಸಿದರು. ಮೈಸೂರು ರಾಜ್ಯದ ಗಗನಚುಕ್ಕಿ-ಭರಚುಕ್ಕಿ ಜಲಪಾತಗಳಲ್ಲಿನ ನೀರನ್ನು ಬಳಸಿ ವಿದ್ಯುತ್ತನ್ನು ಉತ್ಪಾದಿಸಬಹುದು.[೫] ಆ ಸಂದರ್ಭದಲ್ಲಿ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಅವಶ್ಯಕವಾವಾದ್ದರಿಂದ ಈ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ದಿವಾನ್ ಶೇಷಾದ್ರಿ ಅಯ್ಯರ್‌ರವರು ಶಿವನಸಮುದ್ರದಲ್ಲಿ ಜಲವಿದ್ಯುತ್ ಯೋಜನೆಗೆ ಉತ್ಸಾಹ ತೋರಿದರು.

೧.೧. ಅಧ್ಯಯನದ ಉದ್ದೇಶ

ಶಿವನಸಮುದ್ರ ಜಲವಿದ್ಯುತ್ ಯೋಜನೆ : ಚಾರಿತ್ರಿಕ ಅಧ್ಯಯನ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನದ ಉದ್ದೇಶವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

ಈ ಯೋಜನೆಯು ಮಹತ್ವ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ್ದರು ಸಹ ಇದನ್ನು ಕುರಿತು ನಡೆದಿರುವ ಅಧ್ಯಯನಗಳು ಕಡಿಮೆ. ಶಿವನಸಮುದ್ರ ಜಲವಿದ್ಯುತ್ ಯೋಜನೆ ಜಾರಿಗೆ ಬರಲು ಇದ್ದ ಕಾರಣ ಹಿನ್ನಲೆಗಳನ್ನು ತಿಳಿಸುವುದೇ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಈ ಯೋಜನೆ ಪ್ರಾರಂಭವಾದ ನಂತರ ಅದರ ಉಚ್ಛ್ರಾಯ ಕಾಲವನ್ನು ಹಂತ-ಹಂತವಾಗಿ ಅಧ್ಯಯನ ಮಾಡಿ, ಹಿಂದಿನ ಮತ್ತು ನಂತರದ ಸಾಧಕ-ಭಾದಕಗಳನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶಿವನಸಮುದ್ರ ಜಲವಿದ್ಯುತ್ ಯೋಜನೆಯಿಂದ ಬ್ರಿಟೀಷರಿಗೆ ಮತ್ತು ಮೈಸೂರು ಅರಸರಿಗಾದಂತಹ ಪ್ರಯೋಜನ, ಮೈಸೂರು ರಾಜ್ಯದ ಮೇಲಾದ ಪರಿಣಾಮಗಳ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಕೃಷಿ, ಕೈಗಾರಿಕೆ, ಆರ್ಥಿಕ ಮೂಲಗಳಿಗೆ ಈ ಯೋಜನೆ ಹೇಗೆ ಪೂರಕವಾಯಿತು ಎಂಬುದನ್ನು ಚರ್ಚಿಸಲಾಗಿದೆ. ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಪ್ರಗತಿ ಪರಿಶೀಲನೆ ಯೋಜನೆ ಪ್ರಾರಂಭವಾದಾಗಿನಿಂದ ಪ್ರಸ್ತುತ ಸಂದರ್ಭದವರೆಗೂ ಪ್ರಗತಿಯ ಏರಿಳಿತವನ್ನು ತಾರ್ಕಿಕವಾಗಿ ವಿವೇಚಿಸಲಾಗಿದೆ.

ಪ್ರಸ್ತುತ ಈ ಯೋಜನೆಯ ಪ್ರಯೋಜನ ಕರ್ನಾಟಕದಲ್ಲಿ ಎಷ್ಟರ ಮಟ್ಟಿಗೆ ಸಹಕಾರಿಯಾಗಿದೆ. ಹಿಂದಿನ ಮೈಸೂರು ರಾಜ್ಯದ, ಕೃಷಿ, ಕೈಗಾರಿಕೆಗಳು, ಪ್ರಮುಖ ನಗರಗಳ ಬೆಳವಣಿಗೆಗೆ, ಆರ್ಥಿಕತೆಯ ಮೂಲವಾಗಿ ರಾಜ್ಯವನ್ನು ಪ್ರಗತಿಯತ್ತ ಕೊಂಡೊಯ್ಯಲು ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಪಾತ್ರವನ್ನು ಪರಿಶೀಲಿಸಲಾಗಿದೆ.

೧.೨. ಅಧ್ಯಯನದ ವಿಧಿ-ವಿಧಾನಗಳು ಮತ್ತು ವ್ಯಾಪ್ತಿ

ಏಷ್ಯಾ ಖಂಡದಲ್ಲಿಯೇ ಭಾರತ ಪ್ರಪ್ರಥಮ ಜಲ ವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸಿದ ಕೀರ್ತಿಗೆ ಪಾತ್ರವಾಗಿದೆ. ಅದರಲ್ಲಿಯೂ ಇದು ಕರ್ನಾಟಕಕ್ಕೆ ಸಲ್ಲುತ್ತದೆ. ಪ್ರಸ್ತುತ ೧೦೭ ವರ್ಷ ಕಾಲಾವಧಿಯಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಪ್ರಮುಖ ಆಯಾಮಗಳನ್ನೊಳಗೊಂಡ ಚಾರಿತ್ರಿಕ ಹಿನ್ನೆಲೆ, ಇದರ ಅಭಿವೃದ್ಧಿ, ಇದರಿಂದ ಕೈಗಾರಿಕೆಗಳಿಗೆ ಉಂಟಾದ ಪ್ರಯೋಜನ ತಿಳಿಯುವುದು ಸಂಶೋಧನಾ ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿಯಾಗಿದೆ.

ಈ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಾಗೂ ಇತರ ಆಕರಗಳನ್ನು ಬಳಸಿ ಕೊಳ್ಳಲಾಗಿದೆ. ಶಿವನಸಮುದ್ರದಲ್ಲಿ ಕ್ಷೇತ್ರ ಕಾರ್ಯಕೈಗೊಂಡು ಆಕರಗಳ ಸಂಗ್ರಹ, ಛಾಯಾಚಿತ್ರ ಗಳನ್ನೊಳಗೊಂಡ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಲ್ಲಿರುವ ಮೂಲ ದಾಖಲೆಗಳು. ಪ್ರತಿವರ್ಷದ ವಿದ್ಯುತ್ ಇಲಾಖೆಯ ಆಯ-ವ್ಯಯ ಕಡತಗಳು, ಯೋಜನೆಗೆ ಪೂರಕವಾದ ಹಲವು

ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಮತ್ತು ರಾಜ್ಯ ಸರ್ಕಾರದ ಗ್ಯಾಸೆಟಿಯರ್‌ಗಳಲ್ಲಿ ದಾಖಲಾದ ಮಾಹಿತಿಗಳು, ಸರ್ಕಾರಿ ಮತ್ತು ಖಾಸಗಿ, ವಿಶ್ವವಿದ್ಯಾಲಯದ ಗ್ರಂಥಾಲಯಗಳಲ್ಲಿ ಲಭ್ಯವಿರುವ ಮಾಹಿತಿಗಳು, ವಿಶ್ವಕೋಶಗಳು, ಪತ್ರಿಕೆಗಳು, ನಿಯತಕಾಲಿಕೆಗಳು, ಸ್ಮರಣ ಸಂಚಿಕೆ, ವಿಶೇಷಾಂಕಗಳಲ್ಲಿ ಲಭಿಸಿದ ಹಲವು ಮಾಹಿತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನವು ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ಚರಿತ್ರೆಯ ಇತ್ಯಾದಿ ಅಂತರಶಿಸ್ತಿಗೆ ಸಂಬಂಧಿಸಿದ್ದಾಗಿದೆ. ಹೀಗೆ ಈ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ಚರಿತ್ರೆಯ ಶಿಸ್ತಿನ ವಿಧಿ-ವಿಧಾನಗಳ ಮೂಲಕ ಪರೀಕ್ಷಿಸಿ ವೈಜ್ಞಾನಿಕವಾಗಿ ವರ್ಗೀಕರಿಸಿಕೊಂಡು ವಿಶ್ಲೇಷಿಸಲಾಗಿದೆ. ಒಟ್ಟಾರೆ ಈ ಅಧ್ಯಯನಕ್ಕೆ ಸಮಾಜ ವಿಜ್ಞಾನ, ಚರಿತ್ರೆ ಸಂಶೋಧನಾ ವೈದಾನಿಕತೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಬರಹ-ಬಿಡಿ ಲೇಖನಗಳು, ಸಂಚಿಕೆಗಳು, ಪತ್ರಿಕೆಗಳು ಲಭ್ಯವಿದ್ದು, ಸಮಗ್ರ ದೃಷ್ಟಿಕೋನ ವಿಸ್ತೃತ ರೂಪದಲ್ಲಿ ನಡೆದಿರುವ ಅಧ್ಯಯನಗಳು ಕೆಲವು ಮಾತ್ರ ಅವುಗಳಲ್ಲಿ ಪ್ರಮುಖವಾದವು.

೧೯೩೦ರಲ್ಲಿ ಎಂ.ಗೋಪಾಲಕೃಷ್ಣಯ್ಯನವರು ಬರೆದ "HISTORY OF THE CAUVERY POWER SCHEME" ಎಂಬ ಗ್ರಂಥದಲ್ಲಿ ಶಿವನಸಮುದ್ರದಲ್ಲಿ ಕಾವೇರಿ ನದಿಯಿಂದ ವಿದ್ಯುತ್ ಉತ್ಪಾದಿಸಲು ನಡೆದ ಯೋಜನೆಯ ವಿವಿಧ ಆಯಾಮಗಳನ್ನು ಕುರಿತ ವಿವರಗಳನ್ನು ದಾಖಲಿಸಿದ್ದಾರೆ.

ಮತ್ತೊಂದು ಗ್ರಂಥವಾದ ಗಜಾನನ ಶರ್ಮರವರ "ಬೆಳಕಾಯಿತು ಕರ್ನಾಟಕ" ಗ್ರಂಥದಲ್ಲಿ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಬೆಳೆದು ಬಂದ ದಾರಿಯನ್ನು, ರಾಜ್ಯದಲ್ಲಿರುವ ವಿವಿಧ ವಿದ್ಯುತ್ ಯೋಜನೆಗಳ ಸಾಧಕ-ಬಾದಕ ಪ್ರಾಮುಖ್ಯತೆಗಳನ್ನು ವಿವರಿಸಿದ್ದಾರೆ.

ನಂತರ ೧೯೧೦ ರಿಂದ ೧೯೩೮ರವರೆಗೆ ವಿದ್ಯುತ್ ಇಲಾಖೆ ಪ್ರಕಟಿತ ವಾರ್ಷಿಕ ವರದಿಗಳು, ಆಯಾ ವರ್ಷದಲ್ಲಿನ ಆಯ-ವ್ಯಯ, ವಿದ್ಯುತ್ ಉತ್ಪಾದನೆ ಪೂರೈಕೆಗೆ ಸಂಬಂಧಿಸಿದ ಮಾಹಿತಿಗಳನ್ನು ಒಳಗೊಂಡಿದೆ. ಯೋಜನೆಯ ಆರಂಭ, ಪ್ರಸ್ತುತ ಸಂದರ್ಭದಲ್ಲಿನ ಸನ್ನಿವೇಶ, ಯೋಜನೆಯನ್ನು ಮುನ್ನಡೆಸಲು ಕಾರಣರಾದ ಪ್ರಮುಖ ವ್ಯಕ್ತಿಗಳು, ಯೋಜನೆಯಿಂದ ವಿದ್ಯುತ್ ಪಡೆದ ನಗರ, ಪಟ್ಟಣಗಳ ಅಧ್ಯಯನ, ಈ ಯೋಜನೆಗೆ ಸಿಕ್ಕ ಸೌಲಭ್ಯಗಳನ್ನೊಳಗೊಂಡ ಅಧ್ಯಯನ ಕೈಗೊಂಡು ಹೊಸದಾದ ಆಯಾಮಗಳನ್ನು ಗುರುತಿಸಿ ಕ್ರೂಢೀಕರಿಸಿ ಅಧ್ಯಯನ ಕ್ಷೇತ್ರಕ್ಕೆ ಕೊಡುಗೆಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ.

೧.೩. ಚಾರಿತ್ರಿಕ ಹಿನ್ನೆಲೆ

ಕರ್ನಾಟಕ ಇತಿಹಾಸದ ಆಧುನಿಕ ಕಾಲವು ಬ್ರಿಟೀಷರು ಮೈಸೂರನ್ನು ೧೭೯೯ರಲ್ಲಿ ಗೆದ್ದ ಕಾಲದಿಂದ ಆರಂಭವಾಯಿತು. ೧೮ನೇ ಶತಮಾನದ ಹೊತ್ತಿಗೆ, ಬ್ರಿಟೀಷರು ಭಾರತದಲ್ಲಿ ತಮ್ಮ ವ್ಯಾಪಾರ ವೃತ್ತಿಯನ್ನು ಬದಿಗೊತ್ತಿ, ಈ ದೇಶದ ಮೇಲಿನ ತಮ್ಮ ರಾಜಕೀಯ ಸಾರ್ವಭೌಮತೆಯನ್ನು ಬಹಿರಂಗವಾಗಿ ಪ್ರತಿಪಾದಿಸತೊಡಗಿದರು. ೧೭೯೯ರಲ್ಲಿ ನಡೆದ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಬ್ರಿಟೀಷರು ಪೂರ್ಣ ವಿಜಯಶಾಲಿಗಳಾಗಿ ಕರ್ನಾಟಕವನ್ನು ಸ್ವಾಧೀನಪಡಿಸಿಕೊಂಡು ರಾಜ್ಯವನ್ನು ಮರಾಠ ಮತ್ತು ನಿಜಾಮರ ಜೊತೆಗೂಡಿ ಹಂಚಿಕೊಂಡರು. ಉಳಿದ ಹಳೆಯ ಮೈಸೂರು ರಾಜ್ಯದ ಭಾಗವನ್ನು ಮೈಸೂರು ಒಡೆಯರಿಗೆ ಪುನಃ ಕೆಲವು ಷರತ್ತುಗಳನ್ವಯ ಅಧಿಕಾರ ನೀಡಲು ನಿರ್ಧರಿಸಿದರು.

ಅದರಂತೆ ೧೭೯೯ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನ ಆಡಳಿತವಹಿಸಿಕೊಂಡರು. ಆಗ ರಾಜನಿಗೆ ಕೇವಲ ಐದು ವರ್ಷ ವಯಸ್ಸು ಹೈದರ್ ಮತ್ತು ಟಿಪ್ಪು ಇವರಿಬ್ಬರ ಆಸ್ಥಾನದಲ್ಲಿ ದಿವಾನರಾಗಿದ್ದ ಪೂರ್ಣಯ್ಯನವರನ್ನು ದಿವಾನ್ ರೀಜೆಂಟ್ ಎಂದು ನೇಮಿಸಲಾಯಿತು. ರೆಸಿಡೆಂಟನಾಗಿ ಬ್ಯಾರಿಕ್ಲೋಸ್, ಮೈಸೂರಿನ ಅಧೀನ ಸೇನೆಯ ಸೇನಾಧಿಪತಿಯಾಗಿ ಆರ್ಥರ್ ವೆಲ್ಲೆಸ್ಲಿ ಅಧಿಕಾರ ವಹಿಸಿಕೊಂಡರು. ಆ ಸಂದರ್ಭದಲ್ಲಿ ಮುಖ್ಯವಾಗಿ ಆಡಳಿತ ಸುಧಾರಣೆ, ಮಿಲಿಟರಿ ಮತ್ತು ಕಂದಾಯ ಸುಧಾರಣೆಗಳಿಗೆ ಒತ್ತು ನೀಡಲಾಯಿತು.

೧೮೧೬ ಮತ್ತು ೧೮೨೩ರಲ್ಲಿ ಸಂಭವಿಸಿದ ಭೀಕರ ಕ್ಷಾಮ ಪರಿಣಾಮ ರಾಜ್ಯದ ಬೊಕ್ಕಸದಿಂದ ಅಪಾರ ಹಣ ವ್ಯಯವಾಯಿತು. ಆರ್ಥಿಕ ವಿಷಯವಾಗಿ ರೆಸಿಡೆಂಟರು ಅಸಮಾಧಾನಗೊಂಡು ರಾಜ್ಯದ ಆಡಳಿತ ಹದಗೆಡುತ್ತಿದೆಯೆಂದು ಗೌರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಕ್‌ನಿಗೆ ವರದಿ ಮಾಡಿದರು. ರಾಜ್ಯದಲ್ಲಿ ೧೮೩೦ರ ಹೊತ್ತಿಗೆ ಅಲ್ಲಲ್ಲಿ ದಂಗೆಗಳುಂಟಾದವು. ಅವುಗಳಲ್ಲಿ ಮುಖ್ಯವಾದದ್ದು "ನಗರದಂಗೆ" ಈ ಎಲ್ಲಾ ಘಟನೆಗಳಿಂದ ಬ್ರಿಟೀಷರ ದೃಷ್ಟಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಆಡಳಿತದಲ್ಲಿ ಅಸಮರ್ಥರೆಂದು ಪರಿಗಣಿತರಾದರು.[೬] ನಂತರ ಅವರನ್ನು ಆಡಳಿತದಿಂದ ಪದಚ್ಯುತಿಗೊಳಿಸಿ, ಅಕ್ಟೋಬರ್ ೧೯, ೧೮೩೧ರಲ್ಲಿ ಮೈಸೂರು ರಾಜ್ಯವನ್ನು ಬ್ರಿಟೀಷರು ತಮ್ಮ ನೇರ ಆಡಳಿತಕ್ಕೆ ಒಳಪಡಿಸಿಕೊಂಡರು. ಮೈಸೂರು ರಾಜ್ಯದ ಆಡಳಿತದ ಉಸ್ತುವಾರಿ ನಿರ್ವಹಿಸಲು ಕಮೀಷನರುಗಳನ್ನು ನೇಮಕ ಮಾಡಲಾಯಿತು. ಹೀಗೆ ೧೮೩೧ ರಿಂದ ೧೮೮೧ರವರೆಗಿನ ೫೦ ವರ್ಷಗಳ ಕಾಲ ರಾಜ್ಯಾಡಳಿತವು ಬ್ರಿಟೀಷ್ ಕಮೀಷನರುಗಳ ಆಡಳಿತಕ್ಕೆ ಒಳಪಟ್ಟಿತು.

ಮೈಸೂರನ್ನು ಆಳಿದ ಕಮೀಷನರ್‌ಗಳು

೧. ಕರ್ನಲ್ ಬ್ರಿಗ್ಸ್	೧೮೩೧-೩೨
೨. ಲೆಫ್ಟಿನಂಟ್ ಕರ್ನಲ್ ಮಾರಿಸನ್	೧೮೩೨-೩೪

೩. ಕರ್ನಲ್ ಮಾರ್ಕ್ ಕಬ್ಬನ್ ೧೮೩೪-೬೧

೪. ಲೂಯಿ ಬೆನ್ಥಾಮ್ ಬೌರಿಂಗ್ ೧೮೬೨-೭೦

೫. ಕರ್ನಲ್ ರಿಚರ್ಡ್ ಮೀಡ್ ೧೮೭೦-೭೫

೬. ಸಿ.ಬಿ.ಸ್ಯಾಂಡರ್ಸ್ ೧೮೭೫-೭೮

೭. ಜೆ.ಬಿ.ಗೋರ್ಡನ್ ೧೮೭೮-೮೧

ಮೈಸೂರನ್ನು ಆಳಿದ ಕಮೀಷನರ್‌ಗಳಲ್ಲಿ ಮಾರ್ಕ್‌ಕಬ್ಬನ್, ಬೌರಿಂಗ್ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯ ಗಮನಾರ್ಹ ಪ್ರಗತಿಯನ್ನು ಸಾಧಿಸಿತು. ಆಡಳಿತದಲ್ಲಿ ಸುಧಾರಣೆ, ಹೊಸ ಕಂದಾಯ ವ್ಯವಸ್ಥೆ ಆಡಳಿತವನ್ನು ವಿವಿಧ ಇಲಾಖೆಗಳಾಗಿ ವಿಂಗಡಿಸಲಾಯಿತು. ಲಾರ್ಡ್ ಡಾಲ್ ಹೌಸಿ ೧೮೫೫ರಲ್ಲಿ ಮೈಸೂರಿಗೆ ಬೇಟಿ ಕೊಟ್ಟ ನಂತರ ನ್ಯಾಯಾಂಗ, ಸಾರ್ವಜನಿಕ, ಶಿಕ್ಷಣ ಇಲಾಖೆಗಳಲ್ಲಿ ಬದಲಾವಣೆ ಕಂಡವು.[೭] ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ೪ ವಿಭಾಗಗಳನ್ನಾಗಿ ವಿಂಗಡಿಸಿದರು. ಅವುಗಳೆಂದರೆ ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ (ಮೈಸೂರು) ಮತ್ತು ಬಿದನೂರು ವಿಭಾಗಗಳು, ಆಗ ರಾಜ್ಯದಲ್ಲಿ ೧೨೦ ತಾಲ್ಲೂಕುಗಳಿದ್ದವು. ವಿವಿಧ ಇಲಾಖೆಗಳಿಗೆ ಆಡಳಿತಗಾರರನ್ನು ನೇಮಕ ಮಾಡಲಾಯಿತು. ಅವರೆಂದರೆ

ತಾಲ್ಲೂಕು ಅಧಿಕಾರಿ - ಅಮಲ್ದಾರ

ಹೋಬಳಿ ಆಡಳಿತಗಾರ - ಷೇಕ್‌ದಾರ

ಕಂದಾಯ ಮುಖ್ಯಾಧಿಕಾರಿ - ಹೆಡ್ ಶಿರಸ್ತೇದಾರ ಎಂದು ಕರೆಯಲಾಗುತ್ತಿತ್ತು. ಅಠಾರ ಕಛೇರಿಯನ್ನು ಸಂಕ್ಷಿಪ್ತಗೊಳಿಸಿ ವಿವಿಧ ಇಲಾಖೆಗಳನ್ನಾಗಿ ರಚಿಸಲಾಯಿತು. ಅವುಗಳಲ್ಲಿ ಮುಖ್ಯವಾಗಿ ಸಾರಿಗೆ ಸಂಪರ್ಕ (ರಸ್ತೆ, ರೈಲ್ವೆ, ದೂರವಾಣಿ), ಅಂಚೆ ವ್ಯವಸ್ಥೆ, ಕಂದಾಯ ಇಲಾಖೆ ಮುಂತಾದವುಗಳು. ಇಲಾಖೆಗಳಿಗೆ ಮುಖ್ಯಸ್ಥರ ಅಧೀನದಲ್ಲಿ ವಿವಿಧ ವರ್ಗದ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ನೂತನ ಆಡಳಿತ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ದಕ್ಷತೆಯನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡು ವ್ಯಾಪಕವಾದ ಆಡಳಿತ ಸುಧಾರಣೆಗಳನ್ನು ಮಾಡಿದರು. ಕಮೀಷನರ್ ಆಳ್ವಿಕೆಯ ಸಂದರ್ಭದಲ್ಲಿ ಭಾರತೀಯವಾಗಿದ್ದ ಆಡಳಿತ ವ್ಯವಸ್ಥೆಯು ಪಾಶ್ಚಿಮಾತ್ಯ ಮಾದರಿಗೆ ನಿಧಾನವಾಗಿ ಬದಲಾವಣೆಯನ್ನು ಪಡೆಯತೊಡಗಿತು, ಭಾರತದ ವಸಾಹತುವಿನಲ್ಲಿ (ಕೇಂದ್ರ) ನಿರ್ದೇಶಿಸಿದ ಬದಲಾವಣೆಗಳೆಲ್ಲಾ ಇಲ್ಲೂ ನಿರ್ದೇಶಿತವಾದವು.[೮] ಒಟ್ಟಾರೆ ರಾಜ್ಯವು ವ್ಯವಸ್ಥಿತ ಕಾನೂನುಗಳ ಅಡಿಯಲ್ಲಿ ಆಡಳಿತ ನಡೆಸುವುದು ಸಾಧ್ಯವಾಗಿತ್ತು.

೧೮೫೮ರ ನಂತರ ಬ್ರಿಟೀಷ್ ರಾಣಿಯು ಭಾರತದ ಜನರ ಆಶೋತ್ತರಗಳಿಗೆ ಬ್ರಿಟೀಷರು ಹೆಚ್ಚು ವಿರುದ್ಧವಾದ ನೀತಿಯನ್ನು ಅನುಸರಿಸಬಾರದು ಎಂಬ ಕ್ರಮದನ್ವಯ ಮೈಸೂರು ರಾಜ್ಯವನ್ನು ಹಿಂದಕ್ಕೆ ಪಡೆಯುವ ಪ್ರಯತ್ನ ನಡೆದು ಚಾಮರಾಜೇಂದ್ರನೆಂಬ ಎರಡು ವರ್ಷದ ಮಗುವನ್ನು ದತ್ತು ಪಡೆಯಲಾಯಿತು.

ಬ್ರಿಟೀಷರ ನಡುವಿನ ಮಾತುಕತೆಯ ನಂತರ ೧೮೬೭ರಲ್ಲಿ ಚಾಮರಾಜೇಂದ್ರನಿಗೆ ೧೮ ವರ್ಷದ ನಂತರ ಅಧಿಕಾರವನ್ನು ಹಸ್ತಾಂತರಿಸುವ ನಿರ್ಧಾರ ಕೈಗೊಳ್ಳಲಾಯಿತು.

೧೮೭೬ ರಿಂದ ೭೮ ರವರೆಗೆ ಇಡೀ ರಾಜ್ಯದಲ್ಲಿ ಭೀಕರ ಬರಗಾಲ ತಲೆದೋರಿ ರಾಜ್ಯವು ತೀವ್ರ ಆರ್ಥಿಕ ಸಂಕಷ್ಟವನ್ನು ಅನುಭವಿಸುವಂತೆ ಮಾಡಿತು. ಈ ಬರಗಾಲವು ರಾಜ್ಯಕ್ಕೆ ಸುಮಾರು ೧೬೦ ಲಕ್ಷ ರೂಪಾಯಿಗಳ ನಷ್ಟವನ್ನು, ಸರ್ಕಾರಕ್ಕೆ ೮೦ ಲಕ್ಷ ರೂಪಾಯಿಗಳ ಸಾಲವನ್ನು ತಂದೊಡ್ಡಿತು.[೯] ಇದು ರಾಜ್ಯದ ಆರ್ಥಿಕ ಸ್ಥಿತಿಯನ್ನು ಮುಂದಿನ ಹಲವು ವರ್ಷಗಳ ಕಾಲದವರೆಗೂ ಮೇಲೇಳದಷ್ಟು ದುರಾವಸ್ಥೆಗೆ ದೂಡಿತು. ಈ ಬರಗಾಲದ ಪರಿಣಾಮವು ೫೦ ವರ್ಷಗಳಲ್ಲಿ ಬ್ರಿಟೀಷರು ಆಡಳಿತ ನಡೆಸಿದ ಪ್ರಗತಿಯನ್ನೆಲ್ಲ ಶೂನ್ಯವಾಗಿಸಿ ಅಧಿಕಾರ ಹಸ್ತಾಂತರದ ನಂತರದ ದಿನಗಳಲ್ಲಿ ಈ ಪ್ರಗತಿಯ ಉಚಿತ ಪ್ರತಿಫಲವು ರಾಜ್ಯಕ್ಕೆ ದಕ್ಕದಂತೆ ಮಾಡಿತು.[೧೦]

೧೮೮೧ ನೇ ಮಾರ್ಚ್ ತಿಂಗಳಿನಲ್ಲಿ ಹತ್ತನೆಯ ಚಾಮರಾಜ ಒಡೆಯರ್‌ರವರು ೧೮ ವರ್ಷ ತುಂಬಿದ ಪ್ರಯುಕ್ತ ಹಿಂದಿನ ಬ್ರಿಟೀಷರೊಡನೆ ಆದ ಒಪ್ಪಂದದಂತೆ ರಾಜ್ಯಾಧಿಕಾರವನ್ನು ವಹಿಸಿಕೊಂಡರು ಆ ಸಂದರ್ಭದಲ್ಲಿ ಸಿ.ರಂಗಾಚಾರ್ಲುರವರನ್ನು ದಿವಾನರನ್ನಾಗಿ ಮತ್ತು ಜೆ.ಡಿ.ಗೋರ್ಡನ್‌ರವರನ್ನು ಬ್ರಿಟೀಷ್ ರೆಸಿಡೆಂಟರನ್ನಾಗಿ ನೇಮಕ ಮಾಡಲಾಯಿತು. ಈ ಸಂದರ್ಭದಲ್ಲಿ ರಾಜ್ಯದಲ್ಲಿ ಕ್ಷಾಮ ಉಂಟಾಗಿ ಆರ್ಥಿಕವಾಗಿ ಹಿಂದುಳಿದಿತ್ತು. ಹಿಂದಿನ ಕಮೀಷನರ್ ಆಳ್ವಿಕೆಯವಧಿಯಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ಪುನರ್ ನಿರ್ಮಿಸುವ ಕೆಲಸ ಚಾಮರಾಜ ಒಡೆಯರ್ ಮತ್ತು ದಿವಾನರ ಪ್ರಮುಖ ಜವಾಬ್ದಾರಿಯಾಗಿತ್ತು.

ಹತ್ತನೇ ಚಾಮರಾಜ ಒಡೆಯರ್‌ರವರು, ದಿವಾನ ಸಿ. ರಂಗಚಾರ್ಲುರ ಸಲಹೆಯಂತೆ ಆಡಳಿತದಲ್ಲಿ ಪ್ರಜೆಗಳು ಪಾಲ್ಗೊಳ್ಳುವಂತಾಗಲು ೧೮೮೧ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಇದರ ಮುಖ್ಯ ಉದ್ದೇಶ ಆಡಳಿತಕ್ಕೆ ಪೂರಕವಾಗಿ ಪ್ರಜಾಭಿಪ್ರಾಯ ತಿಳಿದುಕೊಳ್ಳುವುದು. ಇದರಲ್ಲಿ ರೈತರು, ವರ್ತಕರು, ಜನಸಾಮಾನ್ಯರು ಭಾಗವಹಿಸುವಂತೆ ಮಾಡುವುದು. ಈ ಸಭೆಯಿಂದ ಸರಕಾರಕ್ಕೆ ಅನೇಕ ಉಪಯುಕ್ತ ವಿಷಯಗಳು ತಿಳಿದುಬಂದವು. ಹಾಗೆ ಪ್ರಜಾಪ್ರಮುಖರು, ಸರಕಾರವು ಪದೇ ಪದೇ ಕಲೆತು ವಿಚಾರ ವಿನಿಮಯ ಮಾಡಿಕೊಳ್ಳುವುದರಿಂದ ರಾಜ್ಯಕ್ಕೆ ಲಾಭವುಂಟೆಂದು, ಸರಕಾರಕ್ಕೂ ಪ್ರಜೆಗೂ ಇರುವ ದೂರವು ಕ್ರಮೇಣ ತೊಲಗಿ ಹೋಗಿ ಸರಕಾರವೂ, ಪ್ರಜೆಯೂ ಒಂದೇ ಜೀವನದ ಎರಡು ಅನ್ಯೋನ್ಯ ಸಹಕಾರಿಗಳಾದ ಆವಯವ ಮಾತ್ರಗಳೆಂಬ ಭಾವನೆ ಬೆಳೆದು ಬಲಪಡುವುದೆಂದೂ ಹೇಳಿ, ಆ ಕಾರಣದಿಂದ ಪ್ರಜಾಪ್ರತಿನಿಧಿ ಸಭೆಯೆಂಬುದು ಪ್ರತಿವರ್ಷಕ್ಕೊಮ್ಮೆ ಸೇರತಕ್ಕದೆಂದು ರಂಗಾಚಾರ್ಯರು ಸರಕಾರದ ಹುಕುಂ ಹೊರಡಿಸಿದರು.[೧೧] ಇದಕ್ಕೆ ಬ್ರಿಟೀಷರ ವಿರೋಧವು ಇತ್ತು. ನಂತರ ಈ ಸಭೆ ತನ್ನ ಕಾರ್ಯವನ್ನು ನಿರೀಕ್ಷಿಸಿದಂತೆ ನಡೆಸಿಕೊಂಡು ಪ್ರಗತಿ ಹೊಂದಿತು.

ರಂಗಾಚಾರ್ಲುರವರು ಆಡಳಿತದಲ್ಲಿ ಹಲವು ಸುಧಾರಣೆಯನ್ನು ತಂದು ಹಣಕಾಸಿನ ಸ್ಥಿತಿ ಉತ್ತಮ ಪಡಿಸಿದರು. ೧೮೮೧ರಲ್ಲಿ ಜಾನ್‌ಟೇಲರ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಕೋಲಾರದಲ್ಲಿ ಚಿನ್ನದ ಗಣಿ ಉದ್ಯಮ ನಡೆಸಲು ಅನುಮತಿ ನೀಡಲಾಯಿತು. ಇದರಿಂದ ರಾಜ್ಯಾದಾಯವು ಹೆಚ್ಚಿತು. ೧೮೮೨ರಲ್ಲಿ ಬೆಂಗಳೂರು-ಮೈಸೂರು ನಡುವೆ ರೈಲು ಮಾರ್ಗ ಆರಂಭಿಸಿದರು. ಆರ್ಥಿಕವಾಗಿ ಮುನ್ನಡೆಯಲು ರಾಜ್ಯದ ವಿವಿಧೆಡೆ ಬಟ್ಟೆ ಕಾರ್ಖಾನೆಗಳನ್ನು ಯಂತ್ರ ಸಾಧನಗಳನ್ನು ಬಳಸಿ ಸ್ಥಾಪನೆ ಮಾಡಬೇಕೆಂಬುದು ಅವರ ಉದ್ದೇಶವಾಗಿತ್ತು. ಇಲ್ಲಿ ರಂಗಾಚಾರ್ಲುರವರ ಮುಂದಾಲೋಚನೆಯ ಬಗ್ಗೆ ತಿಳಿಯಬಹುದಾಗಿದೆ.

೧೮೮೩ರಲ್ಲಿ ರಂಗಾಚಾರ್ಲುರ ನಿಧನಾನಂತರ ದಿವಾನರಾಗಿ ಕೆ.ಶೇಷಾದ್ರಿ ಅಯ್ಯರ್‌ರವರು ಆಡಳಿತ ವಹಿಸಿಕೊಂಡರು. ಇವರ ಆಡಳಿತಾವಧಿಯಲ್ಲಿ ರೈಲ್ವೆ ಅಭಿವೃದ್ಧಿ, ಕೋಲಾರದ ಚಿನ್ನದ ಗಣಿಗೆ ರೈಲು ಮಾರ್ಗ ೧೮೯೪ರಲ್ಲಿ ತಾಲ್ಲೂಕು ಮಂಡಳಿಗಳು ಸ್ಥಾಪಿತವಾದವು. "ಮೈಸೂರು ಸಿವಿಲ್ ಸರ್ವಿಸ್ " ಎಂಬ ಸ್ಪರ್ಧಾತ್ಮಕ ಪರೀಕ್ಷೆಯನ್ನು ಜಾರಿಗೆ ತಂದರು. ಆ ವೇಳೆಗೆ ಕೈಗಾರಿಕೆಗಳು ಪ್ರಾರಂಭವಾದವು.

ಸಂಸ್ಥಾನದ ಹತ್ತು ಹಲವು ಇಲಾಖೆಗಳಲ್ಲಿ ಸುಧಾರಣೆ ಮತ್ತು ಪ್ರಗತಿಪರ ಕಾರ್ಯ ವ್ಯವಸ್ಥೆ ಜಾರಿಗೊಳಿಸುವ ಮೂಲಕ ಅವರು ಇಡೀ ರಾಜ್ಯದಲ್ಲಿ ಒಂದು ರೀತಿಯ ಅಭಿವೃದ್ಧಿಯ ಹೊಸ ಶಕೆಯನ್ನು ಆರಂಭಿಸಿದರು.[೧೨] ದಿವಾನರಾದ ಸಿ.ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್‌ರವರ ಸಹಾಯದಿಂದ ಸರ್ವಕ್ಷೇತ್ರಗಳಲ್ಲೂ ಪ್ರಗತಿ ಸಾಧಿಸಿ ಮೈಸೂರನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿದರು.[೧೩] ೧೮೯೪ರಲ್ಲಿ ಚಾಮರಾಜ ಒಡೆಯರ್ ನಿಧನಾನಂತರ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಅಧಿಕಾರಕ್ಕೆ ಬಂದರು. ಪ್ರಾಪ್ತವಯಸ್ಕನಾಗದ ಕಾರಣ ತಾಯಿ ವಾಣಿವಿಲಾಸ ಸನ್ನಿಧಾನದ ರೀಜೆಂಟ್ ಆಗಿ, ದಿವಾನರು ಮತ್ತು ಕೌನ್ಸಿಲ್‌ರ ಸಹಾಯದಿಂದ ಆಡಳಿತ ಮುಂದುವರೆಸಿದರು.

ಈ ಸಂದರ್ಭದಲ್ಲಿ ದಿವಾನ್ ಶೇಷಾದ್ರಿ ಅಯ್ಯರ್ ರವರು ಆಧುನಿಕತೆಯ ಮಹತ್ವ, ವಿಚಾರಗಳನ್ನು ತಿಳಿದುಕೊಂಡಿದ್ದರು. ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಮುಂದಾದರು. ಅವರ ಪ್ರಗತಿಪರ ಚಿಂತನೆಯ ಪ್ರತಿಫಲವೇ ಶಿವನಸಮುದ್ರ ಜಲವಿದ್ಯುತ್ ಯೋಜನೆಯು ಸಹ ಒಂದು. ಜಲವಿದ್ಯುತ್ ಎನ್ನುವ ವಸ್ತು ವಿಷಯ ಆಗ ತಾನೇ ಇಡೀ ವಿಶ್ವಕ್ಕೆ ಪರಿಚಿತವಾಗಿತ್ತು. ಜಲದ ಸಹಾಯದಿಂದ ವಿದ್ಯುತ್ ಉತ್ಪಾದಿಸಿ ಕೈಗಾರಿಕೆ ಮತ್ತು ಗಣಿಗಳಲ್ಲಿನ ಯಂತ್ರೋಪಕರಣಗಳನ್ನು ಚಾಲನೆಗೊಳಿಸಲು ಬಳಸಬಹುದಾಗಿತ್ತು. ಈ ಯೋಜನೆ ವೆಚ್ಚ ಅಧಿಕವಾಗಿದ್ದರೂ ಇದರಿಂದ ಹೆಚ್ಚಿನ ತೆರಿಗೆಯನ್ನು ಪಡೆದು ಆರ್ಥಿಕವಾಗಿ ಪ್ರಗತಿಯನ್ನು ಸಾಧಿಸಬಹುದಾಗಿತ್ತು.

ಪ್ರಥಮ ಬಾರಿಗೆ ಜಲವಿದ್ಯುತ್ ಯೋಜನೆಗಳು ಅಮೇರಿಕಾ ಮತ್ತು ಯೂರೋಪುಗಳಲ್ಲಿ ಬೆಳವಣಿಗೆ ಹೊಂದುತ್ತಿರುವ ಸಂದರ್ಭ, ಇದರ ಮಹತ್ವವನ್ನು ಶೇಷಾದ್ರಿ ಅಯ್ಯರ್‌ರವರು ತಿಳಿದರು.[೧೪] ಜಲದಿಂದ

ವಿದ್ಯುತ್ತನ್ನು ಉತ್ಪಾದಿಸುವ ಕಾರ್ಯ ಮೊದಲಿಗೆ ಆರಂಭವಾದದ್ದು ಅಮೇರಿಕಾದ ಆಪಲ್ ಟನ್ನಿನ ವಿಸ್ ಕಾನ್ಸಿನ್ ಎಂಬಲ್ಲಿ ಪ್ರಪಂಚದ ಮೊಟ್ಟಮೊದಲ ಜಲವಿದ್ಯುದಾಗರ ಎಡಿಸನ್ನರ ಬೈಪೋಲಾ ಜನರೇಟರನ್ನು ಬಳಸಿಕೊಂಡು ಕಾರ್ಯಾರಂಭ ಮಾಡಿತು.[೧೫] ಜಲವಿದ್ಯುದಾಗರಗಳ ಚರಿತ್ರೆಯ ಮೊದಲ ಪುಟ ಇಲ್ಲಿಂದ ಪ್ರಾರಂಭವಾಯಿತು. ಇಲ್ಲಿ ನಯಾಗರನದಿಯ ನೀರನ್ನು ಬಳಸಿಕೊಂಡು ವಾಣಿಜ್ಯೋದ್ಯಮಿ ಜಾಕೋಜ ಶೋಲ್ ಕಾಫ್ ಎಂಬುವವರು ೨೦೦ ಕಿ.ವ್ಯಾ. ಸಾಮರ್ಥ್ಯದ ವಿದ್ಯುತ್ ಘಟಕವನ್ನು ೧೮೮೧ರಲ್ಲಿ ಸ್ಥಾಪಿಸಿದರು. ಮುಂದೆ ೧೮೮೫ರಲ್ಲಿ ಕೆನಡಾದ ಕ್ವಿಬೆಕ್ ಬಳಿಯ ಮಾಂಟೋ ಮರೆನ್ಸಿ ಜಲಪಾತದ ಬಳಿ ಇನ್ನೊಂದು ವಿದ್ಯುದಾಗರ ಕಾರ್ಯಾರಂಭ ಮಾಡಿತು.

ಆ ವೇಳೆಗಾಗಲೇ ಉತ್ಪಾದಿಸಿದ ವಿದ್ಯುತ್ತನ್ನು ಶೇಖರಣೆ ಮಾಡಲು ಟ್ರಾನ್ಸ್‌ಫಾರ್ಮರ್‌ಗಳನ್ನು, ವಿದ್ಯುತ್ ಉತ್ಪಾದನೆ ಮತ್ತು ಪೂರೈಸುವ ಸಾಧನಗಳ ತಯಾರಿಕೆಯಲ್ಲಿ ೧೮೯೧ರ ಹೊತ್ತಿಗೆ ಅಮೇರಿಕಾದ ಎರಡು ಪ್ರತಿಷ್ಠಿತ ಕಂಪನಿಗಳು ಪೈಪೋಟಿಯಲ್ಲಿದ್ದವು. ಅವುಗಳೆಂದರೆ ಜನರಲ್ ಎಲೆಕ್ಟ್ರಿಕಲ್ಸ್ ಮತ್ತೊಂದು ಜಾರ್ಜ್‌ವೆಸ್ಟಿಂಗ್ ಹೌಸ್ ಕಂಪನಿ, ಯೂರೋಪಿನಲ್ಲಿ ಅರ್ಲಿಕಾನ್, ಬ್ರೌನ್ ಬೋವೆರಿ ಕಂಪನಿಗಳು ವಿದ್ಯುತ್ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ್ದವು. ಪಶ್ಚಿಮ ದೇಶದ ಈ ಬೆಳವಣಿಗೆ ಬಹುಬೇಗ ಭಾರತಕ್ಕೂ ಕಾಲಿಟ್ಟವು ಬೇರೆಲ್ಲ ಸಂಶೋಧನೆಯ ಫಲಗಳಿಗಿಂತ ವಿದ್ಯುತ್ ಬಹಳ ಬೇಗ ಭಾರತಕ್ಕೆ ಬಂದಿತು.

ಭಾರತದಲ್ಲಿ ಇದರ ಪ್ರಯತ್ನ ನಡೆದದ್ದು ಪ್ರಸ್ತುತ ಕರ್ನಾಟಕದಲ್ಲಿರುವ ಆಗ ದಕ್ಷಿಣ ಮರಾಠ ಪ್ರಾಂತ್ಯದಲ್ಲಿದ್ದ ಗೋಕಾಕ್‌ನಲ್ಲಿ ಧುಮುಕುವ ನೀರಿನ ಶಕ್ತಿಯನ್ನು ಭಾರತದಲ್ಲಿ ಬಳಕೆಗೆ ತಂದ ಪ್ರಥಮ ಸ್ಥಳ.[೧೬] ಈ ಪ್ರದೇಶದ ಸುತ್ತಮುತ್ತಲು ಹತ್ತಿಗಿರಣಿಗಳು ಹೆಚ್ಚಾಗಿದ್ದ ಕಾರಣ. ಯಂತ್ರ ಚಾಲನೆಗೆ ಮಾತ್ರ ೧೮೮೭ರಲ್ಲಿ ೨೫೦ ಹೆಚ್.ಪಿ.ಗಿರಾರ್ಡ್ ಟರ್ಬೈನ್‌ಗಳನ್ನು ಸ್ಥಾಪಿಸಲಾಯಿತು. ಇದು ಅಂತಹ ಉತ್ಕೃಷ್ಟ ವ್ಯವಸ್ಥೆ ಆಗಿರದಿದ್ದರೂ ಭಾರತದಲ್ಲಿ ನೀರಿನ ಶಕ್ತಿಯನ್ನು ಬಳಸಿದ ಪ್ರಪ್ರಥಮ ಪ್ರಯೋಗವಾಗಿತ್ತು.

ನಂತರ ಮದ್ರಾಸ್ ಪ್ರಾಂತ್ಯದ ಪೆರಿಯಾರ್ ಲೇಕ್ ಬಳಿ ವಿದ್ಯುತ್ ಪ್ರಸರಣದಲ್ಲಿ ಪರಿಣಿತರಾಗಿದ್ದ ಪ್ರೊ.ಪೋರ್ಬ್ಸ್ ನೇತೃತ್ವದಲ್ಲಿ ವಿದ್ಯುತ್ ಉತ್ಪಾದಿಸಿ ಅದನ್ನು ಮದ್ರಾಸಿಗೆ ಅಂದರೆ ಸುಮಾರು ೩೫೦ ಮೈಲುಗಳ ದೂರ ಪ್ರಸರಣ ಮಾಡುವ ಪ್ರಸ್ತಾಪಗೊಂಡು ಕಾರ್ಯರೂಪಕ್ಕೆ ಬರಲಿಲ್ಲ.[೧೭] ಆದರೆ ಭಾರತದಲ್ಲಿ ವಿದ್ಯುಚ್ಛಕ್ತಿಯನ್ನು ಮೊಟ್ಟ ಮೊದಲ ಬಾರಿಗೆ ಉತ್ಪಾದಿಸಿದ ಕೀರ್ತಿ ೧೮೯೭ರಲ್ಲಿ ಜಿ.ಡಬ್ಲ್ಯೂ. ಮಿಯರ್ಸ್‌ರವರು ಡಾರ್ಜಿಲಿಂಗ್ ಪುರಸಭೆಗಾಗಿ ನಿರ್ಮಿಸಿದ ಡಾರ್ಜಿಲಿಂಗ್ ಜಲವಿದ್ಯುತ್ ಯೋಜನೆಗೆ ಸಲ್ಲುತ್ತದೆ.[೧೮] ೧೮೯೭ರಲ್ಲಿ ಡಾರ್ಜಿಲಿಂಗ್ ವಿದ್ಯುತ್ ಸ್ಥಾವರ ಸ್ಥಾಪನೆಯಾಗುತ್ತಿದ್ದಂತೆ ಭಾರತ ಸರ್ಕಾರ ವಿದ್ಯುತ್ ನಿಯಂತ್ರಣಕ್ಕಾಗಿ ಭಾರತೀಯ ವಿದ್ಯುಚ್ಛಕ್ತಿ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದಿತು.[೧೯] ಆದರೆ ಸ್ಥಿರವಾದ ಜಲವಿದ್ಯುತ್ ಯೋಜನೆಯೊಂದನ್ನು ಪ್ರಾರಂಭಿಸುವ ಯತ್ನ ಮಾಡಿದವರು ಮಾತ್ರ ಮೈಸೂರು ಸಂಸ್ಥಾನದವರು.

ಮೈಸೂರು ಸಂಸ್ಥಾನದಲ್ಲಿ ಜಲವಿದ್ಯುತ್ ಯೋಜನೆ ಆರಂಭಿಸಲು ಮೈಸೂರಿನ ಅರಸರು, ದಿವಾನರು, ಬ್ರಿಟೀಷ್ ಅಧಿಕಾರಿಗಳು ೧೮೯೦ ರಿಂದ ಸತತ ಶ್ರಮವಹಿಸಿದರು. ಶಿವನಸಮುದ್ರ ಜಲ ವಿದ್ಯುತ್ ಯೋಜನೆ ಸ್ಥಾಪನೆಗೆ ಮುನ್ನ ಅನೇಕ ಪ್ರಶ್ನೆಗಳು ಉದ್ಭವಿಸಿದವು ಮತ್ತು ಚರ್ಚೆಗೆ ಒಳಪಟ್ಟವು.

ಈ ರೀತಿಯ ಯೋಜನೆಗಳು ಭಾರತದ ಇತರೆಡೆಗಳಲ್ಲಿ ಅಷ್ಟು ಪ್ರಚಲಿತವಾಗದೇ ಇರುವ ಸಂದರ್ಭದಲ್ಲಿ ಈ ಯೋಜನೆಯನ್ನು ಮೈಸೂರಿನಲ್ಲಿ ಆರಂಭಿಸಲು ರೀಜೆಂಟ್‌ರ ಆಳ್ವಿಕೆಯಲ್ಲಿ ನಿರ್ಧರಿಸಿದ್ದು ಜನರಿಗೆ ಆಶ್ಚರ್ಯವಾಗಿತ್ತು. ಸರಕಾರ ಇದನ್ನು ಹೇಗೆ ಕೈಗೊಂಡು ಯಶಸ್ವಿಯಾಗುತ್ತದೆ ಎಂಬುದು ಜನಸಾಮಾನ್ಯರಿಗೆ ಕುತೂಹಲವಾಗಿತ್ತು. ಯೋಜನೆ ಸ್ಥಾಪನೆಗೂ ಮುನ್ನ ಮೈಸೂರು ಸರಕಾರಕ್ಕೆ ಮತ್ತು ಜನ ಸಾಮಾನ್ಯರಿಗೆ ಹಲವು ಮೂಲಭೂತ ಪ್ರಶ್ನೆಗಳು ಉದ್ಭವಿಸಿದವು ಅವುಗಳೆಂದರೆ,

ನೂರಾರು ಆನೆ ಬಲದ ವಿದ್ಯುತ್ ಶಕ್ತಿ ಈ ಚಿಕ್ಕ ತಂತಿಯಲ್ಲಿ ಹೇಗೆ ಸಾಗುತ್ತವೆ. ಆದರೂ ಇಂಥಾ ಅದ್ಭುತ ಕಾರ್ಯ ಅಮೇರಿಕಾದಲ್ಲಿ ಹ್ಯಾಗೋ ಹಾಗೆ ನಮ್ಮ ದೇಶದಲ್ಲಿ ನೆರವೇರಿಸಲ್ಪಡುತ್ತಿದೆ, ಇಂಥಾ ವಿಚಿತ್ರವಾದ ಕಾರ್ಖಾನೆಯನ್ನು ಸ್ಥಾಪಿಸುವುದರಲ್ಲಿ ನಮ್ಮ ಇಂಜಿನಿಯರುಗಳು ಸಮರ್ಥರಲ್ಲ.[20]

ಮೈಸೂರಿನ ಆ ಸಂದರ್ಭದಲ್ಲಿ ತಾಂತ್ರಿಕ ಶಿಕ್ಷಣದ ಕೊರತೆಯ ಪರಿಣಾಮ ಸಮರ್ಥ ಇಂಜಿನಿಯರ್‌ಗಳು ಇಲ್ಲಿ ಇಲ್ಲದೇ ಇರುವುದು, ಈ ಯೋಜನೆಯು ಕಾರ್ಯರೂಪಕ್ಕೆ ಬರಲು ಹೇಗೆ ತಾನೇ ಸಾಧ್ಯವೆಂಬುದಾಗಿತ್ತು. ನಂತರದ ಬಹುಮುಖ್ಯ ಪ್ರಶ್ನೆಯೆಂದರೆ ಕಾವೇರಿ ನದೀ ಪಾತ್ರದಲ್ಲಿ ಸರ್ವದಾ ನೀರು ಇರುತ್ತದೆಯೇ ಅದರಲ್ಲಿ ವಿದ್ಯುಚ್ಚಕ್ತಿಯನ್ನು ವರ್ಷವೆಲ್ಲಾ ಉತ್ಪತ್ತಿ ಮಾಡುವಷ್ಟು ರಭಸವಾಗಿ ನೀರು ಧುಮುಕುತ್ತಿರುವುದೇ.[21] ಇಲ್ಲಿ ನದಿಯ ನೀರು ವಿವಿಧ ಕಾಲಗಳ ಅವಧಿಯಲ್ಲಿ ಹರವಿನಿಲ್ಲಿ ಬದಲಾವಣೆಗಳು ಸಹಜವಾಗಿ ಕಂಡುಬರುತ್ತಿದ್ದವು. ಅಲ್ಲದೇ ಇದೇ ನೀರನ್ನು ಅವಲಂಬಿಸಿ ಕೃಷಿ ಸಾಗುವಳೀ ಮಾಡುವ ರೈತರಿಗೆ ಗೊಂದಲ ಮೂಡಿತ್ತು. ಯೋಜನೆ ಪ್ರಾರಂಭವಾದರೆ ಹೊಳೆಯ ನೀರನ್ನು ಕೃಷಿ ಸಾಗುವಳಿಗೆ ಬಳಸಲ್ಪಡುವುದನ್ನು ನಿಷೇಧಿಸಬಹುದೆಂಬ ಆಂತಕ ರೈತರಲ್ಲಿ ಮೂಡಿತ್ತು. ಮತ್ತೊಂದು ಪ್ರಶ್ನೆಯೆಂದರೆ

ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಯೇನೋ ಆದರೆ ಈ ಶಕ್ತಿಯನ್ನು ಪ್ರಯೋಗ ಮಾಡುವುದು ಎಲ್ಲಿ? ಅದರಿಂದ ಫಲವನ್ನು ಹ್ಯಾಗೆ ಹೊಂದುವುದು ಎಂಬುವುದು.[22] ಆಗ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳು ಹೆಚ್ಚು ಇರಲಿಲ್ಲ. ಉತ್ಪಾದನೆಯಾದ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುವ ಅವಕಾಶವಿದ್ದದ್ದು ೧೮೮೧ರಲ್ಲಿ ಸ್ಥಾಪನೆಯಾದ ಕೋಲಾರದ ಚಿನ್ನದ ಗಣಿಗೆ ಮಾತ್ರ ಸಾಧ್ಯವಾಗಿತ್ತು.[23]

ಆದರೇ ಅವರು ವಿದ್ಯುತ್ತನ್ನು ಬಳಸುತ್ತಾರೋ ಇಲ್ಲವೋ ಎಂಬ ಅನುಮಾನ. ಈ ರೀತಿಯ ಗೊಂದಲದ ನಡುವೆಯೂ ವಿದ್ಯುಚ್ಛಕ್ತಿಯನ್ನು ಕೋಲಾರದ ಚಿನ್ನದ ಗಣಿಗೆ ನೀಡಿದರೂ ಅದು ನಿರಂತರವಾಗಿ ವಿದ್ಯುತ್ತನ್ನು ಖರೀದಿಸುವುದೇ, ಏಕೆಂದರೆ ಭೂಮಿಯಲ್ಲಿ ಚಿನ್ನವು ನಿರಂತರವಾಗಿ ಸಿಗುತ್ತದೆ ಎಂಬುದನ್ನು

ಹೇಳಲಾಗುವುದಿಲ್ಲ. ಗಣಿಗಾರಿಕೆ ನಿಂತರೆ ವಿದ್ಯುಚ್ಛಕ್ತಿಯನ್ನು ಯಾವ ಕೆಲಸಕ್ಕೆ ಪ್ರಯೋಗಿಸುವುದು ಎಂಬ ಇತ್ಯಾದಿ ಪ್ರಶ್ನೆಗಳು ತಲೆದೋರಿದವು. ಈ ಯೋಜನೆಯ ಅವಶ್ಯಕತೆ, ಅದರ ಬಗೆಗಿನ ಮಾಹಿತಿಗಳು ಮತ್ತು ಇದರಿಂದ ಆಗಬಹುದಾದ ಲಾಭ-ನಷ್ಟಗಳನ್ನು ತಿಳಿಯುವುದು ಅತ್ಯಾವಶ್ಯಕವಾಗಿತ್ತು.

ಈ ಯೋಜನೆಯ ಸಾಧ್ಯಾಸಾಧ್ಯತೆ ಬಗ್ಗೆ ಎಚ್ಚರಿಕೆ ಮತ್ತು ಗಮನವಹಿಸಬೇಕಾದ ಸಂದರ್ಭವದು. ಜಲವಿದ್ಯುತ್ ಯೋಜನೆಯ ಆರಂಭದಿಂದ ಹಲವು ಲಾಭಗಳಿದ್ದರೂ ಇದನ್ನು ಹೇಗೆ ಕಾರ್ಯಗತಗೊಳಿಸುವುದು, ಯೋಜನೆಗೆ ಸಂಬಂಧಿಸಿದಂತೆ ವಿದ್ಯುತ್ ಮತ್ತು ತಂತ್ರಜ್ಞಾನದಲ್ಲಿ ಪರಿಣಿತಿ ಹೊಂದಿರುವವರು ನಮ್ಮ ರಾಜ್ಯದಲ್ಲಿ ಇಲ್ಲ. ಅಮೇರಿಕಾ ಮತ್ತು ಯೂರೋಪುಗಳಲ್ಲಿ ತಾಂತ್ರಿಕ ಪರಿಣಿತರು ಲಭ್ಯವಿದ್ದು, ಅವರನ್ನು ಕರೆತಂದು ಜವಾಬ್ದಾರಿವಹಿಸಿ ಈ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವ ಒತ್ತಡದಲ್ಲಿ ಮೈಸೂರು ಸರಕಾರವಿತ್ತು.[೨೪] ಆದ ಕಾರಣ ಈ ಯೋಜನೆಯ ಆರಂಭದಲ್ಲಿ ಸರಕಾರ ಮತ್ತು ಜನ ಸಾಮಾನ್ಯರ ನಿರೀಕ್ಷಿತ ಮಟ್ಟದಲ್ಲಿ ಕಾರ್ಯಗತಗೊಳ್ಳುವ ಪ್ರತಿಷ್ಠೆಯ ವಿಚಾರವಾಗಿತ್ತು.

ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಆರಂಭದಿಂದ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಹೊಂದುವ ಜೊತೆಗೆ ರಾಜ್ಯಕ್ಕೆ ಹೆಚ್ಚಿನ ರಾಜ್ಯಾದಾಯ ತರುವುದು ಅಲ್ಲದೇ ಈ ಯೋಜನೆಯಿಂದ ತಂತ್ರಜ್ಞಾನ, ಕೈಗಾರಿಕೆಗಳು ಅಭಿವೃದ್ಧಿ ಸಾಧಿಸಬಹುದಾಗಿತ್ತು. ಯೋಜನೆಯನ್ನು ಆರಂಭಿಸಿ ವ್ಯರ್ಥವಾದರೆ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದು, ಇದರಿಂದ ನೆರೆ-ಹೊರೆಯ ಸಂಸ್ಥಾನದವರೊಂದಿಗೆ ಮುಜುಗರ ಅವಮಾನಕ್ಕೆ ಒಳಗಾಗಿ, ಈ ಯೋಜನೆಯಿಂದ ಪ್ರತಿಫಲ ಸಿಗುವುದೋ ಇಲ್ಲವೊ ಎಂಬುದಾಗಿತ್ತು.

ಯಾವುದೇ ಒಂದು ಉದ್ದೇಶಿತ ಯೋಜನೆಗಳು ಕಾರ್ಯರೂಪಕ್ಕೆ ಬರಲು ಅದರ ಪೂರ್ವಾಪರ ಚಿಂತನೆಗಳು ಬಹು ಮುಖ್ಯ. ಈ ಎಲ್ಲಾ ವಿಷಯಗಳ ಹಿನ್ನೆಲೆಯಾಗಿ ಚಿಂತಿಸಿ ಯೋಜನೆ ಪ್ರಾರಂಭಗೊಳಿಸಲು ಶ್ರಮಿಸಿದವರಲ್ಲಿ ಮೈಸೂರಿನ ಅರಸರು, ಬ್ರಿಟೀಷ್ ರೆಸಿಡೆಂಟನು, ಅಧಿಕಾರಿಗಳು, ದಿವಾನರ ಪಾತ್ರವು ಪ್ರಮುಖವಾಗಿ ಯೋಜನೆ ಆರಂಭ ಮತ್ತು ನಂತರ ಕಾಲಾವಧಿಯಲ್ಲಿ ಹೆಚ್ಚಾಗಿದ್ದವು.[೨೫]

ಈ ನಿಟ್ಟಿನಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಮೈಸೂರಿನ ರೀಜೆಂಟ್ ರಾಣಿ, ಅರಸರ ಪ್ರೋತ್ಸಾಹ, ಧೈರ್ಯ, ದಿವಾನರ ಚಿಂತನೆ, ಸಮಯೋಚಿತ್ತ ವರ್ತನೆ, ರೆಸಿಡೆಂಟನ, ಬ್ರಿಟೀಷ್ ಅಧಿಕಾರಿಗಳ ಕಾರ್ಯಪ್ರವೃತ್ತಿಗಳು ಯೋಜನೆಗೆ ಯಶಸ್ಸಿನ ಮೆಟ್ಟಿಲಾಗಿ ಮೈಸೂರು ಸಂಸ್ಥಾನದಲ್ಲಿ ವಿದ್ಯುತ್ ಇತಿಹಾಸದ ಪುಟವನ್ನು ಪ್ರಾರಂಭಿಸಿದರು. ೧೮೯೯ರ ನಂತರವೇ ಕಾವೇರಿ ನದಿಯ ಶಿವನಸಮುದ್ರ ಜಲಪಾತಗಳ ಬದಿಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಚಿಂತಿಸಿದರು. ಅಲ್ಲದೇ ಇಲ್ಲಿಂದ ಕೋಲಾರಕ್ಕೂ ಪ್ರಮುಖ ನಗರಗಳ ಸಂಪರ್ಕ ಸುಲಭವಾಗುವ ಹಿನ್ನೆಲೆಯಲ್ಲಿ ಶಿವನಸಮುದ್ರದಲ್ಲಿ ಜಲವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ಇದರ ಸ್ಥಾಪನೆಗೆ ಕಾರಣಕರ್ತರು, ಅವರ ಶ್ರಮ,

ವಿದ್ಯುತ್‌ಪೂರೈಕೆ ಪಡೆದ ಪ್ರದೇಶಗಳ ಅಭಿವೃದ್ಧಿ ನೆಲೆಯ ಅಧ್ಯಯನಗಳನ್ನು ಸೀಮಿತ ಅವಧಿಯಲ್ಲಿ ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

೧. ಗಜಾನನ ಶರ್ಮ, ಬೆಳಕಾಯಿತು ಕರ್ನಾಟಕ, ೨೦೦೩, ಪು.೨೬

೨. ಗೋಪಾಲಕೃಷ್ಣಯ್ಯ ಎಂ., **ಹಿಸ್ಟರ್ ಆಫ್ ದಿ ಕಾವೇರಿ ಪವರ್ ಸ್ಕೀಮ್,** ೧೯೩೧, ಪು.೫

೩. ಅದೇ, ಪು.೬

೪. ಅದೇ

೫. ಅದೇ, ಪು.೭

೬. ನಂಜರಾಜ ಅರಸು ಪಿ.ವಿ ಮತ್ತು ಚಂದ್ರರಾಜ ಅರಸು ಎಸ್.ಆರ್., **ನಾಲ್ವಡಿ ಕೃಷ್ಣ ರಾಜ ಒಡೆಯರ್: ಒಂದು ದರ್ಶನ,** ೧೯೯೬, ಪು೧೩

೭. ಬರಗೂರು ರಾಮಚಂದ್ರಪ್ಪ(ಸಂ), **ಕರ್ನಾಟಕ ಸಂಗಾತಿ,** ೨೦೦೨, ಪು.೧೦೮

೮. ಅದೇ

೯. ವಿಶ್ವೇಶ್ವರಯ್ಯ ಎಂ., (ಕನ್ನಡಕ್ಕೆ) ಗಜಾನನ ಶರ್ಮ, **ನನ್ನ ವೃತ್ತಿ ಜೀವನದ ನೆನಪುಗಳು,** ೨೦೦೫, ಪು.೬೯

೧೦. ಅದೇ

೧೧. ಗುಂಡಪ್ಪ ಡಿ.ವಿ., **ಮೈಸೂರು ದಿವಾನರುಗಳು,** ೧೯೭೧, ಪು.೨೧

೧೨. ಅದೇ, ಪು.೨೨

೧೩. ನಂಜರಾಜ ಅರಸು ಪಿ.ವಿ, ಮತ್ತು ಚಂದ್ರರಾಜ ಅರಸು, **ಪೂರ್ವೋಕ್ತ,** ಪು.೧೮

೧೪. ಗುಂಡಪ್ಪ ಡಿ.ವಿ., **ಪೂರ್ವೋಕ್ತ,** ಪು.೩೮

೧೫. ಗಜಾನನ ಶರ್ಮ, **ಬೆಳಕಾಯಿತು ಕರ್ನಾಟಕ,** ೨೦೦೩, ಪು.೧೫

೧೬. ಅದೇ, ಪು.೨೧

೧೭. ಗೋಪಾಕೃಷ್ಣಯ್ಯ ಎಂ., **ಪೂರ್ವೋಕ್ತ,** ಪು.೧೦

೧೮. ಗಜಾನನ ಶರ್ಮ, **ಬೆಳಕಾಯಿತು ಕರ್ನಾಟಕ,** ೨೦೦೩, ಪು.೨೧

೧೯. ಅದೇ, ಪು.೨೩

೨೦. ವೃತ್ತಾಂತ ದಿನ ಪತ್ರಿಕೆ, ೧೦ ಜುಲೈ ೧೯೦೨, ಪು.೪

೨೧. ಅದೇ

೨೨. ಅದೇ

೨೩. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೭

೨೪. ಅದೇ, ಪು.೧೪

೨೫. ಲಕ್ಷ್ಮಣ ತೆಲಗಾವಿ(ಸಂ), ಸದಾಶಿವ ಕೆ., ಚರಿತ್ರೆ ಅಧ್ಯಯನ, ಸಂ.೧, ಸಂಚಿಕೆ ೨, ೨೦೦೬, ಪು.೧೯

ಅಧ್ಯಾಯ ೨

ಸ್ವಾತಂತ್ರ್ಯಪೂರ್ವದಲ್ಲಿ ಯೋಜನೆ

೨.೧. ಬ್ರಿಟೀಷ್‌ರು ಹಾಗೂ ಯೋಜನೆ

೨.೨. ಮೊಟ್ಟಮೊದಲು ಕಾವೇರಿ ನದಿ ನೀರು ಬಳಸಿ ವಿದ್ಯುತ್ ಉತ್ಪಾದಿಸುವ ಪ್ರಸ್ತಾಪ

೨.೩. ವಿದ್ಯುತ್ ಖರೀದಿಸಲು ಕೋಲಾರದೊಡನೆ ಮಾತುಕತೆ

೨.೪. ಎ.ಸಿ.ಜೆ.ಲಾಬಿನೀರ್ ಜಲವಿದ್ಯುದಾಗರಗಳ ಅಧ್ಯಯನಕ್ಕೆ ವಿದೇಶ ಪ್ರವಾಸ

೨.೫. ಯೋಜನೆಯ ಪ್ರಾರಂಭಕ್ಕೆ ಟೆಂಡರ್ ಪ್ರಕ್ರಿಯೆ

೨.೬. ಮೈಸೂರು ಸರ್ಕಾರ ಮತ್ತು ಕೆ.ಜಿ.ಎಫ್.ನೊಡನೆ ಅಗತ್ಯ ವಿದ್ಯುತ್ ಖರೀದಿ ಒಪ್ಪಂದ

೨.೭. ಯೋಜನೆಗೆ ಸಂಬಂಧಿಸಿದಂತೆ ಮೈಸೂರು ಮತ್ತು ಮದ್ರಾಸ್ ಸರ್ಕಾರಗಳ ನಡುವೆ ಒಪ್ಪಂದ

೨

ಸ್ವಾತಂತ್ರ್ಯ ಪೂರ್ವದಲ್ಲಿ ಯೋಜನೆ

೧೯ ಮತ್ತು ೨೦ನೇ ಶತಮಾನಗಳ ಅವಧಿಯಲ್ಲಿ ಮೈಸೂರು ಸಂಸ್ಥಾನವು ಹಲವಾರು ಪ್ರಗತಿಪರ ಯೋಜನೆಗಳನ್ನು ಆಧುನಿಕ ಕಾಲದ ಒತ್ತಡ ಸನ್ನಿವೇಶಗಳಿಗೆ ತಕ್ಕಂತೆ ಕೈಗೊಳ್ಳುವುದರಲ್ಲಿ ತನ್ನನ್ನು ತೊಡಗಿಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಕಲ್ಪನಾಶಕ್ತಿ ದೂರದರ್ಶಿತ್ವ ಹೊಂದಿದ್ದ ದೇಶಿ ಹಾಗೂ ವಿದೇಶಿ ಅಧಿಕಾರಿಗಳು, ಸಾಹಸ ಉದ್ಯಮಶೀಲರು, ಉನ್ನತ ಅಧಿಕಾರ ಕೇಂದ್ರಗಳು, ಪ್ರಗತಿಪರ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರನಿರ್ವಹಿಸುತ್ತಾರೆ.[೧] ಮೈಸೂರು ಸಂಸ್ಥಾನವು ಕೈಗೊಂಡ ಇಂತಹ ಹಲವಾರು ಯೋಜನೆಗಳಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆ ಕೂಡ ಒಂದು.

ಬ್ರಿಟೀಷ್ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಸಾಮಂತ ಹಾಗೂ ಅಧೀನ ದೇಶೀಯ ಸಂಸ್ಥಾನವಾಗಿದ್ದ ಮೈಸೂರು, ೧೯೦೨ರಲ್ಲೇ ಕಾವೇರಿ ಜಲವಿದ್ಯುತ್ ಯೋಜನೆ ಸ್ಥಾಪಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ತನ್ನನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಿತು.

ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಆರಂಭದ ಪ್ರಸ್ತಾಪ ೧೮೯೪ರಿಂದ ೧೯೦೨ರ ಅವಧಿಯಲ್ಲಿ ಎಲ್ಲ ರೀತಿಯ ಅಡೆತಡೆಗಳನ್ನು ದಾಟಿ ಕಾರ್ಯಾರಂಭ ಮಾಡಿತು. ೧೯೩೭-೩೮ರ ಅವಧಿಯಲ್ಲಿ ಯೋಜನೆಯು ಬೃಹದಾಕಾರವಾಗಿ ಬೆಳೆದು ಅದರ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ಆ ವೇಳೆಗಾಗಲೇ ಹಲವು ನಗರ, ಪಟ್ಟಣ, ಗ್ರಾಮಗಳು ವಿವಿಧ ಉದ್ದೇಶಗಳಿಗೆ ವಿದ್ಯುತ್ ಸೌಲಭ್ಯವನ್ನು ಬಳಸಿಕೊಂಡಿದ್ದವು. ನಂತರದ ಕಾಲಘಟ್ಟದಲ್ಲಿ ವಿದ್ಯುತ್ ಅತ್ಯಾವಶ್ಯಕವೆಂದು ಎಲ್ಲರಿಗೂ ಮನವರಿಕೆಯಾಗಿತ್ತು. ಹಾಲಿ ಇರುವ ವಿದ್ಯುತ್ ಮಾರ್ಗಗಳಿಗೆ ವಿದ್ಯುತ್ ಪೂರೈಕೆ ನಿರ್ವಹಣೆ ಮಾಡಲಾಗದ ಪರಿಸ್ಥಿತಿ ಮೈಸೂರು ರಾಜ್ಯದಲ್ಲಿ ಆ ವೇಳೆಗಾಗಲೇ ವಿದ್ಯುತ್ ಅಭಾವವನ್ನು ಎದುರಿಸುತ್ತಿದ್ದ ಸಂದರ್ಭ. ಹೊಸ-ಹೊಸ ಯೋಜನೆಗಳ ಪ್ರಾರಂಭದ ಬಗ್ಗೆ ಚರ್ಚೆಗಳು ನಡೆಯುತ್ತಿದ್ದವು.

ಶಿವನಸಮುದ್ರ ಯೋಜನೆಯ ಆರಂಭದಿಂದ ಉಚ್ಛ್ರಾಯ ಕಾಲದವರೆಗೆ ಎಲ್ಲವೂ ಸ್ವಾತಂತ್ರ್ಯ ಪೂರ್ವದ ಸಂದರ್ಭವಾಗಿದ್ದು ಮೈಸೂರು ಸಂಸ್ಥಾನದ ಆರ್ಥಿಕ, ಸಾಮಾಜಿಕ, ಸ್ಥಿತಿಗತಿಗಳ ಮೇಲೆ ಅಪಾರ ಪರಿಣಾಮ ಬೀರಿರುವುದನ್ನು ಮನಗಾಣಬಹುದು.

೨.೧. ಬ್ರಿಟೀಷರು ಹಾಗೂ ಯೋಜನೆ

ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಬ್ರಿಟೀಷರು ಇಲ್ಲಿ ನೆಲೆಸಿದ ತಮ್ಮ ಅಧಿಕಾರಿಗಳು, ಸೈನಿಕರು ಮತ್ತು ಅವರ ಕುಟುಂಬವರ್ಗದವರಿಗೆ ಆಧುನಿಕ ಜಗತ್ತಿನ ಹಲವಾರು ತಾಂತ್ರಿಕ ಸೌಲಭ್ಯಗಳನ್ನು ಬಳಕೆಗೆ ತಂದರು. ರೈಲ್ವೆ, ಟೆಲಿಗ್ರಾಫ್, ಅಂಚೆ ಮುಂತಾದ ಆಧುನಿಕ ಸೌಲಭ್ಯಗಳನ್ನು ಬಳಕೆಗೆ ತರಲು ಕಾರಣ ಸಮುದಾಯದ ಹಿತಕ್ಕಿಂತ ತಮ್ಮವರ ಅನುಕೂಲ ಬಹುಮುಖ್ಯವಾಗಿತ್ತು. ಬ್ರಿಟೀಷರು ತಮ್ಮ ಸ್ವಾರ್ಥಕ್ಕಾಗಿ ಈ ಸೌಲಭ್ಯಗಳನ್ನು ಬಳಕೆಗೆ ತಂದದ್ದು ಎಷ್ಟು ಸತ್ಯವೋ, ಅದರಿಂದ ಭಾರತೀಯ ಸಮಾಜಕ್ಕಾದ ಅನುಕೂಲಗಳು ಅಷ್ಟೇ ಸತ್ಯ.[೨] ಉದ್ದೇಶ ಸ್ವಾರ್ಥವಾದರೂ ಉಪಯೋಗ ಸಾರ್ವತ್ರಿಕವಾಗಿ, ಅದು ಜನಸಮುದಾಯದ ಒಳಿತಿಗೆ ಬಳಕೆಯಾದದ್ದು ಸತ್ಯಸಂಗತಿ.

ಈ ನಡುವೆ ವಿದೇಶಗಳಲ್ಲಿ ನಡೆದಿದ್ದ ವಿದ್ಯುತ್ ಕ್ಷೇತ್ರದ ಬೆಳವಣಿಗೆಗಳು ಮತ್ತು ಆ ಕಾರಣದಿಂದ ಉಂಟಾದ ಸರ್ವತೋಮುಖ ಅಭಿವೃದ್ಧಿ ಭಾರತದ ಆಳರಸರಾಗಿದ್ದ ಬ್ರಿಟೀಷರ ಗಮನವನ್ನು ಸೆಳೆಯಿತು. ತಮ್ಮ ಮತ್ತು ತಮ್ಮವರ ಲಾಭಕ್ಕಾಗಿ ಎಲ್ಲೆಲ್ಲಿ ಸುಲಭವಾಗಿ ವಿದ್ಯುತ್ ಉತ್ಪತ್ತಿ ಮಾಡಬಹುದು ಎನ್ನುವ ಕುರಿತು ಬ್ರಿಟೀಷರಿಂದ ಹುಡುಕಾಟ ಪ್ರಾರಂಭವಾಗಿತ್ತು.

ಶಿವನಸಮುದ್ರದ ಜಲವಿದ್ಯುತ್ ಯೋಜನೆಯು ರೂಪುಗೊಂಡು ಕಾರ್ಯರೂಪಕ್ಕೆ ಬಂದದ್ದು ೧೮೯೪ ರಿಂದ ೧೯೦೨ರ ಈ ಅವಧಿಯು ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ವಿಶಿಷ್ಟ ಕಾಲಘಟ್ಟ. ಈ ಕಾಲಾವಧಿ “ರೀಜೆಂಟ್” ಆಳ್ವಿಕೆಯ ಕಾಲವೆಂದು ಕರೆಯಲ್ಪಟ್ಟಿದೆ.[೪] ಮಹಾರಾಜರ ಅನುಪಸ್ಥಿತಿಯಲ್ಲಿ ರೂಪುಗೊಂಡ ಅರೆಕಾಲಿಕ ವ್ಯವಸ್ಥೆ ಅದಾಗಿದ್ದು, ಬ್ರಿಟೀಷ್ ವಸಾಹತು ವ್ಯವಸ್ಥೆಯ ಅಪರೋಕ್ಷ ಆಳ್ವಿಕೆಯ ನಿಯಂತ್ರಣ ಹೆಚ್ಚಾಗೇ ಇದ್ದ ಕಾಲವಾಗಿತ್ತು. ಬಾಲಕ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಬ್ರಿಟೀಷ್ ಸರ್ಕಾರದಿಂದ ಅಧಿಕೃತವಾಗಿ ಅಧಿಕಾರ ಪಡೆಯಲು ೧೯೦೨ರವರೆಗೆ ಕಾಯಬೇಕಿದ್ದ ಸಂದಿಗ್ಧ ಕಾಲ. ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ವಿರೋಧಿಸಲಾಗದಂತಹ ಕಾಲ. ಒಟ್ಟಾರೆ ಮೈಸೂರು ಸಂಸ್ಥಾನವು ಬ್ರಿಟೀಷ್ ವಸಾಹತು ವ್ಯವಸ್ಥೆಯ ಒಂದು ಭಾಗವಾಗಿತ್ತು. ಅಲ್ಲಿ ಬ್ರಿಟೀಷ್ ರೆಸಿಡೆಂಟ್ ವಸಾಹತು ವ್ಯವಸ್ಥೆಯ ಸಂಕೇತವಾಗಿದ್ದು, ವಸಾಹತು ವ್ಯವಸ್ಥೆಯ ಹಿತಸಕ್ತಿಗಳನ್ನು (ಬ್ರಿಟೀಷ್ ಸಾಮ್ರಾಜ್ಯ ಮಾತ್ರವಲ್ಲ, ವ್ಯಕ್ತಿಗಳನ್ನೊಳಗೊಂಡಂತೆ) ರಕ್ಷಿಸುತ್ತ ಅದಕ್ಕೆ ತಕ್ಕಂತೆ ರೀಜೆಂಟರಿಗೆ/ಮಹಾರಾಜರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಆ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ವಿವಿಧ ಇಲಾಖೆಯಲ್ಲಿ ಬ್ರಿಟೀಷರು ಪ್ರಮುಖ ಹುದ್ದೆಗಳಲ್ಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು.

ದೇಶಿಯ ಸಂಸ್ಥಾನದ ರಾಜರುಗಳನ್ನು ತಮ್ಮ ಹಿತಾಸಕ್ತಿಗೆ ಕಾಲ ಹಾಗೂ ಸನ್ನಿವೇಶಗಳಿಗೆ ತಕ್ಕಂತೆ ರೂಪಿಸುವಲ್ಲಿ ಬ್ರಿಟೀಷರ ಪಾತ್ರ ಪ್ರಮುಖವಾಗಿದೆ.

ರೆಸಿಡೆಂಟ್ ಎಂಬ ಅಧಿಕಾರಿ ಮೈಸೂರು ಸಂಸ್ಥಾನದಲ್ಲಿ ಬ್ರಿಟೀಷ್ ಸರಕಾರದ ಪ್ರತಿನಿಧಿ. ಇಂಥ ಅಧಿಕಾರಿ ೧೮೮೧ಕ್ಕೆ ಹಿಂದೆ ಮೈಸೂರಿನಲ್ಲಿರಲಿಲ್ಲ. ಇತರ ದೇಶೀಯ ಸಂಸ್ಥಾನಗಳಲ್ಲಿ ಒಂದು ದೊಡ್ಡ ಸಂಸ್ಥಾನಕ್ಕಾಗಲಿ ಅಥವಾ ಕೆಲವು ಸಣ್ಣ ಸಂಸ್ಥಾನಗಳ ಗುಂಪಿಗಾಗಲಿ ಒಬ್ಬ ಇರುತ್ತಿದ್ದ ಆತನನ್ನು "ಪೊಲಿಟಿಕಲ್ ಏಜೆಂಟ್" ಎಂದು ಕೆಲವು ಕಡೆ ಕರೆಯುತ್ತಿದ್ದರು.[೫] ಮೈಸೂರಿನ ಬ್ರಿಟೀಷ್ ಪ್ರತಿನಿಧಿಯಾಗಿ ರೆಸಿಡೆಂಟನು ತೆರೆಯ ಮರೆಯಲ್ಲಿ ಬ್ರಿಟೀಷರ ಹಿತಾಸಕ್ತಿಗಳನ್ನು ರಕ್ಷಿಸುತ್ತಿದ್ದನು.

೨.೨. ಮೊಟ್ಟ ಮೊದಲ ಕಾವೇರಿ ನದಿ ನೀರು ಬಳಸಿ ವಿದ್ಯುತ್ ಉತ್ಪಾದಿಸುವ ಪ್ರಸ್ತಾಪ

ಮೈಸೂರು ಸಂಸ್ಥಾನದಲ್ಲಿ ಜಲದಿಂದ ವಿದ್ಯುತ್ ಉತ್ಪಾದನೆ ಮಾಡಲು ಪ್ರೇರಣೆ ಪಡೆದ ಸಂಗತಿಯೆಂದರೆ, ಎಡ್ಮಂಡ್ ಚಾರಿಂಗ್ಟನ್ ಎಂಬ ಎಲೆಕ್ಟ್ರಿಕಲ್ ಎಂಜಿನಿಯರ್ ೧೮೯೪ರಲ್ಲಿ ಕಾವೇರಿ ಜಲಪಾತದಿಂದ ನೀರನ್ನು ಬಳಸಿಕೊಂಡು ವಿದ್ಯುತ್ತನ್ನು ಉತ್ಪಾದಿಸಬಹುದೆಂದು ಪ್ರಾಸ್ತಾಪಿಸಿದ್ದು,[೬] ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಆರಂಭದ ಮೊದಲ ಹಂತ ಅಥವಾ ಬೀಜಾಂಕುರವೆನ್ನಬಹುದು. ಇವನ ಆಲೋಚನೆಯಿಂದ ಶತಮಾನಗಳಿಂದ ನಿಸರ್ಗದತ್ತವಾಗಿ ಹರಿದು ಹೋಗುತ್ತಿದ್ದ ಜಲಪಾತದ ನೀರು ವಿದ್ಯುತ್ ಉತ್ಪಾದನೆಗೆ ಬಳಸಿಕೊಂಡು ಆ ಮೂಲಕ ಮೈಸೂರಿನ ಕೈಗಾರಿಕೆಗಳ ಚಕ್ರಗಳ ಸಂಚಲನೆಗೆ ಶಕ್ತಿಯಾಗುತ್ತದೆಂಬ ಆಲೋಚನೆಯೇ ಶಿವನಸಮುದ್ರ ಎಂಬ ಸ್ಥಳಕ್ಕೆ ಹಾಗೂ ಅಲ್ಲಿ ಜಲಪಾತದ ನೀರಿಗೆ ರಾಜಕೀಯ, ಆರ್ಥಿಕ ಮಹತ್ವವನ್ನು ಮೂಡಿಸಿತು.[೭]

ಎಡ್ಮಂಡ್ ಚಾರಿಂಗ್ಟನ್ ಕಾವೇರಿ ಜಲಪಾತದ ನೀರನ್ನು ಬಳಸಿಕೊಂಡು ವಿದ್ಯುತ್ತನ್ನು ಉತ್ಪಾದಿಸಲು ಅನುಮತಿಗಾಗಿ ಮೈಸೂರು ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿದ.[೮] ಎಡ್ಮಂಡ್ ಚಾರಿಂಗ್ಟನ್ನನು ಭಾರತದಲ್ಲೇ ವಿದ್ಯುದ್ದೀಪಗಳ ಕುರಿತು ಪರಿಣಿತಿ ಹೊಂದಿದ ಮದ್ರಾಸಿನ ಶ್ರೀಯುತ ಹೋಮ್ಸ್ ರ ಜೊತೆಗೂಡಿ "ಕಾವೇರಿ ಫಾಲ್ಸ್ ಕಂಪನಿ" ಎಂಬ ವಿದ್ಯುಚ್ಛಕ್ತಿ ಕಂಪನಿಯನ್ನು ಸ್ಥಾಪಿಸಿ, ಕಾವೇರಿ ನದಿಯಿಂದ ವಿದ್ಯುತ್ ಉತ್ಪಾದಿಸಿ ಅದನ್ನು ಮೈಸೂರು ರಾಜ್ಯದಲ್ಲಿ ಅಲ್ಯೂಮಿನಿಯಂ ಮುಂತಾದ ಗಣಿಗಾರಿಕೆ, ಕೈಗಾರಿಕೆ ಮತ್ತು ಟ್ರಾಮ್‌ವೇಗಳಿಗೆ ಬಳಸುವ ತನ್ನ ಉದ್ದೇಶಿತ ಪ್ರಸ್ತಾಪವನ್ನು ಮಂಡಿಸಿದನು.[೯]

ಆದರೆ ಅವನ ಪ್ರಸ್ತಾಪದಲ್ಲಿ ನಿರ್ದಿಷ್ಟವಾದ ಅಂಕಿ-ಅಂಶ ಮಾಹಿತಿಗಳ ಕೊರತೆ ಇದ್ದುದರಿಂದ ಅದನ್ನು ಅಂಗೀಕರಿಸಲಿಲ್ಲ.[೧೦] ಮೈಸೂರು ದರ್ಬಾರಿನಲ್ಲಿ ಬ್ರಿಟೀಷ್ ರೆಸಿಡೆಂಟ್ ಆಗಿದ್ದ ಶ್ರೀಯುತ ಹೆಂಡರ್ ಸನ್ ಕಾವೇರಿ ವಿದ್ಯುತ್ ಯೋಜನೆ ಕುರಿತು ಬಹಳ ಉತ್ಸಾಸಹವನ್ನು ಹೊಂದಿದ್ದನು. ಅವನು ಈ ಕುರಿತು ತಜ್ಞನಾಗಿದ್ದ ಶ್ರೀಯುತ ಹೋಮ್ಸ್‌ರವರನ್ನು ಸಂಪರ್ಕಿಸಿದನು.

ಎಡ್ಮಂಡ್ ಚಾರಿಂಗ್ಟನ್, ಹೋಮ್ಸ್ ಮತ್ತು ಶ್ರೀಯುತ ಹೆಂಡರ್‌ಸನ್ ಮೂವರು ಸೇರಿ ಕಾವೇರಿಯಿಂದ ವಿದ್ಯುತ್ ಉತ್ಪಾದಿಸಿ ಅದನ್ನು ಅಲ್ಲಿಂದ ಕೋಲಾರಕ್ಕೆ ಪ್ರಸರಣ ಮಾಡುವ ಸಾಧ್ಯತೆಯನ್ನು

ಪರಿಶೀಲಿಸಿದರು.[೧೧] ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಒದಗಿಸಿ ಅದರಿಂದ ಬಹಳಷ್ಟು ಲಾಭ ಪಡೆಯುವ ಯೋಜನೆಯನ್ನು ಮುಂದಿಟ್ಟರು.[೧೨] ಆದರೆ ಆ ಹೊತ್ತಿಗೆ ಮೈಸೂರು ಅರಸರು, ಜಲವಿದ್ಯುತ್ ಯೋಜನೆಯನ್ನು ಕಾರ್ಯಾರಂಭ ಮಾಡಲು ಸಾಧ್ಯವಾದರೆ ತಾವೇ ಸ್ವತಃ ತಮ್ಮ ದರ್ಬಾರಿನ ವತಿಯಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ತಿಳಿಸಿದರು.[೧೩] ಶಿವನಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲಿಸಲಾರಂಭಿಸಿದರು. ಈ ಸಮೀಕ್ಷೆಯ ಕಾರ್ಯಕ್ಕಾಗಿ ಮೈಸೂರು ಸರ್ಕಾರವು ಮದ್ರಾಸ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಮುಖ್ಯ ಎಂಜಿನಿಯರ್ ಆಗಿದ್ದ ಕರ್ನಲ್ ಪೆನ್ನಿಕ್ವಿಕ್ ಎಂಬುವವರ ಸೇವೆಯನ್ನು ಮದ್ರಾಸ್ ಸರ್ಕಾರದ ಅನುಮತಿಯೊಂದಿಗೆ ಪಡೆದು ಕೊಂಡಿತು.[೧೪] ಕರ್ನಲ್ ಪೆನ್ನಿಕ್ವಿಕ್ ಈ ಯೋಜನೆಯ ಬಗ್ಗೆ ಹಾಗೂ ಅದರ ಯಶಸ್ಸಿನ ಬಗ್ಗೆ ಸಕಾರಾತ್ಮಕವಾದ ವರದಿ ನೀಡಿದ. ಅಲ್ಲದೇ ತನ್ನ ವರದಿಯಲ್ಲಿ ವಿದ್ಯುತ್ ಉತ್ಪಾದನೆಗೆ ಬೇಸಿಗೆಯಲ್ಲಿ ನಿಗಧಿಯುತವಾಗಿ ನದಿ ನೀರಿನ ಹರಿವಿನ ಪ್ರಮಾಣವನ್ನು ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ವರದಿಯಲ್ಲಿ ವಿವರಿಸಿದ್ದ.

ಅದರಂತೆ ೧೮೯೫ರಲ್ಲಿ ಮೈಸೂರಿನ ಮುಖ್ಯ ಇಂಜಿನಿಯರ್ ಆಗಿದ್ದ ಕರ್ನಲ್ ಬೊವೆನ್ನರ ನಿರ್ದೇಶನದಲ್ಲಿ ದಕ್ಷಿಣ ವಾಹಿನಿಯ ಹರಿವಿನ ಪ್ರಮಾಣವನ್ನು ಅಳೆಯಲಾಯಿತು. ಪ್ರತಿ ಸೆಕೆಂಡಿಗೆ ೨೦೦೦ ಕ್ಯೂಬಿಕ್ ಅಡಿ ಕನಿಷ್ಠ ನೀರಿನ ಹರಿವನ್ನು ನಿರೀಕ್ಷಿಸಬಹುದೆಂದು, ಆದರೆ ಈ ಸಮೀಕ್ಷೆ ಆಧಾರ ಖಚಿತವಿಲ್ಲವೆಂದು ತಿಳಿಸಿದ.[೧೫] ಈ ಸಮೀಕ್ಷೆ ನಂತರ ೧೮೯೮ರವರೆಗೆ ಅಂದರೆ ಸುಮಾರು ಮೂರು ವರ್ಷಗಳ ಕಾಲ ಈ ಯೋಜನೆ ನೆನೆಗುದಿಯಲ್ಲಿ ಬಿದ್ದಿತು.[೧೬] ಆದರೂ ಮೈಸೂರು ಸರ್ಕಾರವು ಶಿವನಸಮುದ್ರ ಜಲಪಾತದ ಬಳಿ ವಿದ್ಯುತ್ ಉತ್ಪಾದಿಸಬಹುದು ಮತ್ತು ಅದನ್ನು ಬಳಸಬಹುದೆಂಬ ನಂಬಿಕೆ ಹೊಂದಿತ್ತು. ಅಲ್ಲದೆ ಮದ್ರಾಸ್ ಸರ್ಕಾರವು ಈ ಯೋಜನೆಯನ್ನು ವಿರೋಧಿಸುವುದಿಲ್ಲವೆಂಬ ವಿಶ್ವಾಸ ಹೊಂದಿತ್ತು.

ಈ ಯೋಜನೆಗೆ ಆರಂಭದಲ್ಲಿ ಉದ್ಯಮಶೀಲರಾದ ಬ್ರಿಟೀಷ್ ಅಧಿಕಾರಿ ವರ್ಗ ಆಸಕ್ತಿ ಹೊಂದಿ ಚಾಲನೆ ನೀಡಿತು. ಅಲ್ಲದೆ ಮದ್ರಾಸ್‌ನ ಬ್ರಿಟೀಷ್ ಉದ್ಯಮಿಗಳು ಈ ಯೋಜನೆಯಲ್ಲಿ ಆಸಕ್ತಿ ತೋರಿದ್ದು ಕೊನೆಗೆ ಮೈಸೂರಿನಲ್ಲಿದ್ದ ಬ್ರಿಟೀಷ್ ರೆಸಿಡೆಂಟನ ಬೆಂಬಲವೂ ದೊರಕಿದ್ದು, ಈ ಯೋಜನೆಯ ಮಹತ್ವವನ್ನು ತೋರಿಸುತ್ತದೆ. ಈ ಗುಂಪು ಬ್ರಿಟೀಷ್ ಸಾಮ್ರಾಜ್ಯದ ಅಧೀನ ಸಂಸ್ಥಾನವಾದ ಮೈಸೂರಿನಲ್ಲಿ ಪೋಲಾಗಿ ಹರಿದು ಹೋಗುತ್ತಿದ್ದ ಜಲಪಾತದ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಲು ಮೈಸೂರು ಸರ್ಕಾರದಿಂದ ರಿಯಾಯಿತಿಯೊಂದಿಗೆ ಅನುಮತಿ ಪಡೆಯುವುದು ನಂತರ ಅವಧಿಯಲ್ಲಿ ಲಾಭ ಮಾಡಿಕೊಳ್ಳಬಹುದೆಂಬ ಹಿತಸಕ್ತಿ ಹೊಂದಿತ್ತು.[೧೭] ಒಟ್ಟಾರೆ ಈ ಯೋಜನೆಯ ಮೊದಲ ಹಂತದಲ್ಲಿ ಮೈಸೂರಿನ ರೆಸಿಡೆಂಟ್ ಮತ್ತು ಆತನ ಗುಂಪು ಹಿತಾಸಕ್ತಿ ಹೊಂದಿದ್ದು ಆ ಮೂಲಕ ಈ ಯೋಜನೆಯ ಬಗ್ಗೆ ಆಸಕ್ತಿ ತೋರಿದುದನ್ನು ನಾವು ಗುರುತಿಸಬಹುದು.

೨.೩. ವಿದ್ಯುತ್ ಖರೀದಿಸಲು ಕೋಲಾರದೊಡನೆ ಮಾತುಕತೆ

೧೮೯೯ರ ಜೂನ್ ತಿಂಗಳಿನಲ್ಲಿ ಕ್ಯಾಪ್ಟನ್ (ನಿವೃತ್ತ ಮೇಜರ್ ಜನರಲ್) ಎ.ಸಿ.ಜೆ ಲಾಬಿನೀರ್, ಮೈಸೂರು ಸರ್ಕಾರದ ಉಪ ಮುಖ್ಯ ಇಂಜಿನಿಯರ್, ನಯಾಗರಾ ಜಲಪಾತದ ಮತ್ತು ಇತರ ಜಲವಿದ್ಯುತ್ ಯೋಜನೆಗಳನ್ನು ಅದ್ಯಯನ ಮಾಡಿ ಅದರ ಆಧಾರದ ಅಡಿಯಲ್ಲಿ ಕಾವೇರಿ ನೀರಿನಿಂದ ವಿದ್ಯುತ್ ಉತ್ಪಾದಿಸಿ, ಕೋಲಾರ ಚಿನ್ನದ ಗಣಿಗೆ ಹಂಚುವ ನಿರ್ದಿಷ್ಟ ಯೋಜನೆಯನ್ನು ತಯಾರಿಸಿದನು.[18] ಇದಕ್ಕೆ ದಿವಾನರಾಗಿದ್ದ ಕೆ.ಶೇಷಾದ್ರಿ ಅಯ್ಯರ್ ಮತ್ತು ಮುಖ್ಯ ಇಂಜಿನಿಯರ್ ಕರ್ನಲ್ ಡಿ ಮೇಕ್ ನೀಲ್ ಕ್ಯಾಂಪ್‌ಬೆಲ್‌ರು ಬೆಂಬಲ ನೀಡಿದರು.

ಈ ಯೋಜನೆಯ ಸಾಧ್ಯಾಸಾಧ್ಯತೆಗಳನ್ನು ಗಮನಿಸಲು ಲಾಬಿನೀರ್ ಅವರು ಹಲವಾರು ಪ್ರಸರಣ ಮಾರ್ಗಗಳು ಜಲವಿದ್ಯುತ್ ಯೋಜನೆಗಳ ಅಧ್ಯಯನ ನಡೆಸಿದರು. ಕೋಲಾರದ ಚಿನ್ನದ ಗಣಿಯಲ್ಲಿ ಉಗಿಯಿಂದ ಚಲಿಸುವ ಗಣಿ ಕೆಲಸವನ್ನು ವಿದ್ಯುಚ್ಛಕ್ತಿಯಿಂದ ನಡೆಸಿದರೆ ಆಗುವ ಲಾಭವನ್ನೂ, ಬೆಂಗಳೂರಿನಲ್ಲಿ ಬಟ್ಟೆ ಗಿರಣಿ, ಟ್ರಾಮ್ ವೇ ಮತ್ತು ಗೃಹ ಬಳಕೆಗೆ ವಿದ್ಯುತ್ ಒದಗಿಸುವ ಕುರಿತು ಅಧ್ಯಯನ ನಡೆಸಿದರು. ನಂತರ ಬೆಂಗಳೂರಿಗೆ ವಿದ್ಯುತ್ ಸರಬರಾಜು ನೀಡುವುದನ್ನು ಮುಂದೂಡಿದರು.[19]

ಯೋಜನೆ ಬಗ್ಗೆ ನಿರ್ಧಾರ ಕೈಗೊಳ್ಳುವ ಮುನ್ನ ಕೋಲಾರ ಚಿನ್ನದ ಗಣಿಯ ಅಧೀಕ್ಷಕರುಗಳಿಂದ ವಿದ್ಯುತ್ ಚಾಲಿತ ಮೋಟಾರು ಬಳಸುವ ಸಾಧ್ಯತೆಗಳ ಬಗ್ಗೆ ತಿಳಿಯಬೇಕಿತ್ತು. ಸರ್ಕಾರವು ಈ ವಿಷಯ ಕುರಿತು ಕೋಲಾರ ಗಣಿ ಮಾಲೀಕರಾದ ಲಂಡನ್ನಿನ ಜಾನ್ ಟೇಯ್ಲರ್ ಮತ್ತು ಮಕ್ಕಳೊಂದಿಗೆ ನೇರವಾಗಿ ವ್ಯವಹರಿಸಿತು. ಅಲ್ಲದೇ ವಿದ್ಯುತ್ತಿನಿಂದ ಗಣಿಗಾರಿಕೆ ನಡೆಸಿರುವುದರಿಂದ ಕಂಪನಿಗೆ ಅತ್ಯಧಿಕ ಲಾಭವಾಗುವುದನ್ನು ಉಗಿಶಕ್ತಿಯಿಂದ ಯಂತ್ರೋಪಕರಣ ನಡೆಸುವಲ್ಲಿ ಆಗುತ್ತಿದ್ದ ತೊಂದರೆ ನಿವಾರಣೆ ಆಗುವುದೆಂದು ತಿಳಿಸಿದರು. ವಿದ್ಯುತ್ ಬಳಸಿದರೆ ಇದರಲ್ಲಿ ಬಹಳ ಮಿತವ್ಯಯ ಸಾಧಿಸಬಹುದೆಂದು ಅವರಿಗೆ ಮನವರಿಕೆಯಾಗಿ ವಿದ್ಯುತ್ ಖರೀದಿಸಲು ಒಪ್ಪಿಗೆ ಸೂಚಿಸಿದರು.

ಲಾಬಿನೀರ್ ವಿದೇಶ ಪ್ರವಾಸ(ಜಲವಿದ್ಯುದಾಗರಗಳ ಅಧ್ಯಯನಕ್ಕೆ)

೧೮೯೯ರಲ್ಲಿ ಮೈಸೂರು ಸರ್ಕಾರವು ಈ ಕೆಳಗಿನ ಕೆಲಸಗಳಿಗಾಗಿ ಎ.ಸಿ.ಜೆ ಲಾಬಿನೀರ್‌ರವರನ್ನು ಯೂರೋಪು ಮತ್ತು ಅಮೇರಿಕಾಗಳಿಗೆ ಕಳುಹಿಸಲು ನಿರ್ಧರಿಸಿತು.[20]

೧. ವಿದ್ಯುಚ್ಛಕ್ತಿಯ ಪ್ರಸರಣ ಕುರಿತು ಪ್ರಸ್ತುತ ಲಭ್ಯವಿರುವ ಅತ್ಯಾಧುನಿಕ ಮಾದರಿಗಳ ಬಗ್ಗೆ ಅಧ್ಯಯನ ಮಾಡಿ ಇದರಿಂದ ನಮ್ಮ ಯೋಜನೆ ಪ್ರಾರಂಭಿಸಲು ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುವುದು.

೨. ತಜ್ಞರ ಸಮಿತಿಯನ್ನು ರಚಿಸಿಕೊಂಡು ಯೋಜನೆಗೆ ಟೆಂಡರ್ ಕರೆಯಲು ಅವರ ಮಾರ್ಗದರ್ಶನ/ ಮತ್ತು ಸಲಹೆಗಳನ್ನು ಪಡೆಯುವುದು.

೩. ವಿದ್ಯುತ್ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ ಉತ್ಪಾದಕರಿಂದ ಕೆಲಸದ ಕುರಿತು ಟೆಂಡರುಗಳನ್ನು ಪಡೆಯುವುದು.

೪. ಗಣಿಗಳಿಗೆ ವಿದ್ಯುಚ್ಛಕ್ತಿಯ ಮಾರಾಟದ ಕುರಿತು ಅಂಕಿ-ಅಂಶಗಳು ಒಳಗೊಂಡಂತೆ ಕರಡನ್ನೂ ತಯಾರಿಸಿ ಮೈಸೂರು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಯೋಜನೆಯ ಅಂತಿಮ ರೂಪುರೇಷೆಗಳನ್ನು ಸಿದ್ಧಪಡಿಸುವುದು.

ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಮತ್ತು ವಿವಿಧ ಕಂಪನಿಗಳೊಡನೆ ಚರ್ಚಿಸಿ ಮುಂದಿನ ಕ್ರಮಗಳ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲು ಶ್ರೀಯುತ ಲಾಬಿನೀರ್‌ಗೆ, ೨೭ ಜೂನ್ ೧೮೯೯ರಂದು ವಿದೇಶಯಾತ್ರೆಗೆ ಆದೇಶ ನೀಡಲಾಯಿತು.[೨೧] ಇಂಗ್ಲೆಂಡಿಗೆ ತೆರಳಿದ ಲಾಬೀನೀರ್, ಪ್ರೊ.ಪೋರ್ಬ್ಸ್‌ನ್ನೊಳಗೊಂಡ ತಜ್ಞರೊಂದಿಗೆ ಚರ್ಚಿಸಿ ಯೋಜನೆಗಳನ್ನು ಸಿದ್ಧಪಡಿಸಿ ವಿದ್ಯುತ್ ಘಟಕಗಳನ್ನು ಸ್ಥಾಪಿಸುವ ಮತ್ತು ಒಂದು ವರ್ಷದವರೆಗೆ ಅವುಗಳ ಪಾಲನೆ ಮತ್ತು ನಿರ್ವಹಣೆ ಮಾಡುವ ಕಂಪನಿಯನ್ನು ನಿರ್ಧರಿಸಲು ಮಾಹಿತಿಗಳನ್ನು ಸಂಗ್ರಹಿಸಿದರು. ಜಾನ್ ಟೇಲರ್‌ರವರೊಡನೆ ಮಾತುಕತೆ ನಡೆಸಿದರು. ಜೊತೆಗೆ ಸರ್ಕಾರದ ಆದೇಶದಂತೆ ಲಾಬಿನೀರ್‌ರವರು ತಜ್ಞರ ಒಂದು ಸಮಿತಿಯನ್ನು ರಚಿಸಿಕೊಂಡರು. ಅದರಲ್ಲಿ ವಿದ್ಯುತ್ ವಿಚಕ್ಷಣರಾಗಿದ್ದ ಶ್ರೀಯುತ ಜಿ.ಪೋರ್ಬ್ಸ್, 'ಹೈಡ್ರಾಲಿಕ್ ತಜ್ಞರಾಗಿದ್ದ ಪ್ರೊ.ಡಬ್ಲ್ಯೂ.ಸಿ ಉನ್‌ವಿನ್ ಮತ್ತು ಜೆ.ಥಾಮ್ಸನ್ ಸೇರಿದ್ದರು. ಥಾಮ್ಸನ್‌ರವರು ಸ್ಫೋಟಕ ನಿರೀಕ್ಷಕರಾಗಿದ್ದರು ಮತ್ತು ವಿದ್ಯುಚ್ಛಕ್ತಿಯ ವ್ಯವಹಾರಗಳ ಕುರಿತು ನುರಿತ ಅನುಭವಿಗಳಾಗಿದ್ದರು. ಅವರನ್ನು ಸಮಿತಿಯ ಕಾರ್ಯದರ್ಶಿಯಾಗಿ ನೇಮಿಸಿಕೊಳ್ಳಲಾಯಿತು.[೨೨]

೨.೫. ಯೋಜನೆಯ ಪ್ರಾರಂಭಕ್ಕೆ ಟೆಂಡರ್ ಪ್ರಕ್ರಿಯೆ

ಯೋಜನೆಯ ಪೂರ್ವಾಪರವನ್ನು ತಜ್ಞರೊಂದಿಗೆ ಚರ್ಚಿಸಿ ಅಂತಿಮವಾಗಿ ಲಾಬಿನೀರ್‌ರವರು ಟೆಂಡರುಗಳನ್ನು ಆಹ್ವಾನಿಸಿದರು. ಪ್ರಸ್ತುತ ನಾವು ಹೇಳುವಂತೆ ಅಂದೂ ಕೂಡ ಲಾಬಿನೀರ್‌ರವರು ಜಾಗತಿಕ ಟೆಂಡರ್‌ಗಳನ್ನು ಕರೆದರು. ಕೆಳಗಿನ ಐದು ಕಂಪನಿಗಳು ಕೂಟೇಶನ್‌ಗಳನ್ನು ಕೊಟ್ಟವು.[೨೩]

೧. ದಿ ಜನರಲ್ ಎಲೆಕ್ಟ್ರಿಕಲ್ ಕಂಪನಿ, ಅಮೇರಿಕಾ

೨. ದಿ ವೆಸ್ಟಿಂಗ್ ಹೌಸ್ ಕಂಪನಿ, ಇಂಗ್ಲೆಂಡ್ ಮತ್ತು ಅಮೇರಿಕಾ

೩. ದಿ, ಬ್ರೌನ್ ಬೋವೆರಿ, ಸ್ವಿಸ್

೪. ಆರ್ಲಿಕಾನ್, ಸ್ವಿಸ್

೫. ದಿ ಜನರಲ್ ಎಲೆಕ್ಟ್ರಿಕಲ್ ಕಂಪನಿ ಆಫ್ ಬ್ರಿಟನ್

ಲಾಬಿನೀರ್ ೨೮ನೇ ಸೆಪ್ಟೆಂಬರ್ ೧೮೯೯ರಲ್ಲಿ ಅಮೇರಿಕಾ ಮತ್ತು ಕೆನಡಾದಲ್ಲಿನ ವಿದ್ಯುದಾಗರಕ್ಕೆ ಭೇಟಿ ನೀಡಿ, ಅಲ್ಲಿ ಯಾವ ರೀತಿಯ ಕ್ರಮದ ಅನ್ವಯ ವಿದ್ಯುತ್ತನ್ನು ಉತ್ಪಾದನೆ ಮಾಡಿ ಗಣಿಗಳಿಗೆ, ಕಾರ್ಖಾನೆಗಳಿಗೆ ಯಾವ ವಿಧಾನದ ಅನ್ವಯ ಪೂರೈಕೆ ಮಾಡುತ್ತಾರೆ ಎಂಬುದನ್ನು ಅಭ್ಯಸಿಸಿದ. ಅಮೇರಿಕದ ನಯಾಗರ, ಕ್ರಿಫಲ್‌ಕ್ರೀಕ್, ಸೆಂಟ್‌ಲಾರೆನ್ಸ್, ಮಾಂಟ್ರೇಲ್ ಜಲ ವಿದ್ಯುದಾಗರಗಳಿಗೆ ನಂತರ ಅತೀ ದೂರದ ಪ್ರಸರಣ ಮಾರ್ಗ ಹೊಂದಿರುವ ದಕ್ಷಿಣ ಕ್ಯಾಲಿಫೋರ್ನಿಯಾದಿಂದ ಲಾಸ್ ಏಂಜಲೀಸ್‌ಗೆ ಭೇಟಿ ನೀಡಿದ. ಒಟ್ಟಾರೆಯಾಗಿ ಅಮೇರಿಕಾದಲ್ಲಿ ವಿದ್ಯುತ್ ಕುರಿತ ಮಾಹಿತಿ, ಪ್ರಸರಣ, ವೋಲ್ಟೇಜ್ ಸುವ್ಯವಸ್ಥಿತ ಜಲ ವಿದ್ಯುದಾಗರಗಳನ್ನು ಒಳಗೊಂಡು ಉತ್ಪಾದಿಸಿದ ವಿದ್ಯುತ್ತನ್ನು ಗಣಿಗಳಿಗೆ, ಕೈಗಾರಿಕೆಗಳಿಗೆ ವಾಣಿಜ್ಯ ಉದ್ಯಮ ಮತ್ತು ಗೃಹಬಳಕೆ ಕ್ರಮಬದ್ಧವಾಗಿ ಅಳವಡಿಸಿಕೊಂಡಿರುವುದನ್ನು ಗಮನಿಸಿದ.[೨೪]

ನಂತರ ಲಾಟ್‌ಬಿನೀರ್ ಆ ಸಂದರ್ಭದಲ್ಲೇ ವಿದ್ಯುತ್ ಉಪಕರಣಗಳ ನಿರ್ಮಾಣ ಮಾಡುವ ಎರಡು ಬೃಹತ್ ಕಂಪನಿಗಳಾದ ವೆಸ್ಟಿಂಗ್ ಹೌಸ್ ಮತ್ತು ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಗಳಿಗೆ ಬೇಟಿ ನೀಡಿದ.[೨೫]

ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯ ವಿದ್ಯುತ್ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ ನೌಕರರು, ಅವರ ಕಾರ್ಯಕ್ಷಮತೆ, ವಿದ್ಯುತ್ ಕ್ಷೇತ್ರದಲ್ಲಿನ ಅನುಭವ ಇದುವರೆಗೂ ಅವರು ಪೂರೈಸಿರುವ ಪ್ರತಿಯೊಂದು ಸಲಕರಣೆಗಳು ಉತ್ತಮ ಗುಣಮಟ್ಟದ್ದು, ಕಾರ್ಯಶೀಲತೆ ಹೊಂದಿದ್ದವು. ವಿದ್ಯುದಾಗರ ನಿರ್ವಹಣೆ ತಂತ್ರಜ್ಞಾನದ ವಿಚಾರವಾಗಿ ಉತ್ತಮವಾಗಿ ನಿರ್ವಹಿಸಿದ್ದುದ್ದನ್ನು ಕಂಡನು. ಅದೇ ರೀತಿ ವೆಸ್ಟಿಂಗ್ ಹೌಸ್ ಕಂಪನಿಗೆ ಬೇಟಿ ನೀಡಿದಾಗ, ಅನೇಕ ಕೆಲಸ ಕಾರ್ಯ ಕಂಡರೂ, ಲಾಬಿನೀರ್‌ಗೆ ಇದರಿಂದ ತೃಪ್ತಿ ಸಿಗಲಿಲ್ಲ. ಜನರಲ್ ಎಲೆಕ್ಟ್ರಿಕಲ್ಸ್ ಹಳೆಯ ಕಂಪನಿ, ವೆಸ್ಸಿಂಗ್ ಹೌಸ್ ಪ್ರಸ್ತುತ ಯೌವಾನಾವಸ್ಥೆಯಲ್ಲಿದ್ದು ವಿದ್ಯುತ್ ಕ್ಷೇತ್ರದಲ್ಲಿ ಜಿ.ಇ. ಕಂಪನಿಗಿಂತ ಹಿಂದುಳಿದಿತ್ತು. ಅಂತಿಮವಾಗಿ ಲಾಬೀನೀರ್ ಜಿ.ಇ.ಕಂಪನಿ ಅಮೇರಿಕಾ ಬಗೆಗೆ ಆಶಾಭಾವನೆಯನ್ನು ಹೊಂದಿದ್ದ.[೨೬]

ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಆರಂಭಕ್ಕೆ ಟೆಂಡರುಗಳನ್ನು ಕರೆಯುವಾಗ ಕೆಲವು ಷರತ್ತುಗಳನ್ನು ವಿಧಿಸಲಾಗಿತ್ತು. ಕೇವಲ ೨೦ ತಿಂಗಳಲ್ಲಿ ಕೆಲಸ ಮುಗಿಸ ಕೊಡಬೇಕೆಂತಲೂ ತಪ್ಪಿದ್ದಲ್ಲಿ ವಿಪರೀತ ದಂಡವನ್ನು ತೆರಬೇಕಾಗುವುದೆಂತಲೂ ಸೂಚನೆಯನ್ನು ನೀಡಲಾಗಿದ್ದಿತು. ಜೊತೆಗೆ ಅಗತ್ಯ ಯಂತ್ರೋಪಕರಣಗಳ ಪೂರೈಕೆ, ಸಾಗಾಣಿಕೆ, ಸ್ಥಾಪನೆ ಮತ್ತು ವಿದ್ಯುದಾಗರದ ಒಂದು ವರ್ಷಗಳ ನಿರ್ವಹಣೆಯು ಸಂಪೂರ್ಣವಾಗಿ ಕಂಪನಿಯ ಜವಾಬ್ದಾರಿಯೆಂದು ತಿಳಿಸಲಾಗಿತ್ತು.[೨೭] ಕಾಮಗಾರಿಗಳ ನಡುವೆ ಯಾವುದೇ ಬದಲಾವಣೆ, ಅಡಚಣೆ, ಇಂಜಿನಿಯರ್ /ನೌಕರರ ಸಂಬಳ, ಸಾರಿಗೆ ಪಾವತಿ ಕುರಿತು ಯಾವುದೇ ಭಿನ್ನಾಭಿಪ್ರಾಯ ಬರದ ಹಾಗೆ ಕೂಲಂಕುಷವಾಗಿ ನಿರ್ಧರಿಸಲು ಲಂಡನ್ನಿನ ರಸ್ಸೆಲ್ ಡಂಕನ್ ಮತ್ತು

ಕಂಪನಿಯವರನ್ನು ಸಮಾಲೋಚಕರಾಗಿ ನೇಮಿಸಿಕೊಳ್ಳಲಾಗಿತ್ತು. ಮೇಲಿನ ಕಂಪನಿಗಳಲ್ಲಿ ಆಯ್ದ ಮೂರು ಉತ್ತಮ ಕಂಪನಿಗಳು ಕೋರಿದ ಮೊತ್ತ ಹೀಗಿತ್ತು.

ಕ್ರ.ಸಂ.	ಕಂಪನಿಗಳು	ಪೌಂಡ್ಸ್‌ಗಳಲ್ಲಿ	ರೂಪಾಯಿಗಳಲ್ಲಿ
೧	ಆರ್ಲಿಕಾನ್	೧,೮೪,೨೩೪	೨೭,೬೩,೫೧೦
೨	ಬ್ರೌನ್ ಬೋವೆರಿ	೧,೫೫,೦೭೧	೨೩,೨೫,೯೧೫
೩	ಜನರಲ್ ಎಲೆಕ್ಟ್ರಿಕಲ್ಸ್	೧,೮೬,೨೫೧	೨೭,೯೩,೭೬೫

ಇದರಲ್ಲಿ ಜಿ.ಇ.ಕಂಪನಿಯ ಹಲವು ರಿಯಾಯತಿಗಳನ್ನು ನೀಡಿ ಅದರ ಟೆಂಡರ್ ಮೊತ್ತ ಒಟ್ಟು ೧,೬೦,೭೪೦ ಪೌಂಡ್ ಎಂದು ನಿರ್ಧರಿಸಲಾಯ್ತು. ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯು ಟೆಂಡರಿನ ಆಧಾರದ ಮೇಲೆ ಒಟ್ಟು ಯೋಜನೆಯ ವೆಚ್ಚವನ್ನು ಈ ರೀತಿಯಾಗಿ ತಿಳಿಸಿತು.

ಕ್ರ.ಸಂ.	ಕಾಮಗಾರಿಗಳು	ಪೌಂಡ್ಸ್‌ಗಳಲ್ಲಿ	ರೂಪಾಯಿಗಳಲ್ಲಿ
೧	ಸ್ಥಾವರದ ಸ್ಥಾಪನೆಗಾಗಿ	೧,೬೦,೭೪೦	೨೪,೧೧,೧೦೦
೨	ಪ್ರಸರಣ ಮತ್ತು ವಿತರಣೆ		
	ನೀರೊದಗಿಸುವ ಕಾರ್ಯಕ್ಕಾಗಿ	೭೦,೦೦೦	೧೦,೫೦,೦೦೦
೩	ಮೈಸೂರು ಸರ್ಕಾರ ಖರ್ಚು		
	ಮಾಡಬೇಕಾದ ಮೊತ್ತ	೫೦,೦೦೦	೭,೫೦,೦೦೦
	ಒಟ್ಟು ಮೊತ್ತ	೨,೮೦,೭೪೦	೪೨,೧೧,೧೦೦

ಆಧಾರ : ಗೋಪಾಲಕೃಷ್ಣಯ್ಯ ಎಂ, ಹಿಸ್ಟರಿ ಆಫ್ ದಿ ಕಾವೇರಿ ಪವರ್ ಸ್ಕೀಂ, ಬೆಂಗಳೂರು, ೧೯೩೨, ಪು.೨೧

ಮೇಲಿನ ಟೆಂಡರುಗಳನ್ನು ತಜ್ಞರ ಸಮಿತಿಯ ಕಾರ್ಯದರ್ಶಿಯಾದ ಜೆ.ಥಾಮ್ಸನ್ ಮತ್ತು ಎ.ಸಿ.ಜೆ.ಲಾಬಿನೀರ್‌ರವರು ಪರಿಶೀಲಿಸಿ ಈ ಕೆಳಗಿನ ನಿರ್ಣಯ ತೆಗೆದುಕೊಂಡರು.

ಪ್ರಸ್ತುತ ಸಿದ್ಧಪಡಿಸಿರುವ ಅಂದಾಜು ಪಟ್ಟಿಯನ್ವಯ ಹಲವಾರು ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡಿ ಅದನ್ನು ಒಪ್ಪಿಕೊಂಡರೆ, ಈ ಕೆಳಗಿನ ಕಾರಣಗಳ ಆಧಾರದ ಮೇಲೆ ಟೆಂಡರ್‌ನ ಗುತ್ತಿಗೆಯನ್ನು ಜನರಲ್ ಎಲೆಕ್ಟ್ರಿಕಲ್ಸ್ ಅಮೇರಿಕ ಕಂಪನಿಗೆ ನೀಡಲು ಮುಂದಾದರು.

೧. ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯು ಪ್ರಸ್ತುತ ವಿಶ್ವದಲ್ಲೇ ವಿದ್ಯುತ್ ಉಪಕರಣಗಳನ್ನು ತಯಾರಿಸುವ ಅತ್ಯಂತ ದೊಡ್ಡ ಕಂಪನಿಯಾಗಿದೆ. ಅಮೇರಿಕದ ಹೆಚ್ಚಿನ ವಿದ್ಯುತ್ ಉತ್ಪಾದನೆ, ಪ್ರಸರಣ ವ್ಯವಸ್ಥೆ ಬೇರೆಲ್ಲಾ ಕಂಪನಿಗಳಿಗಿಂತ ಕಾರ್ಯಾನುಷ್ಠಾನದ ಸಂದರ್ಭದಲ್ಲಿ ಸ್ಥಳೀಯವಾಗಿ ಉಂಟಾಗುವ ತೊಂದರೆಗಳ ಅನುಭವ ಈ ಕಂಪನಿಗಿದೆ.

೨. ಕಂಪನಿಯು ಈಗಾಗಲೇ ಹಲವಾರು ಯೋಜನೆಗಳ ಅನುಷ್ಠಾನದಿಂದ ನುರಿತ ಕೆಲಸಗಾರರ ಮತ್ತು ಪರಿಣಿತ ಇಂಜಿನಿಯರುಗಳ ದಕ್ಷ ತಾಂತ್ರಿಕ ಕಾರ್ಯಪಡೆ ಹೊಂದಿದೆ.

೩. ಇದೇ ಕಂಪನಿಯು ಅಮೇರಿಕಾದ ಮತ್ತು ಆಫ್ರಿಕಾದ ಚಿನ್ನದ ಗಣಿಗಳಲ್ಲಿ ವಿದ್ಯುತ್ ವಿತರಣೆಯ ಅನುಭವ ಪಡೆದಿದೆ.

೪. ಇದೇ ಕಂಪನಿಯು ಇಂಗ್ಲೆಂಡಿನ ಸುರಂಗಮಾರ್ಗ ರೈಲ್ವೆ ಮತ್ತು ಯೂರೋಪಿನ ಹಲವಾರು ಟ್ರಾಮ್‌ವೇ ವ್ಯವಸ್ಥೆಗಳ ಗುತ್ತಿಗೆ ಹಿಡಿದಿದೆ.

ಈ ಎಲ್ಲಾ ಕಾರಣಗಳಿಂದ ಕಾವೇರಿ ಜಲವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯು ಸಮರ್ಥವಾಗಿದೆ.[೨೫] ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯು ಈ ಕೆಲಸವನ್ನು ನಿರ್ವಹಿಸಲು ವಿಫಲವಾದರೆ ಕಂಪನಿಯ ಜಾಗತಿಕ ಗೌರವಕ್ಕೆ ಧಕ್ಕೆಯಾಗುತ್ತದೆ. ಮತ್ತು ಕೆಲಸ ವಿಫಲಗೊಂಡರೆ ಸರ್ಕಾರಕ್ಕಿಂತ ಕಂಪನಿಯ ಬೆಳವಣಿಗೆ ಕುಂಠಿತವಾಗಿ ಕಂಪನಿಗೆ ಹೆಚ್ಚಿನ ನಷ್ಟವಾಗುತ್ತದೆ.

ಮೇಲಿನ ನಿರ್ಣಯಗಳನ್ನು ಕೈಗೊಳ್ಳುವಾಗ ವಿದ್ಯುತ್ ಘಟಕಗಳ ಫ್ರೀಕ್ವೆನ್ಸಿಯ ಬಗ್ಗೆ ವಿಮರ್ಶಿಸಲಾಗಿದೆ. ಶಿವನಸಮುದ್ರದಲ್ಲಿ ಉತ್ಪಾದನೆಯಾಗುವ ಬಹುತೇಕ ವಿದ್ಯುತ್ ಇಂಡಕ್ಷನ್ ಮೋಟಾರುಗಳನ್ನು ಓಡಿಸಲು ಬಳಕೆಯಾಗುವುದರಿಂದ ಮತ್ತು ವಿದ್ಯುತ್ತಿನ ಪ್ರಸರಣವು ಬಹಳ ದೂರದವರೆಗೆ ಸಾಗುತ್ತಿದ್ದದರಿಂದ ಇಲ್ಲಿ ಕಡಿಮೆ ಫ್ರೀಕ್ವೆನ್ಸಿಯೇ ಉತ್ತಮವೆಂದು ತೀರ್ಮಾನಿಸಲಾಗಿದೆ.

೨೫ ಸೈಕಲ್ ಫ್ರೀಕ್ವೆನ್ಸಿ ಹೊಂದುವುದರಿಂದ ಪ್ರಸರಣದಲ್ಲಿ ನಷ್ಟವು ಕಡಿಮೆಯಾಗುತ್ತದೆ ಮತ್ತು ವೋಲ್ಟೇಜ್ ವ್ಯತ್ಯಯವೂ ಕಡಿಮೆಯಾಗುತ್ತದೆ. ಪವರ್ ಫ್ಯಾಕ್ಟರ್ ಕೂಡ ಉತ್ತಮ ಮಟ್ಟದಲ್ಲಿರುತ್ತದೆ. ಇಲ್ಲಿ ವಿದ್ಯುತ್ತನ್ನು ಬೆಳಕಿಗೆ ಉಪಯೋಗಿಸುವ ಅವಕಾಶ ಕಡಿಮೆ ಇರುವುದರಿಂದ ೨೫ ಸೈಕಲ್ಲುಗಳ ಫ್ರೀಕ್ವೆನ್ಸಿ ವಿದ್ಯುತ್ ಯಂತ್ರೋಪಕರಣ ಚಾಲನೆಗೆ ಬಳಸಬಹುದಾಗಿದೆ ಎಂದು ಫೋರ್ಬ್ಸ್ ಅಭಿಪ್ರಾಯಪಟ್ಟರು. ಇದೇ ಅಭಿಪ್ರಾಯವನ್ನು ಜೆ.ಥಾಮ್ಸನರು ಪ್ರತಿಪಾದಿಸಿದರಿಂದ ೪೦ ಸೈಕಲ್‌ಗಳಿಗಿಂತ ಕೆಳಗಿಳಿಯಲು ಒಪ್ಪದ ಬ್ರೌನ್‌ಬೋವೆರಿ ಕಂಪನಿಯ ಕೋರಿಕೆಯನ್ನು ತಿರಸ್ಕರಿಸಿ, ಅಂತಿಮವಾಗಿ ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯನ್ನೇ ಆರಿಸಿಕೊಳ್ಳಲಾಯಿತು. ಈ ನಿರ್ಣಯಗಳೊಂದಿಗೆ ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯ ಪ್ರತಿನಿಧಿ ಶ್ರೀಯುತ ಕೆರೋಲಿನ್‌ರವರನ್ನು ಲಾಬಿನೀರ್ ಭೇಟಿ ಮಾಡಿ ಟೆಂಡರುಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿ ಟೆಂಡರಿನ ಅಂತಿಮ ಮೌಲ್ಯವನ್ನು ೧,೧೧,೩೦೧ ಪೌಂಡ್ ಗಳಿಗೆ ಇಳಿಸಲಾಯ್ತು.[೨೬] ಜುಲೈ ೧೯೦೦ರ ೭ನೇ ತಾರೀಖು ಕಂಪನಿಗೆ ಅಧಿಕೃತ ಒಪ್ಪಿಗೆಯನ್ನು ಕಳುಹಿಸಲಾಯಿತು.

ಟೆಂಡರನ್ನು ಒಪ್ಪಿಕೊಂಡ ೨೦ ತಿಂಗಳಲ್ಲಿ ಕಂಪನಿಯು ಸ್ಥಾವರದ ಯಂತ್ರೋಪಕರಣಗಳ ಸರಬರಾಜು ಮಾಡಿ ಸ್ಥಾಪನೆಯನ್ನು ಮುಗಿಸಬೇಕು. ಎಲ್ಲಾ ಕೆಲಸಗಳೂ ಮುಗಿದು ೧೯೦೨ರ ಮಾರ್ಚ್ ತಿಂಗಳೊಳಗೆ

ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಸರಬರಾಜು ಪ್ರಾರಂಭವಾಗಲೇಬೇಕೆಂಬ ನಿಬಂಧನೆ ಹಾಕಲಾಯಿತು.[೩೦] ಇಲ್ಲದಿದ್ದರೆ ಕಂಪನಿಯು ಅಪಾರ ಪ್ರಮಾಣದ ದಂಡವನ್ನು ತೆರಬೇಕಾಗುತ್ತಿತ್ತು. ಮೈಸೂರು ರಾಜ್ಯದ ಪ್ರಪ್ರಥಮ ಅತೀ ಹೆಚ್ಚಿನ ಹಣ ಹೂಡಿಕೆಯ ಯೋಜನೆ ಇದಾಗಿತ್ತು.

ಹೈಡ್ರಾಲಿಕ್ ಉಪಕರಣಗಳ ಗುತ್ತಿಗೆಯನ್ನು ಜೂರಿಚ್ಚಿನ ಎಶ್ಚರ್‌ವೈಸ್ ಮತ್ತು ಕಂಪನಿಗೆ ವಹಿಸಲಾಯಿತು. ಈ ಕಂಪನಿಗೆ ವಹಿಸುವ ಮುನ್ನ ಅವರ ಟೆಂಡರನ್ನು ಪ್ರೊ.ಉನ್‌ವಿನ್‌ರ(ಆ ಕಾಲದಲ್ಲಿ ನೀರ್ಗಾಲಿ ಮುಂತಾದ ಹೈಡ್ರಾಲಿಕ್ ಉಪಕರಣಗಳ ಪರಿಣಿತರು) ಕೂಲಂಕುಶ ಪರಿವೀಕ್ಷಣೆಗೆ ಒದಗಿಸಲಾಯಿತು. ಮತ್ತು ಅವರ ಸಲಹೆಯನ್ನು ನೂರಕ್ಕೆ ನೂರರಷ್ಟು ಅನುಷ್ಠಾನಕ್ಕೆ ತರಲಾಯಿತು. ಎಶ್ಚರ್ ವೈಸ್ ಕಂಪನಿಯ ಟೆಂಡರಿನ ಮೊಬಲಗು ೨೫,೭೪೮ ಪೌಂಡ್ ಗಳಾಗಿತ್ತು.[೩೧] ಈ ನಡುವೆ ಕ್ಯಾಪ್ಟನ್ ಲಾಬಿನೀರರು, ೧೨ ಫೆಬ್ರವರಿ ೧೯೦೦ರಂದು ತಮ್ಮ ಅಮೇರಿಕಾ, ಯೂರೋಪು ಪ್ರವಾಸದಿಂದ ಹಿಂತಿರುಗಿದರು. ಇಷ್ಟಾದರೂ ಕೋಲಾರದ ಚಿನ್ನದ ಗಣಿ ಮಾಲೀಕರಾಗಿದ್ದ ಜಾನ್ ಟೇಯ್ಲರ್ ಮತ್ತು ಮಕ್ಕಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ಅಂತಿಮವಾಗಿರಲಿಲ್ಲ. ಜೊತೆಗೆ ಮದ್ರಾಸ್ ಸರ್ಕಾರದೊಡನೆ ಕಾವೇರಿ ನೀರಿನ ಕುರಿತು ಒಡಂಬಡಿಕೆ, ಜಿ.ಇ.ಕಂಪನಿಯೊಂದಿಗಿನ ಒಪ್ಪಂದ, ಗಣಿಗಾರಿಕಾ ಕಂಪನಿಗೆ ಅಗತ್ಯವಾದ ವಿತರಣಾ ಉಪಕರಣಗಳ ಕುರಿತು ಒಪ್ಪಂದ, ಹೈಡ್ರಾಲಿಕ್ ಉಪಕರಣಗಳಿಗೆ ಎಶ್ಚರ್ ವೈಸ್ ಮತ್ತು ಕಂಪನಿಯೊಂದಿಗೆ ಒಡಂಬಡಿಕೆ ಮತ್ತು ಕ್ಯಾಪ್ಟನ್ ಜೆ.ಥಾಮ್ಸನ್‌ರನ್ನು ಮೈಸೂರು ಸರ್ಕಾರದ ಲಂಡನ್ ಪ್ರತಿನಿಧಿಯಾಗಿ ತಿಂಗಳಿಗೆ ೫೦೦ ಪೌಂಡ್ ಸಂಬಳದೊಂದಿಗೆ ಮೂರು ವರ್ಷಗಳ ಕಾಲ ಗುತ್ತಿಗೆ ಆಧಾರದಲ್ಲಿ ಇಟ್ಟುಕೊಳ್ಳುವುದು.[೩೨] ಮುಂತಾದ ವಿಷಯಗಳ ಕುರಿತು ಭಾರತ ಸರ್ಕಾರದ ಒಪ್ಪಿಗೆಗಾಗಿ ಅಹವಾಲು ಸಲ್ಲಿಸಲಾಯಿತು.

೨.೬. ಮೈಸೂರು ಸರ್ಕಾರ ಮತ್ತು ಕೆ.ಜಿ.ಎಫ್.ನೊಡನೆ ಅಗತ್ಯ ವಿದ್ಯುತ್ ಖರೀದಿ ಒಪ್ಪಂದ

ಶಿವನಸಮುದ್ರ ಜಲವಿದ್ಯುತ್ ಯೋಜನೆಯಿಂದ ಉತ್ಪಾದಿಸಿದ ವಿದ್ಯುತ್ತನ್ನು ಕೋಲಾರದ ಚಿನ್ನದ ಗಣಿಯಲ್ಲಿನ ಯಂತ್ರೋಪಕರಣ ಚಾಲನೆಗೆ ಅಗತ್ಯ ವಿದ್ಯುತ್ ನೀಡುವ ಸಲುವಾಗಿ ಅಗತ್ಯ ವಿದ್ಯುತ್ ಖರೀದಿ ಮತ್ತು ವಿತರಣೆಯ ಕುರಿತು ಕೂಲಂಕುಷ ಪರಿಶೀಲನೆ ನಡೆದು ಹತ್ತು ವರ್ಷಗಳ ಅವಧಿಗೆ ೪೦೦೦ ಹೆಚ್.ಪಿ. ವಿದ್ಯುತ್ ಖರೀದಿ ಒಪ್ಪಂದವೊಂದಕ್ಕೆ ಬರಲಾಯಿತು.[೩೩]

ಒಪ್ಪಂದದ ಮುಖ್ಯಾಂಶಗಳು

೧. ಕಂಪನಿಯವರು ಪ್ರಾರಂಭದಲ್ಲಿ ಕನಿಷ್ಠ ೪೦೦೦ ಹೆಚ್.ಪಿ.ಯಷ್ಟು ವಿದ್ಯುತ್ತನ್ನು ಖರೀದಿಸಬೇಕು ಹೆಚ್ಚಿನ ವಿದ್ಯುತ್ ಅಗತ್ಯ ಬಿದ್ದರೆ ಕನಿಷ್ಠ ೨೦೦೦ ಹೆಚ್.ಪಿ.ಗೆ ಕಡಿಮೆ ಇಲ್ಲದಂತೆ ಕೋರಿಕೆ ಸಲ್ಲಿಸಬೇಕು.

೨. ವಿದ್ಯುತ್ ಖರೀದಿ ಬೆಲೆಯು ಕಾಲಕ್ಕೆ ಅನುಗುಣವಾಗಿ ಈ ರೀತಿ ಇರುತ್ತದೆ.

ಅ. ವಿದ್ಯುತ್ ಸರಬರಾಜು ಪ್ರಾರಂಭವಾದ ದಿನದಿಂದ ಒಂದು ವರ್ಷ ಅವಧಿಗೆ ಪ್ರತಿ ಹೆಚ್.ಪಿ.ವಿದ್ಯುತ್ತಿಗೆ ವಾರ್ಷಿಕ ೨೯ ಪೌಂಡ್‌ಗಳು (೪೩೫ ರೂ.ಗಳು).

ಆ. ಎರಡು, ಮೂರು ಮತ್ತು ನಾಲ್ಕನೇ ವರ್ಷಕ್ಕೆ ಪ್ರತಿ ಹೆಚ್.ಪಿ.ಗೆ ವಾರ್ಷಿಕ ಬೆಲೆ ೧೮ ಪೌಂಡುಗಳು (೨೭೦ ರೂ.ಗಳು).

ಇ. ಐದನೇ ವರ್ಷ ಈ ಬೆಲೆಯು ಸರ್ಕಾರದ ನಿರ್ಧಾರಕ್ಕೆ ಒಳಪಟ್ಟು ಹೆಚ್.ಪಿ.ಗೆ ೨೪ ಪೌಂಡುಗಳು(೩೬೦ ರೂ.ಗಳು).

ಈ. ಮುಂದಿನ ಐದು ವರ್ಷಗಳಿಗೆ ಪ್ರತಿ ಹೆಚ್.ಪಿ.ಗೆ ವಾರ್ಷಿಕ ೧೦ ಪೌಂಡುಗಳು(೧೫೦ ರೂ.ಗಳು).

೩. ವಿದ್ಯುತ್ ಸರಬರಾಜಿನಿಂದ ಗಣಿಪ್ರದೇಶಗಳಲ್ಲಿ ಅವಘಡಗಳು ಸಂಭವಿಸಿದರೆ ಅದಕ್ಕೆ ಸರ್ಕಾರವೇ ನೇರ ಹೊಣೆಯಾಗಿರುವುದು.

೪. ಗಣಿ ಕಂಪನಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ಸರ್ಕಾರವು ಅದರ ನಷ್ಟವನ್ನು ಭರಿಸಬೇಕಾಗುತ್ತದೆ. ಇಲ್ಲವಾದರೆ ಒಪ್ಪಂದವನ್ನು ತಿರಸ್ಕೃತಗೊಳಿಸಬಹುದಾಗಿತ್ತು.

೫. ಮೈಸೂರು ಸರ್ಕಾರ ಮತ್ತು ಕೋಲಾರದ ಚಿನ್ನದ ಗಣಿ ಕಂಪನಿ ನಡುವಿನ ಒಪ್ಪಂದವನ್ನು ಬ್ರಿಟೀಷ್ ಕಾನೂನಿನ ಚೌಕಟ್ಟಿಗೆ ಒಳಪಟ್ಟಂತೆ ಸಿದ್ಧಪಡಿಸಿಕೊಳ್ಳುವುದು.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ಸರ್ಕಾರ ಮತ್ತು ಜಾನ್ ಟೇಲರ್ ಮತ್ತು ಮಕ್ಕಳ ನಡುವೆ ಒಪ್ಪಂದವೇರ್ಪಟ್ಟು ಯೋಜನೆ ಆರಂಭಕ್ಕೆ ಮತ್ತಷ್ಟು ವೇಗ ದೊರಕಿಸಿಕೊಟ್ಟಿತು.[೩೪] ಇದುವರೆಗೂ ಕೆ.ಜಿ.ಎಫ್ ನಲ್ಲಿ ಉಗಿಶಕ್ತಿಯಿಂದ ಯಂತ್ರೋಪಕರಣ ನಡೆಸಲು ವಾರ್ಷಿಕ ಒಂದು ಹೆಚ್.ಪಿ.ಗೆ ೩೦ ಪೌಂಡ್ ಖರ್ಚಾಗುತ್ತಿದ್ದುದರಿಂದ ವಿದ್ಯುತ್ ಬಳಕೆಯಿಂದ ಮೊದಲ ಹತ್ತು ವರ್ಷಗಳಲ್ಲೇ ಕಂಪನಿಗೆ ಒಟ್ಟು ೫,೭೨,೦೦೦ ಪೌಂಡುಗಳು ಅಂದರೆ ೮೫,೮೦,೦೦೦ ಉಳಿತಾಯ ಸಾಧ್ಯವಾಯಿತು.[೩೫] ೨೮-೭-೧೯೦೦ ರಂದು ವಿವಿಧ ಕಂಪನಿಯವರೊಂದಿಗೆ ಅಂತಿಮವಾಗಿ ವ್ಯವಹರಿಸಲು ಕ್ಯಾಪ್ಟನ್ ಲಾಬಿನೀರ್ ರವರು ಮತ್ತೆ ಇಂಗ್ಲೆಂಡ್, ಅಮೇರಿಕಾಗಳಿಗೆ ತೆರಳಿದರು. ವಿದೇಶಿ ಕಂಪನಿಗಳ ಅಂತಿಮ ಟೆಂಡರ್ ಮೊತ್ತ ಹೀಗಿತ್ತು.

ಉತ್ಪಾದನೆ ಮತ್ತು ನಿರ್ವಹಣೆ (ಜಿ.ಇ.ಕಂ)	೧,೧೧,೩೦೧ ಪೌಂಡ್ಸ್
ವಿತರಣೆ (ಜನರಲ್ ಎಲೆಕ್ಟ್ರಿಕಲ್ಸ್ ಕಂ)	೫೩,೦೦೦ ಪೌಂಡ್ಸ್
ಹೈಡ್ರಾಲಿಕ್ ಯಂತ್ರಗಳು (ಎಶ್ಚರ್ ವೈಸ್ ಕಂ)	೨೬,೬೯೦ ಪೌಂಡ್ಸ್

ಆಧಾರ : ಗೋಪಾಲಕೃಷ್ಣಯ್ಯ ಎಂ., ಹಿಸ್ಟರಿ ಆಫ್ ದಿ ಕಾವೇರಿ ಪವರ್ ಸ್ಕೀಂ, ಬೆಂಗಳೂರು, ೧೯೩೨, ಪು.೨೭

ಈ ನಡುವೆ ಯೋಜನೆಯ ಸ್ಥಳೀಯ ಕೆಲಸಗಳು ಮೈಸೂರು ಸರ್ಕಾರದ ವತಿಯಿಂದ ಪ್ರಾರಂಭವಾಗಬೇಕಿತ್ತು. ಎಲ್ಲಕ್ಕಿಂತ ಮೊದಲು ನದಿಯ ಹರಿವಿನ ಪ್ರಮಾಣವನ್ನು ನಿಖರವಾಗಿ ನಿರ್ಧರಿಸಿ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕಿತ್ತು. ೪೦೦೦ ಹೆಚ್.ಪಿ.ವಿದ್ಯುತ್ತನ್ನು ನಿರಂತರವಾಗಿ ಉತ್ಪಾದಿಸಲು ೧೮೧ ಕ್ಯೂಸೆಕ್ಸ್ ನೀರು ಅಗತ್ಯವೆಂದು ಅಂದಾಜಿಸಲಾಯ್ತು. ಆದರೆ ಇದುವರೆಗೆ ನೀರಿನ ಹರಿವಿನ ಕನಿಷ್ಠ ಪ್ರಮಾಣವನ್ನು ೧೮೯೪ರಲ್ಲಿ ೩೩೮೨ ಕ್ಯೂಸೆಕ್ಸ್ ಎಂದೂ, ೧೮೯೯ರಲ್ಲಿ ೮೦೦ ಕ್ಯೂಸೆಕ್ಸ್ ಎಂದೂ ಅಳೆಯಲಾಗಿತ್ತಾದರೂ ಎರಡು ಅಳತೆಗಳು ಸಮರ್ಪಕವಲ್ಲ ಎಂದು ತೀರ್ಮಾನಿಸಲಾಯಿತು.[೩೬]

ನೀರಿನ ಹರಿವಿನ ಪ್ರಮಾಣ ನಿರ್ಧರಿಸಲು ಎರಡು ಚಿಕ್ಕ ಡ್ಯಾಮುಗಳನ್ನು ಕಟ್ಟುವ ಅವಶ್ಯಕತೆಯಿತ್ತು. ಅದಕ್ಕಾಗಿ ಮದ್ರಾಸ್ ಸರ್ಕಾರದ ಅನುಮತಿ ಕೇಳಲಾಯಿತು. ೧೮೯೨ರ ಕಾವೇರಿ ನದಿ ನೀರಿನ ಹಂಚಿಕೆಯ ಒಪ್ಪಂದದಂತೆ ಕಾವೇರಿ ನದಿಯ ಯಾವುದೇ ಕಾಮಗಾರಿಗೆ ಪರಸ್ಪರ ಒಪ್ಪಿಗೆಯ ಅವಶ್ಯಕತೆಯಿತ್ತು.[೩೭] ಈ ಎರಡೂ ತಾತ್ಕಾಲಿಕ ಡ್ಯಾಮುಗಳನ್ನು ಅಂತಿಮವಾಗಿ ಯೋಜನೆಗೆ ಅಗತ್ಯವಿರುವ ಸ್ಥಳದಲ್ಲಿಯೇ ಕಟ್ಟಲು ನಿರ್ಧರಿಸಲಾಯಿತು. ಒಂದನ್ನು ದಕ್ಷಿಣವಾಹಿನಿಗೆ ಅಡ್ಡವಾಗಿ ಎಲ್ಲ ನೀರನ್ನು ಬೇಸಿಗೆಯಲ್ಲಿ ಉತ್ತರವಾಹಿನಿಗೆ ಹರಿಸಲು ಅನುವಾಗುವಂತೆ ಇನ್ನೊಂದನ್ನು ಉತ್ತರ ವಾಹಿನಿಗೆ ಅಡ್ಡವಾಗಿ, ಅದರ ಹರಿವಿನ ಪ್ರಮಾಣವನ್ನು ನಿರ್ಧರಿಸಲು ಅನುಕೂಲವಾಗುವಂತೆ ನಿರ್ಮಿಸಲು ತೀರ್ಮಾನಿಸಲಾಯಿತು.

ಕಾವೇರಿಯ ಪ್ರಸ್ತಾಪ ಬಂದಾಗ ನೂರು ವರ್ಷಗಳ ಹಿಂದೆ ಕೂಡ ಇಂದಿನಂತೆಯೇ ವಿಚಾರ ಕಾವೇರಿತ್ತಿತ್ತು. ಮದ್ರಾಸ್ ಸರ್ಕಾರ ಒಪ್ಪಿಗೆ ಕೇಳುವಾಗ ಮೈಸೂರು ಸರ್ಕಾರವು ಈ ರೀತಿ ಉತ್ತರವಾಹಿನಿಯಿಂದ ದಕ್ಷಿಣವಾಹಿನಿಗೆ ನೀರು ಹರಿಸಿದರೆ ಅದರಿಂದ ಮೈಸೂರು ದರ್ಬಾರಿಗೆ ೧೫,೦೦೦ ರೂಪಾಯಿ ಉಳಿತಾಯವಾಗುವುದೆಂದು, ಈ ಸೌಲಭ್ಯ ಕಲ್ಪಿಸಿದರೆ ವಾರ್ಷಿಕ ೫೦೦ ರೂಪಾಯಿ ಬಾಡಿಗೆಯನ್ನು ಕೊಡುವುದಾಗಿಯೂ ಹೇಳಿತ್ತಾದರೂ ಮದ್ರಾಸ್ ಸರ್ಕಾರ ಸಕಾಲಕ್ಕೆ ಒಪ್ಪಿಗೆ ನೀಡಲಿಲ್ಲ.[೩೮] ನೀರಿನ ಹರಿವಿನ ಪ್ರಮಾಣ ತಿಳಿಯಲು ತಾತ್ಕಾಲಿಕವಾಗಿ ಮರಳು ಚೀಲಗಳನ್ನು ಪೇರಿಸಿ, ನೀರನ್ನು ತಡೆದು ಮಾರ್ಚ್ ೨೪, ೧೯೦೦ ರಂದು ನಿಖರವಾದ ನೀರಿನ ಹರಿವಿನ ಪ್ರಮಾಣವನ್ನು ನಿರ್ಧರಿಸುವ ಕಾರ್ಯವನ್ನು ಆರಂಭಿಸಲಾಯಿತು. ಈ ಅಳತೆಯಿಂದ ಬೇಸಿಗೆಯಲ್ಲಿ ಹರಿವಿನ ಪ್ರಮಾಣ ೯೫ ಕ್ಯೂಸೆಕ್ಸ್ ಎಂದು ತಿಳಿದುಕೊಳ್ಳಲಾಯಿತು.

ಈ ಅಳತೆಯಿಂದ ತಿಳಿದುಬಂದ ಅಂಶವೆಂದರೆ ಬೇಸಿಗೆಯಲ್ಲಿ ಹರಿಯುವ ನೀರಿನ ಪ್ರಮಾಣದಿಂದ ೪೦೦೦ ಹೆಚ್.ಪಿ ವಿದ್ಯುತ್ ಉತ್ಪಾದಿಸಲು ಸಾಧ್ಯವಾಗುವುದಿಲ್ಲ. ಜಲಪಾತದಿಂದ ೨೦ ಮೈಲಿಗಳ ದೂರದ ತಲಕಾಡು ಎಂಬಲ್ಲಿ 'ಮಾಧವ ಮಂತ್ರಿ' ಅಣೆಕಟ್ಟನ್ನು ಒಂದೂವರೆ ಅಡಿಯಷ್ಟು ಎತ್ತರಿಸುವುದರಿಂದ ಅದರ ಒಟ್ಟು ಶೇಖರಣಾ ಸಾಮರ್ಥ್ಯ ೩೧೩ ದಶಲಕ್ಷ ಘನ ಅಡಿ ಆಗುವುದೆಂದು ಅಂದಾಜು ಮಾಡಲಾಯಿತು[೩೯]

ಬಿರು ಬೇಸಿಗೆಯ ಹರಿವಿನ ಪ್ರಮಾಣ ೬೫ ಕ್ಯೂಸೆಕ್ಸ್. ಆದರೆ ೪೦೦೦ ಹೆಚ್.ಪಿ. ನೀರಿನ ಅಗತ್ಯ. ೧೮೧ ಕ್ಯೂಸೆಕ್ಸ್ ಅಂದರೆ ಕಡಿಮೆ ಬೀಳುವ ನೀರಿನ ಪ್ರಮಾಣ ೮೭ ಕ್ಯೂಸೆಕ್ಸ್. ೧೮೯೬ರಲ್ಲಿ ಈ ಅಳತೆ ನಡೆದಿದ್ದು ಆ ವರ್ಷ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯು ಸರಾಸರಿಗಿಂತ ಅತ್ಯಂತ ಕಡಿಮೆಯಾಗಿತ್ತು. ಆದ್ದರಿಂದ ಮಾಧವಮಂತ್ರಿ ಅಣೆಕಟ್ಟನ್ನು ಒಂದೂವರೆ ಅಡಿ ಎತ್ತರಿಸಿ, ನೀರಿನ ಕೊರತೆ ತುಂಬಿಕೊಳ್ಳಲು ತೀರ್ಮಾನಿಸಲಾಯಿತು.

ಯೋಜನೆಗೆ ನೀರನ್ನು ಉತ್ಪಾದನಾ ಸ್ಥಳಕ್ಕೆ ತಿರುಗಿಸುವ ಸಲುವಾಗಿ ಚಾನಲ್‌ಗಳ ನಿರ್ಮಾಣ ಕಾರ್ಯ, ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸ್ಥಾವರದ ಜಾಗವನ್ನು ನಿರ್ಧರಿಸುವ, ಅಲ್ಲದೇ ಕೋಲಾರಕ್ಕೆ ಪ್ರಸರಣ ಮಾರ್ಗ ನಿರ್ಮಿಸುವ ಜಾಗವನ್ನು ವಶಪಡಿಸಿಕೊಳ್ಳುವ ಕೆಲಸಗಳು ಅತ್ಯಂತ ತುರ್ತಾಗಿ ಆಗಬೇಕಿತ್ತು.

೨.೭. ಯೋಜನೆಗೆ ಸಂಬಂಧಿಸಿದಂತೆ ಮೈಸೂರು ಮತ್ತು ಮದ್ರಾಸ್ ಸರ್ಕಾರಗಳ ನಡುವೆ ಒಪ್ಪಂದ

ಮೈಸೂರು ಸರ್ಕಾರ ಈ ಯೋಜನೆಯಲ್ಲಿ ಮುಂದುವರಿಯುವುದಕ್ಕೆ ಮೊದಲು ಮದ್ರಾಸ್ ಸರ್ಕಾರದೊಂದಿಗೆ ಕಾವೇರಿ ನೀರಿನ ಹಕ್ಕಿನ ಪ್ರಶ್ನೆಯನ್ನು ಇತ್ಯಾರ್ಥಗೊಳಿಸಿಕೊಳ್ಳಬೇಕಿತ್ತು. ಮೈಸೂರು ಮದ್ರಾಸ್ ಸರ್ಕಾರದಿಂದ ಎರಡು ವಿಧವಾದ ಹಕ್ಕುಗಳನ್ನು ಪಡೆಯುವ ಪತ್ರವ್ಯವಹಾರವು ಹಲವಾರು ತಿಂಗಳುಗಳ ಕಾಲ ನಡೆಯಿತು.

ಅಂತಿಮವಾಗಿ ಮದ್ರಾಸ್ ಸರ್ಕಾರ ಕಾವೇರಿ ಜಲಪಾತವು ಮದ್ರಾಸ್‌ನ ಯಾವುದೇ ಕೇಂದ್ರಕ್ಕಿಂತ ಮೈಸೂರು, ಬೆಂಗಳೂರು ಮತ್ತು ಕೋಲಾರ ಚಿನ್ನದ ಗಣಿಗಳಿಗೆ ಹತ್ತಿರವಿರುವುದರಿಂದ ಮೈಸೂರು ಜಲಪಾತದ ನೀರನ್ನು ಸಮರ್ಥವಾಗಿ ಬಳಸಿಕೊಳ್ಳಬಹುದೆಂಬ ಅಂಶದ ಮೇಲೆ ಸಮ್ಮತಿ ನೀಡಿತು. ದಿವಾನರಾದ ಶೇಷಾದ್ರಿ ಅಯ್ಯರ್‌ರವರು ಅನುಮತಿ ಪಡೆಯುವಲ್ಲಿ ಯಶಸ್ವಿಯಾದರು.[೪೦]

ಮದ್ರಾಸ್ ಸರ್ಕಾರವು ಕೆಲ ಷರತ್ತುಗಳ ಆಧಾರದ ಮೇಲೆ ಕಾವೇರಿ ನೀರನ್ನು ಜಲ ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಲು ಅನುಮತಿ ನೀಡಿತು. ಆ ಷರತ್ತುಗಳೆಂದರೆ ಎರಡು ವರ್ಷಗಳಲ್ಲಿ ಮೈಸೂರು ಕಾವೇರಿ ಜಲಪಾತದ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಬೇಕಿತ್ತು. ಇಲ್ಲವಾದರೆ ಒಪ್ಪಂದವು ಕೊನೆಗೊಳ್ಳುವುದಾಗಿ ತಿಳಿಸಿ, ಮೈಸೂರು ರಾಜ್ಯಕ್ಕೆ ೫೦ ವರ್ಷಗಳ ಅವಧಿಯವರೆಗೆ ವಿದ್ಯುತ್ ಉತ್ಪಾದಿಸಲು ಅನುಮತಿ ನೀಡಲಾಯಿತು. ಮತ್ತು ಒಟ್ಟು ಲಾಭದಲ್ಲಿ ಶೇ.೨೦ ಭಾಗವನ್ನು ಮದ್ರಾಸ್‌ಗೆ ನೀಡಬೇಕಿತ್ತು. ಮೈಸೂರು ಸರ್ಕಾರವು ಈ ಒಪ್ಪಂದವನ್ನು ಒಪ್ಪಿಕೊಂಡಿತು. ಆದರೆ ಷರತ್ತುಗಳ ಬಗ್ಗೆ ಪರಿಶೀಲಿಸಬೇಕೆಂದು

ತಿಳಿಸಿತು. ಅದಕ್ಕಾಗಿ ರೆಸಿಡೆಂಟಿನ ಮೂಲಕ ಪ್ರಯತ್ನ ನಡೆಸಿತು. ಮದ್ರಾಸ್ ಸರ್ಕಾರದ ನೀರಾವರಿ ಇಲಾಖೆಯ ಸೆಕ್ರೆಟರಿಯಾಗಿದ್ದ ಮಿ.ಹ್ಯೂಸ್ ಮದ್ರಾಸ್ ವಿಧಿಸಿದ ಶೇ.೨೦ ಲಾಭದ ಭಾಗವು ವಿಪರೀತವೆಂದು ಟೀಕಿಸಿದ.

ಅದಕ್ಕೆ ಬದಲಾಗಿ ಮದ್ರಾಸ್ ತನ್ನ ಭಾಗವೆಂದು ಒಂದು ಅಶ್ವಶಕ್ತಿ ವಿದ್ಯುತ್ತಿಗೆ ೫ ರೂಪಾಯಿಗಳನ್ನು ಮೈಸೂರು ಸರ್ಕಾರದಿಂದ ಪಡೆಯಬೇಕೆಂದು ತಿಳಿಸಿದ. ಅದರಂತೆ ಮದ್ರಾಸ್ ಸರ್ಕಾರವು ಕಾವೇರಿ ಜಲಪಾತದ ನೀರಿನ ಬಳಕೆಯ ಕಾಲದ ಮಿತಿಯನ್ನು ೩೦ ವರ್ಷಗಳಿಗೂ ಮತ್ತು ಒಂದು ಅಶ್ವಶಕ್ತಿ ವಿದ್ಯುತ್‌ಗೆ ೫ ರೂಪಾಯಿಗಳೆಂದು ರಿಯಾಯಿತಿ ನೀಡಿತು.[೪೦] ಮೈಸೂರು ಸರ್ಕಾರವು ಈ ರಿಯಾಯಿತಿಯ ಅನುಮತಿಯನ್ನು ಒಪ್ಪಿಕೊಂಡಿತು. ಮದ್ರಾಸ್ ಸರ್ಕಾರದಿಂದ ಅನುಮತಿ ದೊರೆತ ಮೇಲೆ ಮೈಸೂರು ಸರ್ಕಾರವು ಯೋಜನೆಗೆ ಅನುಮತಿ ನೀಡುವಂತೆ ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಿತು. ಭಾರತ ಸರ್ಕಾರವು ೧೯೦೦ರ ಮಾರ್ಚ್ ೨೭ರಂದು ಕಾವೇರಿ ಜಲವಿದ್ಯುತ್ ಯೋಜನೆಗೆ ಅನುಮತಿ ನೀಡಿತು.[೪೧]

ಈ ಯೋಜನೆಯ ವಿಷಯವಾಗಿ ಮೈಸೂರು, ಮದ್ರಾಸ್ ಸರ್ಕಾರದ ಮೂಲಕ ಬಾಹ್ಯ ವಿರೋಧವನ್ನು ಎದುರಿಸಬೇಕಾಯಿತು. ಅದಕ್ಕೆ ಕಾರಣ ಮೈಸೂರು ಬ್ರಿಟೀಷ್ ಸಾಮ್ರಾಜ್ಯದೊಂದಿಗೆ ಮಾಡಿಕೊಂಡಿದ್ದ ೧೮೦೦ರ ಶ್ರೀರಂಗಪಟ್ಟಣ ಒಪ್ಪಂದ ಮತ್ತು ೧೮೮೧ರ ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫಾರ್ ನಿಯಮಗಳೇ ಆಗಿದ್ದವು. ಆ ನಿಯಮಗಳು ಮೈಸೂರನ್ನು ಬ್ರಿಟೀಷ್ ಭಾರತ ಸಾಮ್ರಾಜ್ಯದ ಕಪಿಮುಷ್ಠಿಯ ಸಾಮಂತ ರಾಜ್ಯವಾಗಿ ಮಾರ್ಪಡಿಸಿದ್ದವು.

ಮೈಸೂರು ತನ್ನ ಪ್ರಾಂತ್ಯದಲ್ಲೇ ಹರಿಯುವ ಕಾವೇರಿ ಜಲಪಾತದ ನೀರನ್ನು ಬಳಸಿಕೊಳ್ಳಲು ಮದ್ರಾಸ್ ಮತ್ತು ಬ್ರಿಟೀಷ್ ಭಾರತದ ಅನುಮತಿ ಪಡೆಯುವುದು ಅತ್ಯಾವಶ್ಯಕವಾಗಿತ್ತೆಂಬುದು ಅದರ ಸಾಮಂತತನವನ್ನು ಹಾಗೂ ಬ್ರಿಟೀಷರ ಅಪರೋಕ್ಷ ಹತೋಟಿಯನ್ನು ಸ್ಪಷ್ಟಪಡಿಸುತ್ತದೆ.[೪೨]

ಶತಮಾನಗಳಿಂದ ನೈಸರ್ಗಿಕವಾಗಿ ಹರಿದು ಹೋಗುತ್ತಿದ್ದ ಕಾವೇರಿ ಜಲಪಾತದ ನೀರನ್ನು ಮೈಸೂರು ಸರ್ಕಾರವು ವಿದ್ಯುತ್ ಉತ್ಪಾದನೆಗೆ ಬಳಸಲು ಮುಂದಾದಾಗ ಮದ್ರಾಸ್ ವಿರೋಧಿಸಿತು. ಕಾರಣವೆಂದರೆ ಮದ್ರಾಸ್ ಪ್ರಾಂತ್ಯ ಬ್ರಿಟೀಷರ ನೇರ ಆಡಳಿತಕ್ಕೆ ಒಳಪಟ್ಟ ಪ್ರದೇಶ, ಮೈಸೂರು ಸಂಸ್ಥಾನವು ಬ್ರಿಟೀಷರ ಅಪರೋಕ್ಷ ಆಡಳಿತಕ್ಕೆ ಒಳಪಟ್ಟ ಪ್ರದೇಶ. ಮೈಸೂರಿನಲ್ಲಿ ಈ ರೀತಿಯ ಯೋಜನೆಗಳು ಕಾರ್ಯರೂಪಕ್ಕೆ ಬಂದರೆ ನೇರ ಆಳ್ವಿಕೆಗೆ ಒಳಪಟ್ಟ ಮದ್ರಾಸ್ ಪ್ರಾಂತ್ಯದ ಅಧಿಕಾರಿಗಳಿಗೆ ಮುಜುಗರವಾಗುವುದು ಸಹಜ, ಏಕೆಂದರೆ ತಮ್ಮ ಆಶ್ರಿತ ದೇಶಿಸಂಸ್ಥಾನವೊಂದು ವಿಶ್ವಮಟ್ಟದಲ್ಲೇ ಶ್ರೇಷ್ಟವಾದ ಯೋಜನೆಯನ್ನು ಸಾಧಿಸಿದರೆ ಅದರ ಹಿರಿಮೆ ಹೆಚ್ಚಬಹುದು ಎಂಬ ಭಾವನೆ. ಅಲ್ಲದೇ ತಮ್ಮ ಆಡಳಿತದಲ್ಲಿನ ಪ್ರದೇಶದ ಅಭಿವೃದ್ಧಿಗೆ ಯಾವುದೇ ಯೋಜನೆ ರೂಪಿಸುವಲ್ಲಿ ಇಲ್ಲಿನ ಅಧಿಕಾರಿಗಳು ವಿಫಲಗೊಂಡಿದ್ದಾರೆ ಎಂಬ ಜನರ ತಿಳುವಳಿಕೆಯ ಹಿನ್ನೆಲೆಯಲ್ಲಿ ಮದ್ರಾಸ್, ಮೈಸೂರಿನ ಈ ಯೋಜನೆಗೆ ವಿರೋಧಿಸುವ ಮೂಲಕ ತಮ್ಮ ಅಸಮಾಧಾನ

ತೋರ್ಪಡಿಸುತ್ತಾರೆ. ಅಲ್ಲದೇ ಅಧಿಕಾರ ಚಲಾಯಿಸಲು ಮುಂದಾಗುತ್ತಾರೆ. ಕೆಲವು ಷರತ್ತುಗಳನ್ನು ವಿಧಿಸಿ ಯೋಜನೆಗೆ ಸಮ್ಮತಿ ಸೂಚಿಸುತ್ತಾರೆ. ಇದರ ಹಿನ್ನೆಲೆಯಾಗಿ ಯೋಜನೆಗೆ ಕಾರ್ಯತಂತ್ರ ರೂಪಿಸಿದವರು ಬ್ರಿಟೀಷ್ ಅಧಿಕಾರಿಗಳು, ಯೋಜನೆಯ ಲಾಭವನ್ನು ಪಡೆಯಲು ಮುಂದಾದವರು ಜಾನ್ ಟೇಲರ್, ಕೋಲಾರದ ಚಿನ್ನದ ಗಣಿ ಮಾಲೀಕ ಇವರು ಬ್ರಿಟನ್‌ರವರು ಎಲ್ಲರೂ ಬ್ರಿಟೀಷರೇ ಆದ ಕಾರಣ ಯೋಜನೆಗೆ ವಿರೋಧ ಶಮನಗೊಳಿಸಿ ಬೇಗನೇ ಕಾರ್ಯರೂಪಕ್ಕೆ ಬರಲು ಸಹರಿಸಿದರು ಎನ್ನಬಹುದು.

ಈ ಎಲ್ಲಾ ಕಾರ್ಯಕ್ರಮಗಳ ಅಂತಿಮ ಹಂತವಾಗಿ ಶಿವನಸಮುದ್ರ ಯೋಜನೆಯ ಪ್ರಥಮ ಹಂತದ ಅಂದಾಜು ಪಟ್ಟಿಯನ್ನು ತಯಾರಿಸಿ ರೀಜೆಂಟ್ ಮಹಾರಾಣಿಯವರಾಗಿದ್ದ ಕೆಂಪನಂಜಮ್ಮಣ್ಣಿಯವರ ಮಂಜೂರಾತಿಗೆ ಸಲ್ಲಿಸಲಾಯಿತು.[೧೪] ದಿನಾಂಕ ೩೧-೮-೧೯೦೦ರಂದು ಶಿವನಸಮುದ್ರ ವಿದ್ಯುತ್ ಯೋಜನೆ ವಾಣಿ ವಿಲಾಸ ಸನ್ನಿಧಿಯಿಂದ ಅಂಕಿತ ಪಡೆದು ಕಾರ್ಯಾರಂಭ ಮಾಡಿತು.

ಅಡಿ ಟಿಪ್ಪಣಿಗಳು

೧. ಲಕ್ಷ್ಮಣ ತೆಲಗಾವಿ(ಸಂ), ಸದಾಶಿವರವರ ಲೇಖನ, ಚರಿತ್ರೆ ಅಧ್ಯಯನ, ೨೦೦೬, ಪು.೧೯

೨. ಅದೇ

೩. ಗಜಾನನ ಶರ್ಮ, ಬೆಳಕಾಯಿತು ಕರ್ನಾಟಕ, ೨೦೦೩, ಪು.೨೦

೪. ಲಕ್ಷ್ಮಣ ತೆಲಗಾವಿ(ಸಂ), ಪೂರ್ವೋಕ್ತ, ಪು.೨೦

೫. ಗುಂಡಪ್ಪ ಡಿ.ವಿ., ಮೈಸೂರಿನ ದಿವಾನರುಗಳು, ೧೯೭೧, ಪು.೧೭

೬. ಹಯವದನರಾವ್ ಸಿ., ಮೈಸೂರು ಗೆಜೆಟಿಯರ್, ಸಂ.III ಎಕನಾಮಿಕ್, ೧೯೩೦, ಪು.೨೨೨.

೭. ಲಕ್ಷ್ಮಣ ತೆಲಗಾವಿ(ಸಂ), ಪೂರ್ವೋಕ್ತ, ಪು.೨೧.

೮. ಶಾಮರಾವ್ ಎಂ., ಮಾಡರ್ನ್ ಮೈಸೂರು, ಸಂಪುಟ.II, ೧೯೩೬, ಪು.೧೮೦

೯. ಗೋಪಾಲಕೃಷ್ಣಯ್ಯ ಎಂ., ಹಿಸ್ಟರಿ ಆಫ್ ಕಾವೇರಿ ಪವರ್ ಸ್ಕೀಮ್, ೧೯೩೨, ಪು.೮

೧೦. ಗಜಾನನ ಶರ್ಮ, ಪೂರ್ವೋಕ್ತ, ಪು.೨೮

೧೧. ಶಾಮರಾವ್ ಎಂ., ಪೂರ್ವೋಕ್ತ, ಪು.೧೮೧

೧೨. ಹಯವದನರಾವ್ ಸಿ., ಪೂರ್ವೋಕ್ತ, ಪು.೨೨೨

೧೩. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೮

೧೪. ಶಾಮರಾವ್ ಎಂ., ಪೂರ್ವೋಕ್ತ, ಪು.೧೮೧

೧೫. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೯

೧೬. ಲಕ್ಷ್ಮಣ್ ತೆಲಗಾವಿ(ಸಂ), ಪೂರ್ವೋಕ್ತ, ಪು.೨೨

೧೭. ಅದೇ, ಪು.೨೩

೧೮. ನಂಜರಾಜ ಅರಸು ಪಿ.ವಿ., ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ೨೦೦೭, ಪು.೨೪೪.

೧೯. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೧೧

೨೦. ಹಯವದನರಾವ್ ಸಿ., ಪೂರ್ವೋಕ್ತ, ಪು.೨೨೩

೨೧. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೧೨

೨೨. ಅದೇ, ಪು.೧೭

೨೩. ಬರಗೂರು ರಾಮಚಂದ್ರಪ್ಪ(ಪ್ರ.ಸಂ), ಕರ್ನಾಟಕ ಸಂಗಾತಿ, ೨೦೦೨, ಪು.೭೩೧

೨೪. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೧೮

೨೫. ಅದೇ, ಪು.೧೯

೨೬. ಅದೇ, ಪು.೨೦

೨೭. ಅದೇ

೨೮. ಅದೇ, ಪು.೨೨

೨೯. ಅದೇ

೩೦. ಗಜಾನನ ಶರ್ಮ, ಪೂರ್ವೋಕ್ತ, ಪು.೩೧.

೩೧. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೨೩.

೩೨. ಅದೇ, ಪು.೨೪

೩೩. ಸುಂದರ ರಾವ್ ಬ.ನ., ಬೆಂಗಳೂರಿನ ಇತಿಹಾಸ, ೧೯೮೫, ಪು.೪೨೮

೩೪. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೨೬

೩೫. ಗಜಾನನಶರ್ಮ, ಪೂರ್ವೋಕ್ತ, ಪು.೩೨

೩೬. ಅದೇ

೩೭. ಅದೇ

೩೮. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೩೦

೩೯. ಅದೇ, ಪು.೩೧

೪೦. ಚಂದ್ರಶೇಖರ್ ಎನ್.ಎಸ್., ದಿವಾನ್ ಶೇಷಾದ್ರಿ ಐಯ್ಯರ್, ೧೯೮೧, ಪು.೧೪೮

೪೧. ಗಜಾನನ ಶರ್ಮ, ಪೂರ್ವೋಕ್ತ, ಪು.೩೩

೪೨. ಚಂದ್ರಶೇಖರ್ ಎನ್.ಎಸ್., ಪೂರ್ವೋಕ್ತ, ಪು.೧೪೮

೪೩. ಲಕ್ಷ್ಮಣ ತೆಲಗಾವಿ(ಸಂ), ಪೂರ್ವೋಕ್ತ, ಪು.೨೭

೪೪. ಗಜಾನನ ಶರ್ಮ, ಪೂರ್ವೋಕ್ತ, ಪು.೩೪

ಅಧ್ಯಾಯ ೩

ಶಿವನಸಮುದ್ರ ಜಲವಿದ್ಯುತ್ ಯೋಜನೆ ಬೆಳೆದುಬಂದ ಹಾದಿ

೩

ಶಿವನಸಮುದ್ರ ಜಲವಿದ್ಯುತ್ ಯೋಜನೆ ಬೆಳೆದುಬಂದ ಹಾದಿ

೧೯೦೨ರಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆ ೬೦೦೦ ಹೆಚ್.ಪಿ. ವಿದ್ಯುತ್ ಉತ್ಪಾದನೆಯಿಂದ ಆರಂಭಿಸಿ ೧೯೨೮ರಲ್ಲಿ ೩೫,೦೦೦ ಹೆಚ್.ಪಿ.ವಿದ್ಯುತ್ತನ್ನು ಉತ್ಪಾದಿಸುವ ಹಂತಕ್ಕೆ ಬಂದಿತು. ಆರಂಭದಿಂದ ಎಂಟು ಪಟ್ಟು ಹೆಚ್ಚು ವಿಸ್ತಾರತೆಯನ್ನು ಪಡೆಯಿತು.[1] ಅಲ್ಲದೇ ಯೋಜನೆಯು ೯ ಹಂತಗಳಲ್ಲಿ ಆಧುನಿಕ ಯಂತ್ರೋಪಕರಣಗಳು, ಅಧಿಕ ಸಾಮರ್ಥ್ಯದ ಟರ್ಬೈನ್‌ಗಳು, ಜನರೇಟರ್‌ಗಳು ಮತ್ತು ಕಾಮಗಾರಿಗಳ ಹಿನ್ನೆಲೆಯಲ್ಲಿ ಪ್ರಗತಿ ಕಂಡವು, ಮುಖ್ಯವಾಗಿ ಕೈಗಾರಿಕೆಗಳು, ಸಾರ್ವಜನಿಕ ಬೀದಿದೀಪಗಳು ಹೀಗೆ ಹತ್ತು ಹಲವು ಕಾರ್ಯಗಳಿಗೆ ವಿದ್ಯುಚ್ಛಕ್ತಿ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗ ತೊಡಗಿತು.

ಯೋಜನೆಯ ಮೊದಲ ಹಂತದಲ್ಲಿ ಕೋಲಾರದ ಚಿನ್ನದ ಗಣಿಗೆ ಮಾತ್ರ ವಿದ್ಯುತ್ ಪೂರೈಕೆ ಮಾಡಲಾಯಿತು. ನಂತರದ ವಿಸ್ತರಣೆಗಳಲ್ಲಿ ಕೋಲಾರದ ಗಣಿಯಿಂದ ಹೆಚ್ಚಿನ ಬೇಡಿಕೆಬಂದ ಹಿನ್ನೆಲೆಯಲ್ಲಿ ಅಧಿಕ ವಿದ್ಯುತ್ ಉತ್ಪಾದಿಸಿ, ಸೀಮಿತ ಅವಧಿಗಳಲ್ಲಿ ಕೆಲವು ಪ್ರಮುಖ ನಗರಗಳಿಗೆ, ತಾಲ್ಲೂಕು ಮತ್ತು ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲಾಯಿತು. ಆರಂಭದಲ್ಲಿ ಒಂದು ಸಣ್ಣ ಯೋಜನೆಯಾಗಿ ಪ್ರಾರಂಭವಾಗಿ ೧೯೩೮ರ ವೇಳೆಗೆ ಸುಮಾರು ೬೦,೦೦೦ ಹೆಚ್.ಪಿ.ವಿದ್ಯುತ್ತನ್ನು ಉತ್ಪಾದಿಸಿ ಒಂದು ಬೃಹತ್ ಇಲಾಖೆಯ ಪ್ರತಿರೂಪವನ್ನು ಪಡೆಯಿತು. ಪ್ರತಿಯೊಂದು ವಿಸ್ತರಣೆಯಲ್ಲೂ ಯೋಜನೆಯ ಸ್ವರೂಪ, ವ್ಯಾಪ್ತಿಯು ಸಹ ವಿಸ್ತರಿಸಿದ್ದು, ವಿದ್ಯುತ್ ಎಂಬ ವಾಹಕ ತನ್ನ ಜಾಲವನ್ನು ವಿಸ್ತರಿಸಿದ ಬಗೆ ಆಶ್ಚರ್ಯಕರ.

೩.೧. ಮೊದಲನೆಯ ಹಂತದ ವಿಸ್ತರಣೆ

ಸತತ ಪರಿಶ್ರಮದ ನಡುವೆ ಶಿವನಸಮುದ್ರ ಜಲವಿದ್ಯುದಾಗರವು ೩೦-೬-೧೯೦೨ರಲ್ಲಿ ಪ್ರಾರಂಭವಾಯಿತು. ಈ ಮೊದಲ ಹಂತದಲ್ಲಿ ಉತ್ಪಾದಿಸಲಾದ ವಿದ್ಯುತ್ತನ್ನು ವಿವಿಧ ಪರೀಕ್ಷೆಗೆ ಒಳಪಡಿಸಿದ ನಂತರ ಜುಲೈ ೧೫, ೧೯೦೨ರಲ್ಲಿ ಶಿವನಸಮುದ್ರದಿಂದ ಕೆ.ಜಿ.ಎಫ್.ಗೆ ನಿರಂತರ ವಿದ್ಯುತ್ ಹರಿವನ್ನು ಪ್ರಾರಂಭಿಸಲಾಯಿತು.

[illegible]

[illegible]

[illegible]

[illegible]

[illegible]

ಮೊದಲ ಹಂತದ ವಿಸ್ತರಣೆಯಲ್ಲಿ ಕೈಗೊಂಡ ಪ್ರಮುಖ ಕಾಮಗಾರಿಗಳು

ಅ. ವಿದ್ಯುದಾಗರಕ್ಕೆ ನೀರೊದಗಿಸುವ ವ್ಯವಸ್ಥೆ

೧. ಮಾಧವ ಮಂತ್ರಿ ಅಣೆಕಟ್ಟೆಯಲ್ಲಿ ಸಂಗ್ರಹವಾದ ಕಾವೇರಿ ನೀರನ್ನು ಪಶ್ಚಿಮವಾಹಿನಿಗೆ ಹರಿಯುವಂತೆ ಮಾಡಿ ಆ ಭಾಗದಲ್ಲಿ ಅಣೆಕಟ್ಟೆಯೊಂದನ್ನು ಕಟ್ಟಿ ನೀರನ್ನು ಸಂಗ್ರಹಿಸುವುದು.

೨. ಈ ಮುಖ್ಯ ಅಣೆಕಟ್ಟೆಯಿಂದ ನೀರು ಸ್ಲೂಯಿಸ್ ಗೇಟುಗಳ ಮೂಲಕ ಚಾನಲ್ ಪ್ರವೇಶಿಸುತ್ತದೆ. ಎರಡೂ ಚಾನಲ್‌ಗಳ ಪ್ರಾರಂಭದಲ್ಲಿ ೪೫x೫ ಅಡಿಗಳ ಎಂಟು ಗೇಟ್‌ಗಳಿದ್ದು ಪ್ರತಿ ಕಾಲುವೆಗೂ ನಾಲ್ಕು ಗೇಟುಗಳ ಮೂಲಕ ನೀರು ಹರಿಸಲಾಗುತ್ತದೆ.

೩. ಎರಡು ಪವರ್ ಚಾನೆಲ್(ಕಾಲುವೆ)ಗಳು ಒಟ್ಟು ೩.೫. ಮೈಲುಗಳ ದೂರ ಸಾಗುತ್ತವೆ. ಈ ಕಾಲುವೆಗಳು ೧/೧ ಇಳಿಜಾರನ್ನು ಹೊಂದಿದ್ದು ಸಾಮಾನ್ಯವಾಗಿ ೨೫೦ ಕ್ಯೂಸೆಕ್ಸ್ ನೀರು ಹರಿಸಬಹುದು, ಈ ಚಾನಲ್‌ಗಳ ಆಳ ಐದು ಅಡಿಗಳಾಗಿರುತ್ತದೆ. ಇವುಗಳ ಪೂರ್ಣ ಸಾಮರ್ಥ್ಯ ೫೫೦ ಕ್ಯೂಸೆಕ್ಸ್.

೪. ಈ ಕಾಲುವೆಯ ತುದಿಗೆ ಫೋರ್‌ಬೇ ನಿರ್ಮಿಸಿದ್ದು(ಬ್ಲಫ್‌ನಲ್ಲಿ), ಪವರ್‌ಚಾನಲ್‌ನಲ್ಲಿ ಹರಿದ ನೀರು ಇಲ್ಲಿ ಸಂಗ್ರಹಗೊಳ್ಳುತ್ತದೆ. ಇದು ಬೆಟ್ಟದ ತುದಿ ಪ್ರದೇಶವಾಗಿರುತ್ತದೆ. ಫೋರ್‌ಬೇಯಲ್ಲಿ ಸಂಗ್ರಹಗೊಂಡ ನೀರನ್ನು ಬೆಟ್ಟದ ಇಳಿಜಾರಿನ ಭಾಗದಲ್ಲಿರುವ ವಿದ್ಯುದಾಗರ ನೀರ್ಗಾಲಿಗಳಿಗೆ (ಟರ್ಬೈನ್)ಗಳಿಗೆ ನೀರನ್ನು ಪೂರೈಸಲಾಗುತ್ತದೆ.

೫. ಫೋರ್‌ಬೇ ತುದಿಯಲ್ಲಿ ಗೇಟ್‌ಗಳನ್ನು ಅಳವಡಿಸಲಾಗಿದೆ. ಇಲ್ಲಿಂದ ಕೆಳಗೆ ಮೂರು ಪೆನ್ ಸ್ಟಾಕ್‌ಗಳು(ನೀರನ್ನು ಸಾಗಿಸುವ ಕೊಳವೆ ಮಾರ್ಗ) ಪ್ರಾರಂಭವಾಗುತ್ತದೆ. ಮತ್ತು ಮೂರು ಪೆನ್ ಸ್ಟಾಕಿಗೆ ಜಾಲರಿಗಳನ್ನು ಅಳವಡಿಸಿ ಇಲ್ಲಿಂದ ಹೆಚ್ಚುವರಿ ನೀರನ್ನು ನದಿಗೆ ಹರಿಯಬಿಡಲು 'ಎಸ್ಕೇಪ್ ವಾಲ್ವ್'ನ್ನು ೧೦೦ ಅಡಿ ಉದ್ದಕ್ಕೆ ಕಟ್ಟಲಾಗಿದೆ. ಇಲ್ಲಿಂದ ಹೊರಡುವ ಪೆನ್‌ಸ್ಟಾಕ್ ಪೈಪುಗಳಿಗೆ ಅಳವಡಿಸಿರುವ ವಾಲ್ವ್‌ಗಳು ಸ್ವಯಂ ಚಾಲಿತವಾಗಿದೆ.

೬. ಮೂರು ಪೆನ್‌ಸ್ಟಾಕ್ ಪೈಪುಗಳು ನೀರನ್ನು ೪೦೦ ಅಡಿ ಕೆಳಗಿರುವ ವಿದ್ಯುದಾಗರಕ್ಕೆ ಒಯ್ಯುತ್ತದೆ. ಪೆನ್‌ಸ್ಟಾಕ್‌ಗಳನ್ನು ದಪ್ಪಗಿನ ಸ್ಟೀಲ್ ಪ್ಲೇಟುಗಳಿಂದ ನಿರ್ಮಿಸಲಾಗಿರುತ್ತದೆ. ಇವು ಕೆಳಕ್ಕೆ ಸಾಗಿದಂತೆ ಮೂರು ಪೆನ್‌ಸ್ಟಾಕ್‌ಗಳು. ಆರು ಪೆನ್‌ಸ್ಟಾಕ್‌ಗಳಾಗಿ ಕವಲೊಡೆಯುತ್ತವೆ. ಮತ್ತು ಪ್ರತಿಯೊಂದು ೧೨೫೦ ಹೆಚ್.ಪಿ.ಸಾಮರ್ಥ್ಯದ ಟರ್ಬೈನ್‌ಗಳಿಗೆ ನೀರನ್ನು ಪೂರೈಸುತ್ತದೆ.[೨]

ಆ. ವಿದ್ಯುತ್ ಜನಕಗಳು(ಜನರೇಟರ್)

ಜನರೇಟರ್‌ಗಳಲ್ಲಿ ಉತ್ಪತ್ತಿಯಾದ ೨೨೦೦ ವೋಲ್ಟೇಜ್ ಕರೆಂಟನ್ನು ಕಲ್ಲಿನ ಕವಚ ಹೊಂದಿರುವ ಕೇಬಲ್ ಟಕ್ಸ್‌ನಲ್ಲಿ ಅಳವಡಿಸಿರುವ ೪ ಚದರ ಇಂಚುಗಳ ತಾಮ್ರದ ಪಟ್ಟಿಗಳ ಮುಖಾಂತರ

ಬ್ಲಫ್‌ನಲ್ಲಿರುವ ಟ್ರಾನ್ಸ್‌ಫಾರ್ಮರ್ ಬ್ಯಾಂಕಿಗೆ ಒದಗಿಸಲಾಗುತ್ತಿತ್ತು. ಒಂದೊಂದು ಬ್ಯಾಂಕಿಗೆ ಒಂದೊಂದು ಟ್ರಾನ್ಸ್‌ಫಾರ್ಮರ್ ಮೀಸಲಿತ್ತು. ಈ ಟ್ರಾನ್ಸ್‌ಫಾರ್ಮರ್‌ಗಳು ಬಿಸಿಯಾಗದಂತೆ ತಣ್ಣಗಿಡಲು ವಿದ್ಯುತ್ ಚಾಲಿತ ಬೋಯ್ಲರ್‌ಗಳನ್ನು ಅಳವಡಿಸಲಾಗಿತ್ತು.

ಟ್ರಾನ್ಸ್‌ಫಾರ್ಮರ್ ಸ್ಥಾವರದಲ್ಲಿ ಒಟ್ಟು ಹನ್ನೆರಡು ೩೭೫ ಕೆ.ವಿ.ಎ. ಸಾಮರ್ಥ್ಯದ ೨೨೦೦/ ೩೫,೦೦೦ ವೋಲ್ಟ್‌ನ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿ, ೩ ಟ್ರಾನ್ಸ್ ಫಾರ್ಮರ್‌ಗಳ ಒಂದು ಬ್ಯಾಂಕಿಗೆ ಒಂದು ಜನರೇಟರ್‌ನಿಂದ ಬಂದ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುತ್ತಿತ್ತು.

ಇ. ಪ್ರಸರಣ ಮಾರ್ಗ

ಪ್ರಸರಣ ಮಾರ್ಗದ ನಿರ್ಮಾಣಕ್ಕಾಗಿ ಕಾಮಗಾರಿ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಕೆ.ಶ್ರೀನಿವಾಸ್ ಅಯ್ಯಂಗಾರ್ ರವರ ಮುಂದಾಳತ್ವದಲ್ಲಿ ಒಂದು ಪ್ರತ್ಯೇಕ ಉಪವಿಭಾಗವನ್ನು ೧೯೦೧ರ ಆರಂಭದಲ್ಲಿ ಪ್ರಾರಂಭಿಸಲಾಗಿತ್ತು.

ಶಿವನಸಮುದ್ರದಿಂದ ಕೆ.ಜಿ.ಎಫ್.ಗೆ ೩೫,೦೦೦ ವೋಲ್ಟೇಜ್‌ನ ಎರಡು ಮಾರ್ಗಗಳನ್ನು ೬೦ ಅಡಿ ಅಂತರದಲ್ಲಿ ಹಾಕಲಾಗಿತ್ತು. ಕಂಬಗಳು ೨೦ ಅಡಿ ಎತ್ತರವಾಗಿದ್ದವು ಕಂಬಗಳಿಗೆ ಉಪಯೋಗಿಸಿದ್ದು ಆಸ್ಟ್ರೇಲಿಯಾದಿಂದ ತರಿಸಿದ ಕೆಂಪುಬಣ್ಣದ "ಜರಾ" ಎಂಬ ಮರಗಳನ್ನು ಬಳಸಲಾಗಿತ್ತು.[೩] ೧೩೦ ಅಡಿಗೊಂದರಂತೆ ಕಂಬಗಳ ನಡುವಿನ ಅಂತರವಾಗಿತ್ತು. ನದಿಗಳನ್ನು ಮತ್ತು ರೈಲ್ವೆಯನ್ನು ದಾಟುವಲ್ಲಿ ಕಂಬಗಳ ನಡುವಿನ ಅಂತರ ೫೨೫ ಅಡಿಗಳಾಗಿದ್ದವು. ಈ ಪ್ರಸರಣ ಮಾರ್ಗಗಳಲ್ಲಿ ಅವುಗಳ ಸಾಮರ್ಥ್ಯದ ಅರ್ಧ ಭಾಗದಷ್ಟು ಮಾತ್ರ ವಿದ್ಯುಚ್ಛಕ್ತಿ ಪ್ರಸರವಾಗುತ್ತಿತ್ತು. ಒಂದು ಲೈನಿನಲ್ಲಿ ದೋಷವಾದರೆ ಇನ್ನೊಂದು ಲೈನು ಇಡೀ ಸಾಮರ್ಥ್ಯವನ್ನು ಹೊತ್ತು ವಿದ್ಯುತ್ ಅಡಚಣೆಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಆ ಕಾಲದಲ್ಲಿ ಮೈಸೂರು ರಾಜ್ಯದ ಅರಣ್ಯಗಳಿಂದ ಕಂಬಗಳನ್ನು ತರುವುದಕ್ಕಿಂತ, ಆಸ್ಟ್ರೇಲಿಯಾದಿಂದ ಆಮದು ಮಾಡಿಕೊಂಡ ಮರಗಳನ್ನು ಬಳಸುವುದೇ ಅಗ್ಗವಾಗುತ್ತಿತ್ತು ಎಂಬುದೊಂದು ಆಶ್ಚರ್ಯಕರ ಸಂಗತಿ.

ಈ. ವಿತರಣೆ

ಕೆ.ಜಿ.ಎಫ್.ನ ಊರೆಗಾಂವ್ ತಲುಪಿದ ನಂತರ ಈ ಮಾರ್ಗವು ವಿತರಣಾ ಸ್ಥಾವರವನ್ನು ಪ್ರವೇಶಿಸುತ್ತಿತ್ತು. ಕೆ.ಜಿ.ಎಫ್.ನ ಮಧ್ಯ ಭಾಗದಲ್ಲಿರುವ ಈ ಸ್ಥಾವರವು ಮತ್ತೆ ೧೨ ಸ್ಟೆಪ್‌ಡೌನ್ ಪರಿವರ್ತಕಗಳನ್ನು ಹೊಂದಿದ್ದು ಅವುಗಳು ಶಿವನಸಮುದ್ರದಲ್ಲಿರುವ ವ್ಯವಸ್ಥೆಯನ್ನೇ ಹೋಲುತ್ತಿತ್ತು. ಒಂದು ವ್ಯತ್ಯಾಸವೆಂದರೆ, ಶಿವನಸಮುದ್ರದಲ್ಲಿ ವೋಲ್ಟೇಜನ್ನು ಹೆಚ್ಚು ಮಾಡಿದರೆ ಇಲ್ಲಿ ವೋಲ್ಟೇಜನ್ನು ಕಡಿಮೆ ಮಾಡಲಾಗುತ್ತಿತ್ತು. ಅಲ್ಲಿಂದ ಮುಂದೆ ೨೩೦೦ ವೋಲ್ಟ್‌ನಲ್ಲಿ ವಿತರಣಾ ಮಾರ್ಗಗಳನ್ನು

ನಿರ್ಮಿಸಲಾಗಿತ್ತು. ೧೦೦ ಹೆಚ್.ಪಿ.ಗಿಂತ ಹೆಚ್ಚಿನ ಸಾಮರ್ಥ್ಯದ ಮೋಟಾರುಗಳು ೨೩೦೦ ವೋಲ್ಟ್ ನಲ್ಲಿ ಕೆಲಸ ನಿರ್ವಹಿಸುತ್ತಿದ್ದವು. ಬೇರೆ ಮೋಟಾರುಗಳಿಗೆ ೨೩೦೦/೨೨೦೦ ವೋಲ್ಟ್ ಸಾಮರ್ಥ್ಯದ ಪರಿವರ್ತಕಗಳನ್ನು ಬಳಸಲಾಯಿತು.

ಒಟ್ಟು ಹತ್ತು ಗಣಿಗಾರಿಕಾ ಕಂಪನಿಗಳಿಗೆ ವಿದ್ಯುತ್ ಒದಗಿಸುವ ವಿತರಣಾ ಮಾರ್ಗಕ್ಕಾಗಿ 'ಒನ್ ಆಡ್ ನಿಂದ (೧/೦) ಹಿಡುದು ಪೋರ್ಆಡ್ ನವರೆಗೆ (೪/೦) ತಂತಿಗಳನ್ನು ಬಳಸಿ ೨೫ ಮೈಲುದ್ದದ ವಿತರಣಾ ಮಾರ್ಗವನ್ನು ನಿರ್ಮಿಸಲಾಗಿತ್ತು. ಅಲ್ಲದೆ ಕೆ.ಜಿ.ಎಫ್‌ನಲ್ಲಿ ಸುಸಜ್ಜಿತವಾದ ಒಂದು ಯಂತ್ರಾಗಾರಗಳನ್ನು ನಿರ್ಮಿಸಿ, ಅಲ್ಲಿ ವಿದ್ಯುತ್ ಚಾಲಿತ ಯಂತ್ರಗಳನ್ನು ಇಟ್ಟು ಎಲ್ಲ ತಾಂತ್ರಿಕ ಕಾಮಗಾರಿಗಳನ್ನು ನಡೆಸಲಾಯಿತು.

ಶಿವನಸಮುದ್ರದಿಂದ ಕೆ.ಜಿ.ಎಫ್ ನವರೆಗೆ ಈ ವಿದ್ಯುತ್ ಪ್ರಸರಣ ಪ್ರಕ್ರಿಯೆಯಲ್ಲಿ ಸರಾಸರಿ ಶೇ.೨೦ ವಿದ್ಯುತ್ ನಷ್ಟ ಸಂಭವಿಸುತ್ತಿತ್ತು. ಅಂದರೆ ಶಿವನಸಮುದ್ರದಲ್ಲಿ ೫೦೦೦ ಹೆಚ್.ಪಿ.ವಿದ್ಯುತ್ ಉತ್ಪಾದಿಸಿದರೆ ಕೆ.ಜಿ.ಎಫ್ ತಲುಪಿ ಬಳಕೆಗೆ ಲಭ್ಯವಿರುತ್ತಿದ್ದದ್ದು ೪೦೦೦ ಹೆಚ್.ಪಿ.ಮಾತ್ರ.[೪]

ಈ ಎಲ್ಲಾ ಕೆಲಸಗಳು ಮೊದಲ ಹಂತದ ಕಾಮಗಾರಿಯ ವಿವರಗಳಾಗಿದ್ದು ಯೋಜನೆಯ ಒಟ್ಟು ವೆಚ್ಚ ಈ ಕೆಳಗಿನಂತಿವೆ.

ಕ್ರ.ಸಂ.	ಕಾಮಗಾರಿಗಳು	ಪೌಂಡ್‌ಗಳಲ್ಲಿ	ರೂ.ಗಳಲ್ಲಿ
೧.	ಹೈಡ್ರಾಲಿಕ್ ಉಪಕರಣ	೨೬,೫೦೦	೩,೯೭,೫೦೦
೨.	ಎಲೆಕ್ಟ್ರಿಕಲ್ ಉಪಕರಣ	೧,೧೨,೦೦೦	೧೬,೮೦,೦೦೦
೩.	ಪ್ರಸರಣವನ್ನು ಮತ್ತು ವಿತರಣಾ ಸ್ಥಾವರ ಮತ್ತು ಮಾರ್ಗ	೫೩,೦೦೦	೭,೯೫,೦೦೦
೪.	ನೀರೊದಗಿಸುವ ಖರ್ಚು ಮತ್ತು ಇತರೆ	೧,೪೮,೬೦೦	೨೨,೨೯,೦೦೦
	ಒಟ್ಟು	೩,೪೦,೧೦೦	೫೧,೦೧,೫೦೦

ಆಧಾರ : ಗೋಪಾಲ ಕೃಷ್ಣಯ್ಯ ಎಂ, ಹಿಸ್ಟರಿ ಆಫ್ ದಿ ಕಾವೇರಿ ಪವರ್ ಸ್ಕೀಂ, ಬೆಂಗಳೂರು, ೧೯೩೨, ಪು.೯೭

ಈ ಮೇಲಿನ ವಿದ್ಯುತ್ ಖರೀದಿ ಒಪ್ಪಂದದಿಂದ ಮೈಸೂರು ಸರ್ಕಾರದ ಖರ್ಚುಗಳೆಲ್ಲವು ಆರು ವರ್ಷಗಳ ಕಾಲದಲ್ಲಿ ಭರಿಸಲ್ಪಟ್ಟವು. ಇದರ ಜೊತೆಗೆ ಗಣಿಗಾರಿಕಾ ಕಂಪನಿಗಳಿಗೂ ವಿಪರೀತ ಹಣ ಉಳಿತಾಯವಾಗುತ್ತಿತ್ತು.

ವಿದ್ಯುತ್ ಸ್ಥಾವರದ ಒಟ್ಟು ಉಸ್ತುವಾರಿಯನ್ನು ೧೫-೦೩-೧೯೦೩ರವರೆಗೆ ನ್ಯೂಯಾರ್ಕ್‌ನ ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯವರಿಂದ ನಿರ್ವಹಿಸಲ್ಪಟ್ಟಿತ್ತು. ನಂತರ ಸ್ಥಾವರದ ಸಂಪೂರ್ಣ ಉಸ್ತುವಾರಿ ಮೈಸೂರು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿತ್ತು.[೫] ಈ ಸಂದರ್ಭದಲ್ಲಿ ಸ್ಥಾವರದ ಉಸ್ತುವಾರಿ ನಡೆಸಲು, ವಿದ್ಯುತ್ ಪ್ರಸರಣ, ವಿತರಣೆಯನ್ನು ನಿರ್ವಹಿಸಲು ಮೈಸೂರು ಸರ್ಕಾರವು ಒಂದು ಹೊಸ ವಿದ್ಯುತ್ ಇಲಾಖೆಯನ್ನು ಆರಂಭಿಸಿತು. ಅದು "ಗವರ್ನಮೆಂಟ್ ಆಫ್ ಮೈಸೂರು ಎಲೆಕ್ಟ್ರಿಕಲ್ಸ್ ಡಿಪಾರ್ಟ್‌ಮೆಂಟ್" ಎಂಬ ಹೆಸರಿನಿಂದ ಕಾರ್ಯ ನಿರ್ವಹಿಸಿತು. ಇದಕ್ಕೆ ಮುಖ್ಯಸ್ಥರಾಗಿ, ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯ ಯಂತ್ರೋಪಕರಣಗಳ ಸ್ಥಾಪನೆ ಮತ್ತು ನಿರ್ವಹಣೆಯಲ್ಲಿ ಪ್ರಮುಖರಾಗಿದ್ದ ಮಿ॥ ಹ್ಯಾರಿ ಪಾರ್ಕರ್ ಗಿಬ್ಸ್‌ರವರು ನೇಮಕವಾದರು.[೬] ನಂತರ ಸಿ.ಎಫ್.ಬೀಮ್ಸ್ ಮುಖ್ಯ ಇಂಜಿನಿಯರ್ ಆದರು.

ಮೊದಲ ಹಂತದ ವಿಸ್ತರಣೆಯಲ್ಲಿ ಯೋಜನೆಯ ಪ್ರಮುಖ ಉಪಕರಣಗಳು ಈ ಕೆಳಕಂಡ ದೇಶಗಳಿಂದ ಆಮದು ಮಾಡಿಕೊಳ್ಳಲಾಯಿತು.

ವಿದ್ಯುತ್ ಸ್ಥಾವರ - ಅಮೇರಿಕಾ

ಹೈಡ್ರಾಲಿಕ್ ಸ್ಥಾವರ - ಸಿಟ್ಜರ್‌ಲ್ಯಾಂಡ್

ಪೆನ್‌ಸ್ಟಾಕ್ ಪೈಪುಗಳ - ಸ್ಕಾಟ್‌ಲ್ಯಾಂಡ್

ಇನ್ಸುಲೇಟರ್ - ಇಟಲಿ

ಪ್ರಸರಣ ಮಾರ್ಗಕ್ಕೆ ಮರದ ಕಂಬಗಳು - ಆಸ್ಟ್ರೇಲಿಯಾ

೩.೨. ಎರಡನೆಯ ಹಂತದ ವಿಸ್ತರಣೆ

ಮೊದಲ ಹಂತದಲ್ಲಿ ಕೆ.ಜಿ.ಎಫ್.ಗೆ ೪೦೦೦ ಹೆಚ್.ಪಿ.ವಿದ್ಯುತ್ತನ್ನು ಪೂರೈಸಲಾಗುತ್ತಿತ್ತು. ನಂತರ ಕೆ.ಜಿ.ಎಫ್.ನಿಂದ ೨೦೦೦ ಹೆಚ್.ಪಿ.ಅಧಿಕ ಬೇಡಿಕೆಯನ್ನು ಮೈಸೂರು ಸರ್ಕಾರದ ಮುಂದೆ ಇಟ್ಟಿತು. ಕಾವೇರಿ ಯೋಜನೆಯ ಎರಡನೇ ಹಂತದ ವಿಸ್ತರಣೆಗೆ ಮೈಸೂರು ಮಹಾರಾಜರು ತಮ್ಮ ಒಪ್ಪಿಗೆಯನ್ನು ೧೦ ನವೆಂಬರ್ ೧೯೦೩ರಂದು ನೀಡಿದರು.[೭]

ಮೊದಲ ಹಂತದ ಒಟ್ಟು ೧೨೫೦ ಹೆಚ್.ಪಿ.ಯ ಟರ್ಬೈನ್‌ಗಳಿಗೆ ೭೨೦ ಕಿ.ವಾ. ಸಾಮರ್ಥ್ಯದ ಆರು ಜನರೇಟರುಗಳನ್ನು ಹೊಂದಿಸಲಾಗಿತ್ತು.[೮] ಎರಡನೇ ಹಂತದಲ್ಲಿ ಪ್ರತಿ ಟರ್ಬೈನ್‌ಗಳಿಗೂ ಪ್ರತ್ಯೇಕ ಪೆನ್ ಸ್ಟಾಕ್ ಗಳನ್ನು ಅಳವಡಿಸಲಾಯಿತು. ಐದು ಪೆನ್‌ಸ್ಟಾಕ್, ಐದು ಟರ್ಬೈನ್ ಮತ್ತು ಐದು ವಿದ್ಯುತ್ ಜನರೇಟರ್‌ಗಳನ್ನು ಸ್ಥಾಪಿಸಲಾಯಿತು. ಆದರೆ ಐದು ಟ್ರಾನ್ಸ್‌ಫಾರ್ಮರ್ ಅಳವಡಿಸುವ ಬದಲು ಮೂರು

ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ಗಳನ್ನು ಜಲವಿದ್ಯುದಾಗರದ ಎರಡು ತುದಿಯಲ್ಲಿ ಸ್ಥಾಪಿಸಲಾಯಿತು. ಈ ಕಾಮಗಾರಿಯ ಅಂದಿನ ಅಂದಾಜು ಖರ್ಚು ರೂ.೧೩,೦೧,೮೭೦ ಗಳಾಗಿತ್ತು.[೯]

ಅ. ಎರಡನೆ ಹಂತದ ಪ್ರಮುಖ ಕಾಮಗಾರಿಗಳು

* ಮೂರು ವರ್ಷ ಹಳೆಯದಾಗಿದ್ದ ಟ್ರಾಲಿವ್ಯವಸ್ಥೆಯನ್ನು ಆಧುನೀಕರಣಗೊಳಿಸಲಾಯಿತು. ೪೦ ಪೌಂಡುಗಳ ರೈಲು ಹಳಿಗಳನ್ನು ಅಳವಡಿಸಿ ಸುವ್ಯವಸ್ಥಿತ ಟ್ರಾಲಿವ್ಯವಸ್ಥೆ ಮಾಡಲಾಯಿತು.
* ಯೋಜನೆಯ ಬ್ಲಫ್ ಭಾಗದಲ್ಲಿ ಕಾಲೋನಿ ರಸ್ತೆಗಳಿಗೆ ಡಾಂಬರು ವ್ಯವಸ್ಥೆ ಕಲ್ಪಿಸಲಾಯಿತು.
* ವಿದ್ಯುದಾಗರವನ್ನು ೬೫ ಅಡಿಗಳಷ್ಟು ವಿಸ್ತರಿಸಲಾಯಿತು. ಹೊಸ ವಿದ್ಯುತ್‌ಜನಕ ಮತ್ತು ನಿರ್ಗಾಲಿಗಳನ್ನು ಅಳವಡಿಸಲಾಯಿತು.
* ಈ ನಡುವೆ ಫೋರ್‌ಬೇಯಲ್ಲಿ ವಿಸ್ತರಣೆಯ ಅಗತ್ಯದ ಹಿನ್ನೆಲೆಯಲ್ಲಿ ಫೋರ್‌ಬೇಯನ್ನು ವಿಸ್ತರಿಸಿ ಅದರಿಂದ ೫ ಹೊಸ ಪೆನ್‌ಸ್ಟಾಕ್‌ಗಳಿಗೆ ನೀರೊದಗಿಸುವ ಕಾರ್ಯ ನಡೆಸಲಾಯಿತು.
* ಪ್ರಸರಣ ಮಾರ್ಗದಲ್ಲಿಯೂ ವಿಸ್ತರಣೆಯ ಕಾರ್ಯ ಮುಂದುವರೆದು, ಸರ್ಜಾಪುರ ಮತ್ತು ಕನಕನ ಹಳ್ಳಿಯಲ್ಲಿ ಎರಡು ಸೆಕ್ಷನ್ ಹೌಸ್‌ಗಳ ನಿರ್ಮಾಣವಾಯಿತು. ಎರಡೂ ಕಡೆ ಸ್ವಿಚಿಂಗ್ ಆಪರೇಟರ್ ಗಳನ್ನು ಅಳವಡಿಸಲಾಯಿತು.

ಈ ಹಂತದ ವಿಸ್ತರಣೆಯ ಸಂದರ್ಭದಲ್ಲಿ ೧೯೦೫ರ ಆಗಸ್ಟ್‌ನಲ್ಲಿ ಬೆಂಗಳೂರು ನಗರಕ್ಕೆ ವಿದ್ಯುತ್ ಸೌಲಭ್ಯ ಕಲ್ಪಿಸಲಾಯಿತು.[೧೦]

ಕೆ.ಜಿ.ಎಫ್.ಗಲ್ಲದೆ ಬೆಂಗಳೂರಿಗೂ ವಿದ್ಯುತ್ ಸರಬರಾಜು ಆರಂಭಿಸಿದ್ದರಿಂದ ವಿದ್ಯುತ್ ಬೇಡಿಕೆ ಹೆಚ್ಚುತ್ತಲೇ ಹೋಯಿತು. ಬೇಸಿಗೆಯಲ್ಲಿ ಕಾವೇರಿಯ ಹರಿವಿನ ಪ್ರಮಾಣ ತೀವ್ರವಾಗಿ ಇಳಿಯುತ್ತಿದುದ್ದರಿಂದ ವಿದ್ಯುತ್ ಸಮಸ್ಯೆ ಉದ್ಭವಿಸಿತು. ಕರಾರಿನಂತೆ ಸರ್ಕಾರ ನಿಗದಿತ ವಿದ್ಯುತ್ತನ್ನು ಗಣಿಗಾರಿಕಾ ಕಂಪನಿಗೆ ಒದಗಿಸಲು ವಿಫಲವಾದರೆ, ಕಂಪನಿಗೆ ವಿಪರೀತ ದಂಡ ನೀಡಬೇಕಾಗುತ್ತಿತ್ತು. ೧೯೦೫-೦೬ರಲ್ಲಿ ಸುಮಾರು ೨,೩೨,೫೧೪ ರೂಪಾಯಿಗಳು, ೧೯೦೬-೦೭ರಲ್ಲಿ ೧೮,೯೯೪ ರೂಪಾಯಿಗಳನ್ನು ಮೈಸೂರು ಸರ್ಕಾರ ವಿದ್ಯುತ್ ಒದಗಿಸಲು ವಿಫಲವಾಗಿ ಕಂಪನಿಗೆ ದಂಡದ ರೂಪದಲ್ಲಿ ಹಣ ಪಾವತಿಸಬೇಕಾಯಿತು.[೧೧]

೩.೩. ಮೂರನೆಯ ಹಂತದ ವಿಸ್ತರಣೆ

೧೯೦೬ರ ಹೊತ್ತಿಗೆ ಗಣಿಗಾರಿಕಾ ಕಂಪನಿಯವರು ಅಧಿಕ ವಿದ್ಯುತ್ ಬೇಡಿಕೆಯನ್ನು ಮುಂದಿಟ್ಟರು. ಅವರು ೨೦೦೦ ಹೆಚ್.ಪಿ. ಅಧಿಕ ಬೇಡಿಕೆ ತಿಳಿಸಿದರು. ಆ ಸಂದರ್ಭದಲ್ಲಿ ಬೆಂಗಳೂರಿಗೆ ವಿದ್ಯುತ್

ಸರಬರಾಜು ಆರಂಭವಾಗಿತ್ತು. ದಿನದಿಂದ ದಿನಕ್ಕೆ ಬೆಂಗಳೂರಿನ ಬೇಡಿಕೆಯೂ ಹೆಚ್ಚಾಗುತ್ತಾ ಬಂದಿತ್ತು. ಅಲ್ಲದೇ ರಾಜಧಾನಿ ಮೈಸೂರಿಗೂ ಸಹ ವಿದ್ಯುತ್ ಸರಬರಾಜು ಮಾಡಲು ಯೋಜನೆ ರೂಪಿಸಲಾಗಿತ್ತು.

ಈ ಎಲ್ಲಾ ಕಾರಣದಿಂದ ಶಿವನಸಮುದ್ರದಲ್ಲಿ ೧೫೦೦ ಕಿ.ವಾ.ಸಾಮರ್ಥ್ಯದ (೨೦೦೦ ಹೆಚ್.ಪಿ) ಹೊಸ ಘಟಕವನ್ನು ಮೂರನೇ ಹಂತದ ವಿಸ್ತರಣೆಯಲ್ಲಿ ಅನುಷ್ಠಾನಗೊಳಿಸಲಾಯಿತು.[೧೨] ನೀರಿನ ಕೊರತೆ ಕೇವಲ ಬೇಸಿಗೆ ಕಾಲದಲ್ಲಾದ್ದರಿಂದ ಉಳಿದ ಸಂದರ್ಭದಲ್ಲಿ ಅಧಿಕ ವಿದ್ಯುತ್ ಉತ್ಪಾದಿಸಲು ಯಾವ ಸಮಸ್ಯೆಯೂ ಇರಲಿಲ್ಲ. ಜೊತೆಗೆ ಧನಗೆರೆ ಅಣೆಕಟ್ಟಿನಿಂದ ಹೆಚ್ಚಿನ ನೀರು ಪಡೆಯಲು, ಶಿವನಸಮುದ್ರ ಜಾಗೀರುದಾರರ ಮನವೊಲಿಸಿ ಈ ವಿಷಯವಾಗಿ ಮಧ್ಯಪ್ರವೇಶ ಮಾಡಬಾರದೆಂದು ಮದ್ರಾಸ್ ಸರ್ಕಾರಕ್ಕೆ ಕೇಳಿಕೊಳ್ಳಲಾಯಿತು. ಅಲ್ಲದೆ ಮಾಧವ ಮಂತ್ರಿ ಅಣೆಕಟ್ಟಿನಿಂದ ಹೆಚ್ಚಿನ ನೀರನ್ನು ಒಳಸುವುದಕ್ಕೂ ಯೋಜಿಸಲಾಯಿತು.

ಮೂರನೇ ಹಂತದಲ್ಲಿ ೨೦೦೦ ಹೆಚ್.ಪಿ.ವಿದ್ಯುತ್ ಘಟಕ, ಅದಕ್ಕೆ ಪೂರಕವಾಗಿ ಒಂದು ಪೆನ್‌ಸ್ಟಾಕ್, ಮತ್ತು ಪೆಲ್ಟನ್‌ವೀಲ್ ಟರ್ಬೈನ್ ಅಲ್ಲದೇ ಕೆ.ಜಿ.ಎಫ್ ಮತ್ತು ಶಿವನಸಮುದ್ರ ಎರಡೂ ಕಡೆ ಅಗತ್ಯ ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಸ್ಥಾಪಿಸಲಾಯಿತು. ಇದೇ ಸಂದರ್ಭದಲ್ಲಿ ಕೆ.ಜಿ.ಎಫ್. ಮೂರನೆಯ ವಿದ್ಯುತ್ ಮಾರ್ಗವೊಂದನ್ನು ತಾಮ್ರದ ತಂತಿ ಬಳಸಿ ೨೬೪ ಅಡಿ ಅಂತರದಲ್ಲಿ ನಿಲ್ಲಿಸಲ್ಪಟ್ಟ ಉಕ್ಕಿನ ಕಂಬಗಳ ಮೇಲೆ ನಿರ್ಮಿಸಲಾಯಿತು(ಮೊದಲು ಮರದ ಕಂಬಗಳ ಬಳಕೆ). ಇದರಿಂದ ವಿದ್ಯುತ್ ಪ್ರಸರಣ ನಷ್ಟವನ್ನು ಕಡಿಮೆ ಮಾಡಲಾಯಿತು. ೧೯೦೮ರ ಜೂನ್ ಒಂದನೇ ತಾರೀಖಿನದು ಬೆಂಗಳೂರಿನ ದಂಡು ಪ್ರದೇಶ(ಕಂಟೋನ್ಮೆಂಟ್) ಕೂಡ ವಿದ್ಯುತ್ ಸರಬರಾಜು ಕಂಡಿತು. ಈ ಹಂತದಲ್ಲಿ ಪ್ರಮುಖವಾಗಿ ಮೈಸೂರಿನ ಅರಮನೆಗೆ ೧೯೦೮ನೇ ಇಸವಿ ಸೆಪ್ಟೆಂಬರ್ ೨೬ನೇ ತಾರೀಖಿನಿಂದ ವಿದ್ಯುತ್ ದೀಪಗಳು ಬೆಳಗುವ ಮೂಲಕ ಮೈಸೂರು ನಗರದ ವಿದ್ಯುತ್ ಸಂಪರ್ಕಕ್ಕೆ ಚಾಲನೆ ನೀಡಲಾಯಿತು. ೧೯೦೯ರ ಜೂನ್ ವೇಳೆಗೆ ಮೈಸೂರಿನಲ್ಲಿ ಒಟ್ಟು ೬೦೦ ಬೀದಿದೀಪಗಳು ಮತ್ತು ೬೧೭ ಗೃಹಬಳಕೆ ಗ್ರಾಹಕರು ಇದ್ದರು.[೧೩]

ಅ. ಭಾರತೀಯ ವಿದ್ಯುಚ್ಛಕ್ತಿ ಕಾಯ್ದೆ-೧೯೧೦

೧೯೦೨ರಲ್ಲಿ ಆರಂಭವಾದ ಕಾವೇರಿ ಜಲವಿದ್ಯುತ್ ಕೇಂದ್ರ ಸಂದರ್ಭ ಮತ್ತು ಅವಶ್ಯಕತೆಗೆ ಅನುಗುಣವಾಗಿ ವಿಸ್ತರಣೆಯಾಗುತ್ತಿತ್ತು. ಪ್ರಮುಖ ನಗರಗಳಾದ ಬೆಂಗಳೂರು ಮತ್ತು ಮೈಸೂರು ವಿದ್ಯುತ್ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದವು. ಈ ವೇಳೆಗೆ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ವಿದ್ಯುತ್ ಉತ್ಪಾದನೆಯ ಪ್ರಕ್ರಿಯೆ ಪ್ರಾರಂಭವಾಗಿತ್ತು. ಮುಂಬೈ, ಕಲ್ಕತ್ತಾ, ಡಾರ್ಜಿಲಿಂಗ್ ನಗರಗಳಲ್ಲೂ ವಿದ್ಯುತ್ ವಿತರಣ ಕಂಪನಿಗಳು ಪ್ರಾರಂಭವಾಗಿದ್ದವು. ಹಲವು ವಿದ್ಯುದಾಗರಗಳು ಕಾರ್ಯಾರಂಭ

ಮಾಡುವ ಹಂತದಲ್ಲಿದ್ದವು. ಈ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ, ಪ್ರಸರಣ ಮತ್ತು ವಿತರಣೆಯನ್ನು ನಿಯಂತ್ರಿಸುವ ಒಂದು ಸಮಗ್ರ ಕಾಯ್ದೆಯ ಅವಶ್ಯಕತೆ ಆಡಳಿತ ನಡೆಸುವವರಿಗೆ ಅಗತ್ಯವಾಯಿತು. ವಿದ್ಯುತ್ ವಿತರಣೆಗಾಗಿ ಸಣ್ಣ ಮತ್ತು ದೊಡ್ಡ ನಗರಗಳಲ್ಲಿ ಗುತ್ತಿಗೆದಾರರು ಅರ್ಜಿಸಲ್ಲಿಸಿದ್ದರು. ಕೆಲವರು ಡೀಸಲ್ ವಿದ್ಯುತ್ ಘಟಕಗಳನ್ನು ಬಳಸಿ ವಿದ್ಯುತ್ ವಿತರಣೆ ಮಾಡುವ ಪ್ರಸ್ತಾವನೆ ಪ್ರಕಟಿಸಿ ಮಂಜೂರಾತಿ ಕೋರಿದ್ದರು.

ಈ ಎಲ್ಲಾ ಕೆಲಸಗಳಿಗೆ ಒಂದು ಆಡಳಿತಾತ್ಮಕ ಸ್ವರೂಪ ನೀಡುವ ಅಗತ್ಯವಾದ್ದರಿಂದ ಮತ್ತು ೧೮೯೭ರ ವಿದ್ಯುತ್ ಕಾಯ್ದೆಯು ಸಾಕಷ್ಟು ನ್ಯೂನತೆಗಳಿಂದ ಕೂಡಿದ್ದರಿಂದ, ಭಾರತ ಸರ್ಕಾರವು ೧೯೧೦ರಲ್ಲಿ ಭಾರತೀಯ ವಿದ್ಯುಚ್ಛಕ್ತಿ ಕಾಯ್ದೆ ಜಾರಿಗೆ ತಂದಿತು.[೧೪] ಇದರಿಂದ ಭಾರತ ದೇಶದಲ್ಲಿ ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆಯ ಕುರಿತು ಮತ್ತು ವಿದ್ಯುತ್ ವಿತರಿಸುವ ಅನುಮತಿ ಪಡೆದ ಗುತ್ತಿಗೆದಾರರ ಹಕ್ಕು ಬಾಧ್ಯತೆಗಳ ಕುರಿತು ಅದರ ವ್ಯವಹಾರ ನಿಯಂತ್ರಣದ ಅಗತ್ಯ ನಿಯಮಗಳನ್ನು ಮತ್ತು ಕಂಪನಿ ಅಥವಾ ಗುತ್ತಿಗೆದಾರರು ಪಾಲಿಸಬೇಕಾದ ನಿಯಮಾವಳಿಗಳು ಇಂತಹ ವಿಚಾರದಲ್ಲಿ ಸರ್ಕಾರಕ್ಕಿರುವ ಹಕ್ಕು ಬಾಧ್ಯತೆಗಳು ಮತ್ತು ವಿದ್ಯುತ್ ವಿತರಣೆಯ ಕಾಲದಲ್ಲಿ ಗುತ್ತಿಗೆದಾರರು ಪಾಲಿಸಬೇಕಾದ ಜಾಗರೂಕತೆ ಮತ್ತು ಮುನ್ನೆಚ್ಚರಿಕೆಗಳ ಕುರಿತು ಈ ಕಾಯ್ದೆಯಡಿಯಲ್ಲಿ ಕಾನೂನುಗಳನ್ನು ರೂಪಿಸಲಾಯಿತು. ಆದರೆ ಮೈಸೂರು ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ, ಪ್ರಸರಣೆ ಮತ್ತು ವಿತರಣೆ ಸರ್ಕಾರದ ಮೂಲಕ ನಡೆಯುತ್ತಿದ್ದುದರಿಂದ ನಮ್ಮ ರಾಜ್ಯದಲ್ಲಿ ಹೆಚ್ಚಿನ ಖಾಸಗಿ ಗುತ್ತಿಗೆದಾರರು ಆಸಕ್ತಿ ವಹಿಸಲಿಲ್ಲ.[೧೫]

ಮೂರನೇ ಹಂತದಲ್ಲಿ ಬಹುಮುಖ್ಯವಾಗಿ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗತೊಡಗಿತು. ಬೇಡಿಕೆ ಅಲ್ಲದೇ ಉಳಿದ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಗೆ ನಿರೀಕ್ಷಿತ ಮಟ್ಟದಲ್ಲಿ ನೀರು ಲಭ್ಯವಾಗಲಿಲ್ಲ. ಒಂದು ಕಡೆ ವಿದ್ಯುತ್ ಉತ್ಪಾದನೆ ಅಡೆತಡೆಯಿಲ್ಲದೆ ಸಾಗಬೇಕಾದದ್ದು, ಇನ್ನೊಂದು ಕಡೆ ಬರಡು ಭೂಮಿಗೆ ನೀರುಣಿಸಬೇಕಾದ ಹೊಣೆ ಎರಡನ್ನೂ ನಿಭಾಯಿಸಲು ಮೈಸೂರು ಸರ್ಕಾರ ಯೋಚಿಸಿತು. ಅದಕ್ಕಾಗಿ ೧೯೧೧ರಲ್ಲಿ ಕಾವೇರಿ ನದಿಗೆ ಕೃಷ್ಣರಾಜಸಾಗರದಲ್ಲಿ ಅಣೆಕಟ್ಟು ಕಟ್ಟುವ ಕಾಮಗಾರಿ ಆರಂಭವಾಯಿತು.[೧೬] ಕಾಮಗಾರಿಯು ಮದ್ರಾಸ್ ಸರ್ಕಾರದ ವಿರೋಧದ ನಡುವೆಯು ಹಂತ-ಹಂತವಾಗಿ ನಿರ್ಮಿಸಲಾಯಿತು.

೧೯೧೩ರಲ್ಲಿ ಶಿವನಸಮುದ್ರದಲ್ಲಿ ಉತ್ಪಾದನೆಯಾದ ಒಟ್ಟು ವಿದ್ಯುತ್ ೭೯,೭೦೯,೬೮೮ ಯೂನಿಟ್ಟುಗಳು, ಇದರಲ್ಲಿ ೭೩,೫೮೫,೦೭೭ ಯೂನಿಟ್‌ಗಳು ಕೋಲಾರಕ್ಕೆ, ೪೫,೪೪,೩೨೦ ಯೂನಿಟ್‌ಗಳು ಬೆಂಗಳೂರಿಗೆ ಮತ್ತು ೧೫,೮೦,೨೭೧ ಯೂನಿಟ್‌ಗಳು ಮೈಸೂರಿಗೆ ಸರಬರಾಜು ಮಾಡಲಾಯಿತು.

ಜೂನ್ ೧೯೧೩ರ ಹೊತ್ತಿಗೆ ಶಿವನಸಮುದ್ರ ಯೋಜನೆಗಾಗಿ ಹೂಡಿದ ಮೂಲ ಬಂಡವಾಳ ೪೩,೧೧,೮೬೭ ರೂಪಾಯಿಗಳು ಪೂರ್ಣ ಹಣ ಹಿಂತಿರುಗಿದ್ದಲ್ಲದೆ, ಅಧಿಕವಾಗಿ ೬,೭೨,೮೧೧ ರೂಪಾಯಿಗಳ ಅಧಿಕ ಗಳಿಕೆ ಲಭಿಸಿ ಸರ್ಕಾರದ ಬೊಕ್ಕಸಕ್ಕೆ ನಿವ್ವಳ ಲಾಭ ದೊರಕಿತ್ತು.

೧೯೧೩ರ ಜೂನ್ ಕೊನೆಯ ಹೊತ್ತಿಗೆ ಗೊಮೆಡ್‌ನ ಒಟ್ಟು ಗ್ರಾಹಕರ ಸಂಖ್ಯೆ ಈ ಕೆಳಗಿನಂತೆ ಇದ್ದವು.

೧. ಬೀದಿ ದೀಪಗಳು ೩೦೭೧

೨. ಗೃಹ ಬಳಕೆ ಗ್ರಾಹಕರು ೧೧೯೮

೩. ಪವರ್ ಗ್ರಾಹಕರು ೨೯

ಇಲ್ಲಿಯವೆಗೆ ವಿದ್ಯುತ್ತಿನ ಉತ್ಪಾದನೆ ಕೇವಲ ನದಿಯ ಹರಿವನ್ನು ಅವಲಂಬಿಸಿತ್ತು. ವಿದ್ಯುತ್ತಿಗಾಗಿ ನೀರನ್ನು ಶೇಖರಿಸುವ ವಿಶೇಷ ಪ್ರಯತ್ನ ಸಾಗಿತ್ತು. ಕೃಷ್ಣರಾಜ ಸಾಗರವಿನ್ನೂ ನಿರ್ಮಾಣ ಹಂತದಲ್ಲಿತ್ತು. ಇನ್ನು ಮುಂದೆ ಕೃಷ್ಣರಾಜ ಸಾಗರದಲ್ಲಿ ನೀರಿನ ಸಂಗ್ರಹಣೆಯಾಗದೆ, ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಮತ್ತು ವಿಸ್ತರಣೆ ಅಸಾಧ್ಯವಾಗಿತ್ತು. ಈ ಹಂತದಲ್ಲಿ ವಿದ್ಯುದಾಗರದ ಸಾಮಾನ್ಯ ಬೇಡಿಕೆ ೬೦೦ ಕ್ಯೂಸೆಕ್ಸ್ ಆದರೆ ಬೇಸಿಗೆಯ ಮೂರು ತಿಂಗಳೂ ನೀರಿನ ಕೊರತೆ ವಿಪರೀತವಾಗಿ, ಬಹಳಷ್ಟು ಹಣ ದಂಡದ ರೂಪದಲ್ಲಿ ಕೋಲಾರದ ಚಿನ್ನದ ಗಣಿ ಕಂಪನಿಗೆ ಸಂದಾಯವಾಗುತ್ತಿತ್ತು. ಇದರ ನಡುವೆ ಕೆ.ಜಿ.ಎಫ್.ಗೆ ವಿದ್ಯುತ್ ಪೂರೈಸುವ ಪ್ರಸರಣ ಮಾರ್ಗಗಳು ಹಳೆಯದಾಗಿ ಹರಿವಿನಲ್ಲಿ ನಷ್ಟವುಂಟಾಗುತ್ತಿತ್ತು. ಇದನ್ನು ನವೀಕರಿಸಿ ಉತ್ತಮ ಗುಣಮಟ್ಟದ ನಿರಂತರ ವಿದ್ಯುತ್ ನೀಡಿದರೆ ಗಣಿಗಾರಿಕೆ ಕಂಪನಿಯವರು ಪ್ರಸ್ತುತ ನೀಡುತ್ತಿದ್ದ ಪ್ರತಿ ಹೆಚ್.ಪಿ.ಗೆ ೧೦ ಪೌಂಡ್‌ಗೆ ಬದಲಾಗಿ ೧೨ ಪೌಂಡ್ ನೀಡಲು ಒಪ್ಪಿದರು.[೧೭]

೩.೪. ನಾಲ್ಕನೆಯ ಹಂತದ ವಿಸ್ತರಣೆ

ಹೆಚ್ಚಿನ ಬೇಡಿಕೆ ಮತ್ತು ಕೃಷ್ಣರಾಜ ಸಾಗರದಲ್ಲಿ ಸಂಗ್ರಹವಾದ ನೀರಿನ ಕಾರಣದಿಂದ, ನಾಲ್ಕನೇ ವಿದ್ಯುತ್ ಘಟಕ ಸ್ಥಾಪಿಸುವುದು ಅನಿವಾರ್ಯವಾಯಿತು. ೧೯೧೩ರಲ್ಲಿ ಮೈಸೂರು ದರ್ಬಾರಿನಿಂದ ಶಿವನ ಸಮುದ್ರ ವಿದ್ಯುದಾಗರದ ನಾಲ್ಕನೇ ವಿಸ್ತರಣೆಗೆ ಅನುಮೋದನೆ ದೊರೆಯಿತು.[೧೮] ೨೦೦೦ ಹೆಚ್ .ಪಿ.ಸಾಮರ್ಥ್ಯದ ಎರಡು ಜನರೇಟರ್‌ಗಳ ಮೂಲಕ ಒಟ್ಟು ೪೦೦೦ ಹೆಚ್.ಪಿ. ಹೆಚ್ಚುವರಿ ವಿದ್ಯುತ್ ಉತ್ಪಾದನೆಯ ಜೊತೆಗೆ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಧರಿಸಲಾಯಿತು.

ಅ. ಫೋರ್‌ಬೇಗೆ ಮೂರು ಚೇಂಬರ್‌ಗಳನ್ನು ಹೊಸದಾಗಿ ಸೇರಿಸುವುದು ಮತ್ತು ಅಲ್ಲಿಂದ ನಾಲ್ಕನೇ ವಿಸ್ತರಣೆಗೆ ಎರಡು ಮತ್ತು ಮುಂದಿನ ಐದನೇ ವಿಸ್ತರಣೆಗೆ ಒಂದು ಪೆನ್‌ಸ್ಟಾಕ್ ಪೈಪ್ ಹೊರ ಹೋಗಲು ಅನುವು ಮಾಡಿಕೊಡುವುದು.[೧೯]

ಆ. ಎರಡು ೧೫೦೦ ಕಿ.ಮೀ.ಗಳ ವಿದ್ಯುತ್ ಜನಕಗಳ ಸ್ಥಾಪನೆ ಮತ್ತು ವಿತರಣೆಯ ವೋಲ್ಟೇಜನ್ನು ೭೮,೦೦೦, ವೋಲ್ಟೇಜ್‌ಗೆ ಹೆಚ್ಚಿಸುವುದು.

ಇ. ಎರಡು ೨೭೦೦ ಹೆಚ್.ಪಿ.ಪೆಲ್ಟನ್‌ವೀಲ್ ಟರ್ಬೈನ್‌ಗೆ ನೀರುಣಿಸಲು ಎರಡು ಪೆನ್ ಸ್ಟಾಕ್‌ಗಳನ್ನು ಅಳವಡಿಸಿ ಮತ್ತು ವಿದ್ಯುದಾಗರವನ್ನು ಮತ್ತಷ್ಟು ವಿಸ್ತರಿಸಿ ಹೊಸ ಜನರೇಟರ್‌ಗಳನ್ನು ಅಳವಡಿಸಲಾಯಿತು.

ಈ. ಶಿವನಸಮುದ್ರ ಅಣೆಕಟ್ಟೆಗೆ ಮತ್ತು ಕಾಲುವೆಗೆ ಅಗತ್ಯ ವಿಸ್ತರಣೆ ಮತ್ತು ರಿಪೇರಿ ಮಾಡಿ, ೧೦೦೦ ಕ್ಯೂಸೆಕ್ಸ್ ನೀರನ್ನು ನಿರ್ವಹಿಸುವ ಸಾಮರ್ಥ ಒದಗಿಸಲು ಅಣೆಕಟ್ಟೆಯನ್ನು ಮೂರು ಅಡಿ ಮತ್ತು ಕಾಲುವೆಯನ್ನು ಎರಡು ಅಡಿ ಎತ್ತರಿಸಲಾಯಿತು.[೨೦]

ಉ. ಇದುವರೆಗೂ ಸ್ಥಾಪಿಸಲಾದ ಎಲ್ಲಾ ೨೭,೩೭೫, ಕೆ.ವಿ.ಎ ಏರ್‌ಕೊಲ್ಡ್ ಟ್ರಾನ್ಸ್‌ಫಾರ್ಮರ್‌ಗಳನ್ನು ೧೭೫೦ ಕೆ.ವಿ.ಎ ೨೨೦೦/೭೦,೦೦೦ ವೋಲ್ಟೇಜ್ ವಾಟರ್‌ಕೊಲ್ಡ್ ಟ್ರಾನ್ಸ್‌ಫಾರ್ಮರ್‌ಗಳಿಂದ ಬದಲಾಯಿಸುವುದು ಮತ್ತು ೭೮.೦೦೦ ವೋಲ್ಟ್‌ಜ್‌ಗೆ ಅಗತ್ಯ ಸ್ವಿಚ್‌ಗೇರ್ ಸ್ಥಾಪಿಸುವುದು. ಏರ್‌ಕೂಲ್ಡ್ ಟ್ರಾನ್ಸ್‌ಫಾರ್ಮರ್‌ಗಳು ಗಾಳಿಯ ಬೀಸುವಿಕೆಯಿಂದ ತಂಪಾಗುತ್ತದೆ. ವಾಟರ್ ಕೂಲ್ಡ್ ಟ್ರಾನ್‌ಫಾರ್ಮರ್‌ಗಳು, ಟ್ರಾನ್ಸ್‌ಫಾರ್ಮರ್‌ನಲ್ಲಿ ಉತ್ಪತ್ತಿಯಾಗುವ ಶಾಖವನ್ನು ಹೊರಕ್ಕೆ ಒಯ್ಯುವುದು.[೨೧]

ಊ. ಕೆ.ಜಿ.ಎಫ್.ಗೆ ಇದುವರೆಗಿದ್ದ ೩೫,೦೦೦ ವೋಲ್ಟ್‌ನ ೩ನೇ ಪ್ರಸರಣ ಮಾರ್ಗಗಳನ್ನು ಬದಲಾಯಿಸಿ, ಎರಡು ೭೮.೦೦೦ ವೋಲ್ಟೇಜ್ ಪ್ರಸರಣ ಮಾರ್ಗಗಳನ್ನು ನಿರ್ಮಿಸಲಾಯಿತು. ಮೊದಲಿನ ಮರದ ಕಂಬಗಳನ್ನು ಉಕ್ಕಿನ ಕಂಬಗಳಿಗೆ ಬದಲಾಯಿಸಲಾಯಿತು.[೨೨] ಟ್ರಾನ್ಸ್‌ಫಾರ್ಮರ್‌ಗಳ ನವೀಕರಣ, ಟ್ರಾನ್ಸ್‌ಫಾರ್ಮರ್ ಕಟ್ಟಡಗಳ ನಿರ್ಮಾಣ, ಪಂಪ್‌ಹೌಸ್, ಹೊಸ ದೀಪದ ಉಪಕರಣಗಳು, ಸ್ವಿಚ್‌ಗೇರ್ ಮುಂತಾದ ಕೆಲಸಗಳನ್ನು ಕೈಗೊಳ್ಳಲಾಯಿತು.

ಋ. ಶಿವನಸಮುದ್ರದಲ್ಲಿ ಹಲವು ಕಾಮಗಾರಿಗಳನ್ನು ಕೈಗೊಂಡು ನವೀಕರಿಸಲಾಯಿತು. ಕೋಲಾರ ಪ್ರಸರಣ ಮಾರ್ಗದಲ್ಲಿನ ಸರ್ಜಾಪುರ ಮತ್ತು ಕನಕನಹಳ್ಳಿ ಸೆಕ್ಷನ್ ಸ್ಥಾವರಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಯಿತು.[೨೩] ಬೆಂಗಳೂರಿಗೆ ವಿದ್ಯುತ್ ಪೂರೈಸುತ್ತಿದ್ದ ೧೫೦ ಕೆ.ವಿ.ಎ. ಪರಿವರ್ತಕಗಳನ್ನು ೩೭೫ ಕೆ.ವಿ.ಎ.ಗೆ ಹೆಚ್ಚಿಸಲಾಯಿತು. ಅದೇ ರೀತಿ ಮೈಸೂರಿಗೆ ವಿದ್ಯುತ್ ಪೂರೈಸುತ್ತಿದ್ದ ೧೨೫ ಕೆ.ವಿ.ಎ ಟ್ರಾನ್ಸ್‌ಫಾರ್ಮರ್‌ಗಳನ್ನು ೩೭೫ ಕೆ.ವಿ.ಎ. ಟ್ರಾನ್ಸ್‌ಫಾರ್ಮರ್‌ಗೆ ಬದಲಾಯಿಸಲಾಯಿತು. ಇದರಿಂದ ಬೆಂಗಳೂರಿಗೆ ೨೦೦೦ ಹೆಚ್.ಪಿ. ಮೈಸೂರಿಗೆ ೧೦೦೦ ಹೆಚ್.ಪಿ. ವಿದ್ಯುತ್ ರವಾನೆ ಸಾಧ್ಯವಾಯಿತು.

೧೯೧೩-೧೪ರಲ್ಲಿ ಶಿವನಸಮುದ್ರದಲ್ಲಿ ೭೪,೩೨೬,೭೫೭ ಯೂನಿಟ್ ವಿದ್ಯುತ್ ಉತ್ಪಾದಿಸಿ ಅದರಲ್ಲಿ ಕೋಲಾರದ ಗಣಿಗೆ ೬೭,೫೫೪,೫೯೭ ಯೂನಿಟ್, ಬೆಂಗಳೂರು ನಗರಕ್ಕೆ, ೪,೯೭೮,೭೨೦, ಯೂನಿಟ್ ಮತ್ತು ಮೈಸೂರಿಗೆ, ೧,೭೯೩,೪೪೦ ಯೂನಿಟ್ ವಿದ್ಯುತ್ ಅನ್ನು ಪೂರೈಸಲಾಯಿತು. ಅದೇ ರೀತಿ ೧೯೧೪-೧೫ರಲ್ಲಿ ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಗಣನೀಯವಾಗಿ ಹೆಚ್ಚಳಗೊಂಡಿತು. ಈ ವರ್ಷದಲ್ಲಿ ೮೬,೩೫೦,೬೧೫. ಯೂನಿಟ್ ಉತ್ಪಾದನೆಯಾಗಿ ಕೋಲಾರಕ್ಕೆ ೭೮,೦೫೭,೯೦೦ ಯೂನಿಟ್, ಬೆಂಗಳೂರು ನಗರಕ್ಕೆ, ೫,೬೧೦,೪೫೫ ಮತ್ತು ಮೈಸೂರಿಗೆ ೨,೬೮೭,೨೬೦ ಯೂನಿಟ್ ಗಳನ್ನು ಪೂರೈಸಲಾಯಿತು.[೨೪]

ನಾಲ್ಕನೇ ವಿಸ್ತರಣೆಯ ಒಟ್ಟು ವೆಚ್ಚ ೧೫,೭೪,೨೨೫ ರೂಪಾಯಿಗಳಾಯಿತು. ಎಲ್ಲ ಮಾರ್ಪಾಡಿನ ನಂತರ ವಿದ್ಯುತ್ ಸರಬರಾಜು ನಷ್ಟವು ಕಡಿಮೆಯಾಗಿ, ಸುಮಾರು ೧೩೩೬ ಹೆಚ್.ಪಿ ವಿದ್ಯುತ್ ಉಳಿತಾಯವಾಯಿತು. ಆದರೆ ಬೆಂಗಳೂರು ಮತ್ತು ಮೈಸೂರು ಮಾರ್ಗಗಳಲ್ಲಿ ಯಾವುದೇ ಉನ್ನತೀಕರಣ ಕೆಲಸಗಳು, ಆಗದ ಕಾರಣ ಪ್ರಸರಣ ಮಾರ್ಗದಲ್ಲಿ ನಷ್ಟ ಉಂಟಾಗುತ್ತಿತ್ತು. ಕೆ.ಜಿ.ಎಫ್ ಮಾರ್ಗಗಳ ನಷ್ಟ ಕಡಿಮೆ ಆದ್ದರಿಂದ ಶಿವನಸಮುದ್ರದಲ್ಲಿ ನೀರಿನ ಬಳಕೆಯು ಕಡಿಮೆಯಾಯಿತು. ಮೊದಲು ೬೪೨ ಕ್ಯೂಸೆಕ್ಸ್ ಬಳಕೆಯಾಗುತ್ತಿದ್ದರೆ ಈಗ ೫೭೫ ಕ್ಯೂಸೆಕ್ಸ್ ಬಳಕೆಯಾಗಿ ನೀರನ್ನು ಸಹ ಉಳಿತಾಯ ಮಾಡಲು ಸಾಧ್ಯವಾಯಿತು.[೨೫]

ನಾಲ್ಕನೇ ವಿಸ್ತರಣೆ ನಂತರ ಶಿವನಸಮುದ್ರದ ಒಟ್ಟು ಉತ್ಪಾದನೆ

ಕ್ರ.ಸಂ.	ಹಂತಗಳು	ಜನರೇಟರ್	ಸಾಮರ್ಥ್ಯ	ಒಟ್ಟು
೧	ಮೊದಲನೇ ಹಂತ	೬	೧೧೫೦	೬೯೦೦ ಹೆಚ್.ಪಿ
೨	ಎರಡನೇ ಹಂತ	೫	೧೧೫೦	೫೭೫೦ ಹೆಚ್.ಪಿ
೩	ಮೂರನೇ ಹಂತ	೧	೨೦೦೦	೨೦೦೦ ಹೆಚ್.ಪಿ
೪	ನಾಲ್ಕನೇ ಹಂತ	೨	೨೦೦೦	೪೦೦೦ ಹೆಚ್.ಪಿ
	ಒಟ್ಟು			೧೮,೬೫೦ ಹೆಚ್.ಪಿ.

೩.೫. ಐದನೇ ಹಂತದ ವಿಸ್ತರಣೆ

ನಾಲ್ಕನೇ ವಿಸ್ತರಣೆ ಮುಗಿಯುತ್ತಿದ್ದಂತೆ ಬೇಡಿಕೆಯು ಇನ್ನಷ್ಟು ಹೆಚ್ಚತೊಡಗಿತು. ಪ್ರಸ್ತುತ ಇರುವ ಮಾರ್ಗಗಳಿಗೆ ಪೂರ್ಣ ಪ್ರಮಾಣದ ವಿದ್ಯುತ್ ಸರಬರಾಜು ಮಾಡಿದರೆ ಸಾಕಾಗುವ ಸಂದರ್ಭ. ಆಗ

ಸರ್ಕಾರವು ೩,೬೩, ೧೮೮ ರೂಪಾಯಿಗಳ ವೆಚ್ಚದಲ್ಲಿ ೪೦೦೦ ಹೆಚ್.ಪಿ ಸಾಮರ್ಥ್ಯದ ಒಂದು ವಿದ್ಯುತ್ ಘಟಕವನ್ನು ಸ್ಥಾಪಿಸಲು ೧೯೧೫ರಲ್ಲಿ ಅನುಮತಿ ನೀಡಿತು.[೨೬] ಮೈಸೂರಿನ ಪ್ರಸರಣ ಮಾರ್ಗದ ವೋಲ್ಟೇಜ್‌ನ್ನು ೨೨,೫೦೦ ರಿಂದ ೩೫,೦೦ ವೋಲ್ಟೇಜ್‌ಗೆ ಹೆಚ್ಚಿಸಲಾಯಿತು. ಐದನೇ ವಿಸ್ತರಣೆಯ ಪ್ರಮುಖ ಅಂಶವೆಂದರೆ ಮೊಟ್ಟಮೊದಲ ಬಾರಿಗೆ ರಿಯಾಕ್ಷನ್ ಟರ್ಬೈನ್‌ಗಳನ್ನು ಬಳಸಲಾಯಿತು.[೨೭] ಇದರಿಂದ ಉತ್ಪಾದನೆಯ ಕಾರ್ಯಕ್ಷಮತೆ ಹೆಚ್ಚಿತು. ಈ ವಿಸ್ತರಣೆಯಿಂದ ವಿದ್ಯುದಾಗರದ ಸಾಮರ್ಥ್ಯವನ್ನು ೧೮,೬೫೦ ಹೆಚ್.ಪಿ.ಯಿಂದ ೨೨,೬೫೦ ಹೆಚ್.ಪಿಗೆ ಹೆಚ್ಚಿಸಲಾಯಿತು. ಜೊತೆಗೆ ಕೆಲವು ಘಟಕಗಳ ಉನ್ನತೀಕರಣದಿಂದ ವಿದ್ಯುದಾಗರದ ಕಾರ್ಯಕ್ಷಮತೆಯನ್ನು ಅಧಿಕಗೊಳಿಸಿ ಕೆ.ಆರ್.ಎಸ್.ನಿಂದ ಮೊದಲ ಹಂತದ ವಿದ್ಯುತ್‌ಗಾಗಿ ಕೊಡಮಾಡಿದ ೭೫೦ ಕ್ಯೂಸೆಕ್ಸ್ ನೀರು ಪೂರ್ಣ ಪ್ರಮಾಣದಲ್ಲಿ ೨೨,೬೫೦ ಹೆಚ್.ಪಿ ವಿದ್ಯುತ್ ಉತ್ಪಾದನೆಗೆ ಬಳಕೆ ಮಾಡಿಕೊಳ್ಳಲಾಯಿತು.

ಐದನೇ ಹಂತದ ವಿಸ್ತರಣೆಯ ಸಂದರ್ಭದಲ್ಲಿ ತುಂಬಾ ಹಳೆಯದಾಗಿದ್ದ ಬೆಂಗಳೂರಿನ ವಿದ್ಯುತ್ ಪ್ರಸರಣಾ ಮಾರ್ಗವನ್ನು ಹೆಚ್ಚಿನ ಸಾಮರ್ಥ್ಯದ ವಿದ್ಯುತ್ ತಂತಿಗಳನ್ನು ಬಳಸಿ ಹೊಸದಾಗಿ ನವೀಕರಿಸಲಾಯಿತು.[೨೮] ಕೋಲಾರದ ಪ್ರಸರಣ ಮಾರ್ಗಗಳಾದ ಲೈನ್ ೧ ಮತ್ತು ಲೈನ್ ೨ನ್ನು ಕನಕನಹಳ್ಳಿ ಮತ್ತು ಸರ್ಜಾಪುರ ಮಾರ್ಗವಾಗಿ ಅಲ್ಯೂಮಿನಿಯಂ ತಂತಿಗಳನ್ನು ಬಳಸಿ ವಿಸ್ತರಿಸಲಾಯಿತು. ಶಿವನಸಮುದ್ರದಿಂದ ಧನಗೆರೆ ಮತ್ತು ಮಾಧವ ಮಂತ್ರಿ ಅಣೆಕಟ್ಟೆಗೆ ದೂರವಾಣಿ ಸೌಲಭ್ಯ, ಕನಕಪುರ ಮತ್ತು ಸರ್ಜಾಪುರದಲ್ಲಿ ವಿದ್ಯುತ್ ಪರಿವೀಕ್ಷಕರ ವಸತಿ ನಿಲಯ, ಶಿವನಸಮುದ್ರದಲ್ಲಿ ಎರಡನೇ ಹಂತದಲ್ಲಿ ವಿದ್ಯುದಾಗರ ಕಾರ್ಯ ನಿರ್ವಾಹಕರ ಮತ್ತು ಕೂಲಿಕಾರ್ಮಿಕರ ವಸತಿ ಗೃಹಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಯಿತು.

೧೯೧೪ರಲ್ಲಿ ಮೈಸೂರು ಸರ್ಕಾರವು ಸಣ್ಣ-ಸಣ್ಣ ಉದ್ಯಮಿಗಳಿಗೆ ವಿತರಿಸಲಾಗುತ್ತಿದ್ದ ವಿದ್ಯುತ್ ಶುಲ್ಕವನ್ನು ಕಡಿಮೆ ಮಾಡಿತು. ಅಲ್ಲದೇ ಬೆಂಗಳೂರಿಗೆ ಸರಬರಾಜು ಆಗುತ್ತಿದ್ದ ವಿದ್ಯುತ್ ಅಧಿಕ ಲೋಡ್ ಹೊಂದಿದ್ದರಿಂದ ಬೆಂಗಳೂರು ಸುತ್ತಮುತ್ತ ಕೈಗಾರಿಕೆಗಳನ್ನು ಸ್ಥಾಪಿಸಲು ಹಲವು ಗ್ರಾಹಕರು ಮುಂದಾದರು. ನಂತರ ಬೆಂಗಳೂರು ಕೈಗಾರಿಕಾ ಪ್ರದೇಶವಾಗಿ ಮಾರ್ಪಾಡು ಹೊಂದಿತು. ಆ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಒಂದು ಏರ್‌ಬ್ಲಾಸ್ಟ್ ಟ್ರಾನ್ಸ್‌ಫಾರ್ಮರ್‌ಗಳನ್ನು, 'ಎ' ಸ್ಟೇಷನ್‌ನಲ್ಲಿ ೧೫೦ ಕೆ.ವಿ.ಮೋಟಾರ್ ಜನರೇಟರ್‌ಗಳನ್ನು ಅಳವಡಿಸಲಾಯಿತು.[೨೯] ವಿದ್ಯುತ್ ಕ್ಷೇತ್ರದಲ್ಲಿ ಹಲವು ಬೆಳವಣಿಗೆಗಳು ಹೆಚ್ಚಾಗಿದ್ದ ಸಂದರ್ಭದಲ್ಲಿ ವಿದ್ಯುತ್ ಕ್ಷೇತ್ರದ ಪ್ರಗತಿಗೆ ಪೂರಕವಾಗಿ ಬೆಂಗಳೂರು ದಂಡು ಪ್ರದೇಶದಲ್ಲಿ ಎಲೆಕ್ಟ್ರಿಕಲ್ ಲ್ಯಾಬೋರೇಟರಿಯನ್ನು ಸ್ಥಾಪಿಸಲಾಯಿತು.[೩೦] ಅದೇ ರೀತಿ ಬೆಂಗಳೂರು ದಂಡು ಪ್ರದೇಶದಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದ 'ಬಿ' ಮತ್ತು 'ಸಿ'

ಸ್ಟೇಷನ್‌ನಲ್ಲಿ ೧೫೦ ಕೆ.ವಿ. ಸಾಮರ್ಥ್ಯದ ಮೋಟಾರ್ ಜನರೇಟರಗಳನ್ನು ಅಳವಡಿಸಿಕೊಳ್ಳಲಾಯಿತು. ಹಲವು ಒಳಾಂಗಣ ವಿದ್ಯುತ್‌ಗೆ ಬೇಡಿಕೆ ಬಂದ ಹಿನ್ನೆಲೆ ಈ ರೀತಿಯ ಕ್ರಮ ಕೈಗೊಳ್ಳಲಾಯಿತು.

ಅ. ಗೊಮೆಡ್

೧೯೦೩ರಲ್ಲಿ ಗೊಮೆಡ್ ಪ್ರಾರಂಭವಾಗಿ, ೧೯೧೦ರಲ್ಲಿ ಮುಖ್ಯ ಇಂಜಿನಿಯರ್‌ರವರಿಗೆ ಇಲಾಖೆಯ ನಿಯಂತ್ರಣ ದೊರೆಯಿತು. ೧೯೧೯ರಲ್ಲಿ ಗೋಮೆಡ್ ಪ್ರತ್ಯೇಕ ಇಲಾಖೆಯಾಗಿ ಅಸ್ತಿತ್ವವನ್ನು ಪಡೆಯಿತು. ೧೯೦೭ರ ಹೊತ್ತಿಗೆ ವಿದ್ಯುತ್ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬಹಳಷ್ಟು ವಿದೇಶಿಯರು ಸ್ವದೇಶಕ್ಕೆ ಹಿಂತಿರುಗಿದರು. ಕೆಲವರು ಮಾತ್ರ ಸೇವೆಯಲ್ಲಿದ್ದರು. ೧೯೦೭ರಲ್ಲಿ ನಡೆದ ಮೂರನೆಯ ವಿಸ್ತರಣೆಯು ಬಹುತೇಕ ಸ್ವದೇಶಿ ತಂತ್ರಜ್ಞರಿಂದ ರೂಪಿಸಲ್ಪಟ್ಟಿತ್ತು. ಹಿಂದೆ ತಾಂತ್ರಿಕ ಶಿಕ್ಷಣ ನೀಡುತ್ತಿದ್ದ ಕಾಲೇಜುಗಳು ಭಾರತದಲ್ಲಿ ಸಾಕಷ್ಟು ಇರಲಿಲ್ಲ. ಭಾರತದಲ್ಲಿ ವಿದ್ಯುತ್ ಮತ್ತು ತಾಂತ್ರಿಕ ಶಿಕ್ಷಣ ನೀಡುತ್ತಿದ್ದ ಏಕ ಮಾತ್ರ ಸಂಸ್ಥೆಯೆಂದರೆ "ಮುಂಬಯಿಯ ವಿಕ್ಟೋರಿಯಾ ಜೂಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್" ಮೈಸೂರು ಸರ್ಕಾರವು ವಾರ್ಷಿಕ ಮೂರು ಅಥವಾ ನಾಲ್ಕು ಮಂದಿಯನ್ನು ಈ ತಾಂತ್ರಿಕ ಶಾಲೆಗೆ ಕಳುಹಿಸುತ್ತಿತ್ತು.[೧೧] ೧೯೦೫ರಲ್ಲಿ ಮಾತ್ರ ನಾಲ್ವರನ್ನು ವಿದೇಶಕ್ಕೆ ತರಬೇತಿಗಾಗಿ ಕಳುಹಿಸಲಾಯಿತು. ೧೯೩೦ರ ಹೊತ್ತಿಗೆ ಕೇವಲ ಮುಖ್ಯ ಇಂಜಿನಿಯರ್ ಬಿಟ್ಟರೆ ಉಳಿದೆಲ್ಲ ಹುದ್ದೆಗಳನ್ನು ದೇಶೀಯ ಪ್ರತಿಭೆಗಳೇ ಆಕ್ರಮಿಸಿದ್ದವು. ೧೯೧೩ರಲ್ಲಿ ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗವು, ೧೯೧೭ರಲ್ಲಿ ಬೆಂಗಳೂರು ಯೂನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭವಾಯಿತು.[೨] ನಂತರದ ದಿನಗಳಲ್ಲಿ ಸ್ಥಳೀಯ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಕಲಿತರು. ಕೆಲವರು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಲು ವಿದೇಶಗಳಿಗೆ ಹೋಗಲಾರಂಬಿಸಿದರು. ಈ ಎಲ್ಲ ಕಾರಣಗಳಿಂದ ಮೈಸೂರು ರಾಜ್ಯದಲ್ಲಿ ತರಬೇತಿ ಪಡೆದ ಪರಿಣಿತರು, ದೇಶದ ವಿವಿಧ ರಾಜ್ಯಗಳ ಹಲವು ಇಲಾಖೆಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದಿದ್ದರು. ಆ ಸಂದರ್ಭದಲ್ಲಿ ಇಂಜಿನಿಯರಿಂಗ್ ಪದವಿ ಪಡೆಯಲು ಇತರ ರಾಜ್ಯಗಳಿಂದ ಅನೇಕ ವಿದ್ಯಾರ್ಥಿಗಳು ಮೈಸೂರು ರಾಜ್ಯಕ್ಕೆ ಆಗಮಿಸುತ್ತಿದ್ದರು. ಮೈಸೂರಿನ ಇಂಜಿನಿಯರ್‌ಗಳಿಗೆ ಇತರ ರಾಜ್ಯಗಳಲ್ಲಿ ಇನ್ನಿಲ್ಲದ ಮನ್ನಣೆ ದೊರೆಯುತ್ತಿತ್ತು.

ಆ. ಆ ಸಂದರ್ಭದಲ್ಲಿ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದವರು.

೧. ಸಿ.ಎಂ.ಕಾರಿಯಪ್ಪ, ಮೈಸೂರಿನ ಮುಖ್ಯ ಎಂಜಿನಿಯರ್

೨. ಎನ್.ಎನ್.ಅಯ್ಯಂಗಾರ್, ಟಾಟಾ ಎಲೆಕ್ಟ್ರಿಕಲ್ ಕಂಪನಿಯ ಮುಖ್ಯ ಎಂಜಿನಿಯರ್

೩. ಮಹಮದ್ ಹಯಾತ್, ಮುಖ್ಯ ಎಂಜಿನಿಯರ್, ದೆಹಲಿ ಕೇಂದ್ರ ವಿದ್ಯುತ್ ಪ್ರಾಧಿಕಾರದ ಉನ್ನತ ಹುದ್ದೆ

೪. ಜಿ.ಆರ್.ನರಸಿಂಹಯ್ಯಂಗಾರ್, ಬೆಂಗಳೂರಿನ ಪವರ್ ಅಂಡ್ ಲೈಟ್‌ನ ಅಧೀಕ್ಷಕರು.

೧೯೧೮ರಲ್ಲಿ ಮೈಸೂರು ಸರ್ಕಾರವು ವಿದ್ಯುತ್ ನಿಂದ ನೀರಿನ ಪಂಪನ್ನು ಚಾಲನೆಗೊಳಿಸಿ ಕೃಷಿಗೆ ನೀರೊದಗಿಸುವ ವ್ಯವಸ್ಥೆಯ ಪ್ರಯೋಗವನ್ನು ಮಾಡಲ್ಪಟ್ಟಿತು.[೩೩] ಅಂದಿನ ದಿನದಲ್ಲಿ ಅದು ಅಷ್ಟೊಂದು ಮಹತ್ವ ಪೂರ್ಣ ಎನ್ನಿಸದಿದ್ದರೂ, ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದಾಗ ಅಂದಿನ ಸರ್ಕಾರದ ಮುನ್ನೆಚ್ಚರಿಕೆ, ಮುಂದಾಲೋಚನೆ ಎದ್ದು ಕಾಣುತ್ತದೆ. ೧೯೧೮ರಲ್ಲಿ ಮೈಸೂರು ದರ್ಬಾರು ಕನಕನಹಳ್ಳಿಯ (ಇಂದಿನ ಕನಕಪುರ) ಸಮೀಪ ನಡೆಸಿದ ವಿದ್ಯುತ್ ಪಂಪಿನ ಪ್ರಯೋಗ, ರೈತರಿಗೆ ಅರಿವು ಮೂಡಿಸಿ ಮುಂದಿನ ದಿನಗಳಲ್ಲಿ ಅವರಿಗೆ ವಿದ್ಯುತ್ ಬಳಕೆಯ ಜ್ಞಾನವನ್ನು ತಿಳಿದುಕೊಳ್ಳಲು ಈ ಕ್ರಮಗಳನ್ನು ಕೈಗೊಳ್ಳಲಾಯಿತು.

೩.೬. ಆರನೆಯ ಹಂತದ ವಿಸ್ತರಣೆ

೧೯೧೯ರಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕೈಗಾರಿಕೆಗಳು ಮತ್ತು ವಿದ್ಯುತ್ ಬಳಕೆಯ ಉದ್ಯಮಗಳು ಹೆಚ್ಚಾಗಿ ಆರಂಭಗೊಳ್ಳುತ್ತಿದ್ದ ಸಂದರ್ಭ ನಗರಗಳ ವಿದ್ಯುತ್ ಬೇಡಿಕೆ ೨೦೦೦ ಹೆಚ್.ಪಿ.ಯಷ್ಟು ಅಲ್ಲದೇ ಕೋಲಾರದ ಚಿನ್ನದ ಗಣಿಯು ೨೫೦೦ ಹೆಚ್.ಪಿ.ಯ ಅಧಿಕ ಬೇಡಿಕೆ. ಅಲ್ಲದೇ ಮಧ್ಯಂತರದಲ್ಲಿ ೩.೨೦೦ ಹೆಚ್.ಪಿ. ಸಾಮರ್ಥದ ಲಿಫ್ಟ್ ಸ್ಥಾಪಿಸುವುದಾಗಿ ಅದರ ಅಗತ್ಯ ಬೇಡಿಕೆಯನ್ನು ಮುಂಜಾಗ್ರತವಾಗಿ ತಿಳಿಸಿತು.

ಇದೇ ಸಂದರ್ಭದಲ್ಲಿ ಕೆ.ಆರ್.ಎಸ್ ಜಲಾಶಯ ಕಾಮಗಾರಿ ಪೂರ್ಣವಾಗಿ ೯೦೦ ಕ್ಯೂಸೆಕ್ಸ್ ನೀರು ವಿದ್ಯುತ್ ಉತ್ಪಾದನೆಗೆ ದೊರಕಿತು. ಸಂಪೂರ್ಣ ೯೦೦ ಕ್ಯೂಸೆಕ್ಸ್ ನೀರನ್ನು ಬಳಸಿದರೆ ೩೨,೩೦೦ ಹೆಚ್.ಪಿ.ಯಷ್ಟು ವಿದ್ಯುತ್ ಉತ್ಪಾದಿಸಬಹುದೆಂದು ತಜ್ಞರು ವರದಿ ನೀಡಿದರು. ಹಳೆಯ ಟರ್ಬೈನ್‌ಗಳ ಬದಲಿಗೆ ರಿಯಾಕ್ಷನ್ ಮಾದರಿಯ ಫ್ರಾನ್ಸಿಸ್ ಟರ್ಬೈನು ಅಳವಡಿಸುವುದರಿಂದ ಹೆಚ್ಚಿನ ವಿದ್ಯುತ್ ಉತ್ಪಾದನೆ ಸಾಧ್ಯವಾಗುತ್ತದೆ. ಅಲ್ಲದೇ ಒಂದು ಮತ್ತು ಎರಡನೇ ಹಂತದ ವಿಸ್ತರಣೆಯ ಹನ್ನೊಂದು ಇಂಪಲ್ಸ್ ಟರ್ಬೈನ್‌ಗಳನ್ನು ಆರು ರಿಯಾಕ್ಷನ್ ಟರ್ಬೈನ್‌ಗಳಿಗೆ ಬದಲಿಸುವುದು. ಈ ಹನ್ನೊಂದು ಟರ್ಬೈನ್‌ಗಳು, ಹಳತಾಗಿ ಕಾರ್ಯಕ್ಷಮತೆಯನ್ನು ಕಳೆದುಕೊಂಡಿದ್ದವು. ಹೀಗಾಗಿ ೧೧೫೦ ಹೆಚ್.ಪಿ.ಯ ಹನ್ನೊಂದು ಘಟಕಗಳ ಬದಲಿಗೆ ೪೦೦೦ ಹೆಚ್.ಪಿ.ಯ ಆರು ರಿಯಾಕ್ಷನ್ ಟರ್ಬೈನ್ ಘಟಕಗಳನ್ನು ಸ್ಥಾಪಿಸಲಾಯಿತು. ಆರನೇ ವಿಸ್ತರಣೆಯ ನಂತರ ವಿದ್ಯುದಾಗರದ ಒಟ್ಟು ಉತ್ಪಾದನಾ ಸಾಮರ್ಥ್ಯ ೩೪,೦೦೦ ಹೆಚ್.ಪಿ.ಗೆ ಏರಿತು.[೩೪]

೮. ಆರನೇ ವಿಸ್ತರಣೆಯ ಪ್ರಮುಖ ಕಾಮಗಾರಿಗಳು

೧. ಫೋರ್‌ಬೇಯ ಪಶ್ಚಿಮ ತುದಿಗೆ ಒಂದು ಪೆನ್‌ಸ್ಟಾಕ್ ಅಳವಡಿಸಲು ಒಂದು ಹೊಸ ಛೇಂಬರ್ ನಿರ್ಮಿಸಲಾಯಿತು. ಅಲ್ಲದೇ ವಿದ್ಯುದಾಗರದ ಪಶ್ಚಿಮಭಾಗವನ್ನು ಸಹ ವಿಸ್ತರಿಸಲಾಯಿತು. ಇದಕ್ಕಾಗಿ ಹಳೆಯ ಟ್ರಾಲಿಟ್ರಾಕನ್ನು ಕಿತ್ತು. ಇನ್ನೂ ಪಶ್ಚಿಮಕ್ಕೆ ಹೊಸ ಟ್ರಾಲಿಟ್ರಾಕನ್ನು ನಿರ್ಮಿಸಲಾಯಿತು. ಹಳೆಯ ಟ್ರಾಲಿ ಸ್ಥಳದಲ್ಲಿ ಹೊಸ ಪೆನ್‌ಸ್ಟಾಕ್ ಅಳವಡಿಸಲಾಯಿತು. ಇನ್ನುಳಿದ ಐದು ಪೆನ್ ಸ್ಟಾಕ್‌ಗಳನ್ನು ಫೋರ್‌ಬೇ ಒಂದು ಮತ್ತು ಎರಡನೆಯ ಹಂತದಲ್ಲಿ ಅಳವಡಿಸಲಾಯಿತು.

೨. ವಿದ್ಯುದಾಗರದ ಪಕ್ಕದ ಸ್ಥಳದಲ್ಲಿ ಹೊಸ ಟ್ರಾನ್ಸ್‌ಫಾರ್ಮರ್ ಸ್ಥಾವರವನ್ನು ನಿರ್ಮಿಸಲಾಯಿತು. ಕೋಲಾರದ ಮಾರ್ಗಗಳಾಗಿದ್ದ ಹೆಚ್.ಟಿ.ಸ್ವಿಚ್ ಗೇರ್ ಉಪಕರಣಗಳನ್ನು ಬ್ಲಫ್‌ನ ಟ್ರಾನ್ಸ್ ಫಾರ್ಮರ್ ಸ್ಥಾವರದಿಂದ ವಿದ್ಯುದಾಗರದ ಟ್ರಾನ್ಸ್‌ಫಾರ್ಮರ್ ಸ್ಥಾವರಕ್ಕೆ ಸ್ಥಳಾಂತರಿಸಲಾಯಿತು.

ಆರು ಹೊಸ, ೧೭೫೦ ಕೆ.ವಿ.ಎ.ಗಳ ೨೨೦೦/೭೮೦೦೦ ವೋಲ್ಟೇಜ್‌ನ ಆಯಿಲ್, ವಾಟರ್ ಕೊಲ್ಡ್ ಟ್ರೌನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಯಿತು. ೨೪-೪-೧೯೨೨ ರಂದು ಈ ಹೊಸ ವಿಸ್ತರಣೆಯ ಮೊದಲ ಘಟಕ ಉದ್ಘಾಟನೆಯನ್ನು ಮೈಸೂರು ಸರ್ಕಾರದ ದಿವಾನರಾಗಿದ್ದ ಎ.ಆರ್.ಬ್ಯಾನರ್ಜಿಯವರು ನೆರವೇರಿಸಿದರು.[೬೫] ೧೯೨೪ರ ಅಂತ್ಯದ ಹೊತ್ತಿಗೆ ಎಲ್ಲಾ ಆರು ಘಟಕಗಳು ಕಾರ್ಯಾರಂಭವಾದವು. ಈ ವಿಸ್ತರಣೆಯ ಅಂತ್ಯದಲ್ಲಿ ಶಿವನಸಮುದ್ರ ಜಲವಿದ್ಯುದಾಗರ ೪೫೫ ಅಡಿ ಉದ್ದ ೫೮ ಅಡಿ ಅಗಲವಾಗಿದ್ದು, ಪಕ್ಕದ ಟ್ರಾನ್ಸ್‌ಫಾರ್ಮರ್ ಸ್ಥಾವರವು ನಾಲ್ಕು ಅಂತಸ್ತಿನ ಕಟ್ಟಡವಾಗಿತ್ತು.

ಬೆಂಗಳೂರಿಗೆ ಸಂಬಂಧಿಸಿದಂತೆ ಹೊಸ 'ಎ' ಸ್ಥಾವರವನ್ನು ಬೆಂಗಳೂರು ರೇಸ್ ಕೋರ್ಸ್‌ನ ಸಮೀಪ ಆನಂದರಾವ್ ಸರ್ಕಲ್ ಬಳಿ ನಿರ್ಮಿಸಲಾಯಿತು. ಸುಮಾರು ೬೦೦೦ ಹೆಚ್.ಪಿ.ವಿದ್ಯುತ್ತನ್ನು ಸ್ವೀಕರಿಸಲು ಅನುಕೂಲವಾಗುವಂತೆ. ಅಗತ್ಯ ಉಪಕರಣಗಳನ್ನು, ಅದಕ್ಕೆ ಪೂರಕವಾದ ಕಟ್ಟಡವನ್ನು, ಇಲ್ಲಿಂದ ಸೂಲದೇವನಹಳ್ಳಿ ಪಂಪಿಗ್ ಸ್ಥಾವರಕ್ಕೆ ಹೊಸ ವಿದ್ಯುತ್ ಮಾರ್ಗವನ್ನು ನಿರ್ಮಿಸಲಾಯಿತು. 'ಎ' ಸ್ಥಾವರದಲ್ಲಿ ೩೦೦ ಕಿ.ವಾ.ನ ಫ್ರೀಕ್ವೆನ್ಸಿ ಕನ್‌ವರ್ಟರ್ ಮತ್ತು 'ಬಿ' ಸ್ಥಾವರದಲ್ಲಿ ಮತ್ತೊಂದು ಫ್ರೀಕ್ವೆನ್ಸಿ ಕನ್‌ವರ್ಟ್‌ರ್‌ಗಳನ್ನು ಅಳವಡಿಸಲಾಯಿತು. ಇದರ ಮುಖ್ಯ ಉದ್ದೇಶವೆಂದರೆ ೨೫ ಸೈಕಲ್ಸ್ ವಿದ್ಯುತ್ತನ್ನು ದೂರದ ಸ್ಥಳಗಳಿಗೆ ಸಾಗಿಸುವ ಮಾರ್ಗ ಮಧ್ಯೆ ಪ್ರಸರಣ ನಷ್ಟ ಉಂಟಾಗುತ್ತಿತ್ತು. ಅಲ್ಲದೇ ಗೃಹಬಳಕೆಗೆ ಅನುಕೂಲಕವಾಗಿರಲಿಲ್ಲ. ಪ್ರಿಕ್ವೆನ್ಸಿ ಕನ್ವರ್ಟರ್ ಎಂಬ ವಿದ್ಯುತ್ ಉಪಕರಣಗಳನ್ನು ಸ್ಥಾಪಿಸಿದರೆ. ೨೫ ಸೈಕಲ್ಸ್ ವಿದ್ಯುತ್ತನ್ನು ಗುಣಮಟ್ಟದ ೬೦ ಸೈಕಲ್ಸ್ ವಿದ್ಯುತ್‌ಗೆ ಪರಿವರ್ತನೆ ಮಾಡಬಹುದು. ಇದರಿಂದ ಪ್ರಸರಣ ನಷ್ಟವು ತಗ್ಗಿ ಗೃಹಬಳಕೆಗೆ ಅನುಕೂಲವಾಗುತ್ತಿತ್ತು. ನೂತನ 'ಎ' ಸ್ಥಾವರವು ೧೯೨೦ನೇ ಜುಲೈ ತಿಂಗಳಿನಲ್ಲಿ ಕಾರ್ಯಾರಂಭಗೊಳಿಸಲ್ಪಟ್ಟಿತು. ಈ ನಡುವೆ

೧೯೧೫ರಲ್ಲಿ 'ಎ' ಸಾವರದ ಬಳಿ ಉಗ್ರಾಣವನ್ನು, ಅಠಾರಾ ಕಛೇರಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಯಿತು.

ಕೋಲಾರದ ಚಿನ್ನದ ಗಣಿ ಪ್ರದೇಶಕ್ಕೆ ನೀರು ಒದಗಿಸುವ ಸಲುವಾಗಿ ಬೇತಮಂಗಲ ಪಂಪಿಂಗ್ ಸ್ಥಾವರಕ್ಕೆ ವಿದ್ಯುತ್ ಒದಗಿಸಲು ತೀರ್ಮಾನಿಸಿ, ೧೯೨೧ರ ಡಿಸೆಂಬರ್ ತಿಂಗಳಿನಲ್ಲಿ ೧,೦೨,೯೩೪ ರೂಪಾಯಿಗಳ ವೆಚ್ಚದಲ್ಲಿ ವಿದ್ಯುದೀಕರಣಕ್ಕೆ ಒಳಪಡಿಸಲಾಯಿತು.[೩೬] ನಂತರ ಮೈಸೂರಿಗೆ ಇದುವರೆಗೂ ಇದ್ದ ಪ್ರಸರಣ ಮಾರ್ಗದ ವೋಲ್ಟೇಜನ್ನು ೩೫,೦೦೦ ವೋಲ್ಟ್‌ಗೆ ಹೆಚ್ಚಿಸಿ ಅದಕ್ಕೆ ಅಗತ್ಯವಾದ ಸ್ಥಾವರದ ಉನ್ನತ ಮಟ್ಟದ ಕೆಲಸಗಳನ್ನು ಕೈಗೊಳ್ಳಲಾಯಿತು. ಮೈಸೂರಿನಲ್ಲಿ ೨೫ ಸೈಕಲ್‌ಗಳಿಂದ ೬೦ ಸೈಕಲ್‌ಗಳಿಗೆ ಫ್ರೀಕ್ವೆನ್ಸಿ ಮಾರ್ಪಡಿಸುತ್ತಿದ್ದ ಫ್ರಿಕ್ವೆನ್ಸಿ ಕನ್‌ವರ್ಟರ್‌ಗಳ ಸಾಮರ್ಥ್ಯವನ್ನು ೨೦೦ ಕಿ.ವಾ.ನಿಂದ ೪೫೦ ಕಿ.ವಾ.ಗೆ ೨೯,೧೬೦ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಯಿತು.

ಇದುವರೆಗೂ ಕೇವಲ ಸ್ವಿಚಿಂಗ್ ಸ್ಟೇಷನ್ ಆಗಿದ್ದ ಕನಕನಹಳ್ಳಿ ವಿದ್ಯುತ್ ಸ್ಥಾವರವನ್ನು ಪೂರ್ಣ ಪ್ರಮಾಣದ ಟ್ರಾನ್ಸ್‌ಫಾರ್ಮರ್ ಸ್ಥಾವರವನ್ನಾಗಿ ಮಾರ್ಪಡಿಸಲಾಯಿತು. ಶಿವನಸಮುದ್ರದಿಂದ ಕನಕನಹಳ್ಳಿ ಉಪಸ್ಥಾವರಕ್ಕೆ ನಾಲ್ಕು ಮಾರ್ಗಗಳು ಒಳಬಂದು. ಬೆಂಗಳೂರು ಮತ್ತು ಕೆ.ಜಿ.ಎಫ್.ಗೆ ತಲಾ ೨ ಮಾರ್ಗಗಳು ಹೊರ ಹೋಗುವಂತಹ ವ್ಯವಸ್ಥೆ ಮಾಡಲಾಯಿತು.[೩೭] ಅಲ್ಲದೇ ೩೫.೦೦೦ ವೋಲ್ಟೇಜ್‌ನ ೫೦೦೦ ಕೆ.ವಿ.ಎ. ಸಾಮರ್ಥ್ಯದ ಎರಡು ಟ್ರಾನ್ಸ್‌ಫಾರ್ಮರ್ ಬ್ಯಾಂಕುಗಳನ್ನು ಅಳವಡಿಸಲು ಉದ್ದೇಶಿಸಲಾಯಿತು.[೩೮] ಶಿವನಸಮುದ್ರದಿಂದ ಕನಕನಹಳ್ಳಿಯವರೆಗಿದ್ದ ಬೆಂಗಳೂರು ಪ್ರಸರಣ ಮಾರ್ಗದ ೩೫೦೦೦ ವೋಲ್ಟ್‌ನ್ನು ೬೪೦೦೦- ವೋಲ್ಟ್‌ಗೆ ಹೆಚ್ಚಿಸಲಾಯಿತು. ಕನಕನಹಳ್ಳಿಯಿಂದ ಬೆಂಗಳೂರು ಪ್ರಸರಣ ಮಾರ್ಗವನ್ನು ನವೀಕರಿಸಿ ಅದರ ಸಾಮರ್ಥ್ಯವನ್ನು ೧೦,೦೦೦ ಹೆಚ್.ಪಿ.ಗೆ ಹೆಚ್ಚಿಸಲಾಯಿತು. ೧೯೨೬ರ ಈ ಮಾರ್ಗ ಕಾರ್ಯಾರಂಭ ಮಾಡಿತು. ಇದರಿಂದ ಬೆಂಗಳೂರಿಗೆ ವಿದ್ಯುತ್ ಅಡಚಣೆ ಕಡಿಮೆಯಾಯಿತಲ್ಲದೆ, ಪ್ರಸರಣ ನಷ್ಟವೂ ತಗ್ಗಿ ೧೦೦೦ ಹೆಚ್.ಪಿ.ಯಷ್ಟು ವಿದ್ಯುತ್ ಉಳಿತಾಯ ಸಾಧ್ಯವಾಯಿತು.

ಕನಕನಹಳ್ಳಿ ಉಪಸ್ಥಾವರದ ಉದ್ಘಾಟನೆಯನ್ನು ೧೮-೨-೧೯೨೭ ರಂದು, ಅಂದಿನ ಯುವ ರಾಜರಾಗಿದ್ದ ಸನ್ಮಾನ್ಯ ನರಸಿಂಹರಾಜ ಒಡೆಯರು ನೆರವೇರಿಸಿದರು.[೩೯] ಕನಕನಹಳ್ಳಿ ವಿದ್ಯುತ್ ಸ್ಥಾವರದ ನಿರ್ಮಾಣದ ಅವಧಿಯಲ್ಲಿ ಮೇಕೆದಾಟುವಿನಲ್ಲಿ ಜಲವಿದ್ಯುದಾಗರವನ್ನು ಪ್ರಾರಂಭಿಸಲು ಸರ್ವೇ ಕಾರ್ಯ ನಡೆಯಿತು. ಅದರಂತೆ ಮೇಕೆದಾಟುವಿನಲ್ಲಿ ಉತ್ಪಾದಿಸುವ ವಿದ್ಯುತ್ತನ್ನು ಕನಕನಹಳ್ಳಿಯ ವಿದ್ಯುತ್ ಸ್ಥಾವರಕ್ಕೆ ಪೂರೈಕೆ ಮಾಡಿ, ಕೋಲಾರ, ಬೆಂಗಳೂರು ಸುತ್ತಮುತ್ತಲ ಪಟ್ಟಣ, ಹಳ್ಳಿಗಳಿಗೆ ವಿದ್ಯುತ್ ಪೂರೈಸಬಹುದು ಎಂಬ ಯೋಜನೆ ರೂಪಿಸಿದರು. ಆದರೆ ಈ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ.[೪೦]

೧೯೨೩-೨೪ರಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ, ಬಾಲಬ್ರೂಯಿ(ದಿವಾನರ ವಾಸಸ್ಥಳ), ಮೈಸೂರು ವಿಶ್ವವಿದ್ಯಾಲಯ, ಅರಮನೆಯ ಕೆಲವು ಕಟ್ಟಡಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಲಾಯಿತು. ಶಿವನ ಸಮುದ್ರದಲ್ಲಿ ಒಟ್ಟು ೧೫೮,೦೫೪,೩೫೪ ಕಿ.ವಾ. ವಿದ್ಯುತ್ತನು ಉತ್ಪಾದಿಸಿ ೪೫,೧೧,೦೬೬ ರೂಪಾಯಿ ಗಳ ಲಾಭವನ್ನು ಪಡೆಯಿತು. ಅದೇ ವರ್ಷದಲ್ಲಿ ಬೆಂಗಳೂರಿನಲ್ಲಿ ೨,೮೪೫, ಮೈಸೂರಿನಲ್ಲಿ ೨೦೦೦ ಮತ್ತು ಕೋಲಾರದಲ್ಲಿ ೨೩೧ ವಿದ್ಯುತ್ ಬೀದಿ ದೀಪಗಳು ಬಳಕೆಯಲ್ಲಿದ್ದವು.[೪೧]

೧೯೨೪ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶದಲ್ಲಿ ವಿದ್ಯುತ್ ಉತ್ಪಾದನೆ, ಕೆ.ಆರ್.ಎಸ್.ಗೆ ಸಂಬಂಧಿಸಿದಂತೆ ಚರ್ಚೆಗಳು

ವಿದ್ಯುಚ್ಛಕ್ತಿಯ ಕಾಮಗಾರಿ ಮತ್ತು ಕೆ.ಆರ್.ಎಸ್ ಏರ್ಪಾಡು ಇವೆರಡರ ಮೂಲಧನದ ಲೆಕ್ಕಗಳನ್ನು ಒಟ್ಟುಗೂಡಿಸಬೇಕೆಂದು ಇದನ್ನು ಸರಕಾರಿ ಹುಕುಂನಲ್ಲಿ ದಾಖಲಿಸಬೇಕೆಂದು; ಕೆಲವು ಕಾರಣಗಳಿಗಾಗಿ ಸದರಿ ಹುಕುಂನಂತೆ ಕೆ.ಆರ್ .ಎಸ್ ಯೋಜನೆಯ ಉದ್ದೇಶಗಳನ್ನು ಪ್ರಸ್ತಾಪಿಸಲಾಯಿತು.

೧. ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಕ್ಕಾಗಿ ಅವಿಚ್ಛಿನ್ನವಾಗಿ ತಕ್ಕಷ್ಟು ನೀರು ಸರಬರಾಜು ಆಗುವಂತೆ ಏರ್ಪಡಿಸಿಕೊಳ್ಳುವುದು.

೨. ಗಣಿಯ ಕೆಲಸದ ಕಂಪನಿಗಳಿಗೆ ಹೆಚ್ಚು ವಿದ್ಯುಚ್ಛಕ್ತಿಯು ಬೇಕಾಗಿರುವುದರಿಂದಲೂ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ದೀಪಗಳಿಗಾಗಿಯೂ ಕೈಗಾರಿಕೆಗಳಿಗಾಗಿಯೂ ಹೆಚ್ಚು-ಹೆಚ್ಚಾಗಿ ವಿದ್ಯುಚ್ಛಕ್ತಿಯು ಏಕಪ್ರಕಾರವಾಗಿ ಅವಶ್ಯಕವಾಗುತ್ತಿರುವುದರಿಂದಲೂ ಅದನ್ನು ಅಧಿಕವಾಗಿ ಉತ್ಪತ್ತಿ ಮಾಡಲು ತಕ್ಕಷ್ಟು ನೀರು ಒದಗಿಸುವಂತೆ ಮಾಡುವುದು.

೩. ಕಾವೇರಿ ತೀರದಲ್ಲಿ ಅನುಕೂಲವಾದ ಪ್ರದೇಶಗಳಲ್ಲಿ ಹೆಚ್ಚು ವಿಸ್ತೀರ್ಣದ ಜಮೀನುಗಳ ಸಾಗುವಳಿಗೆ ನೀರು ಸರಬರಾಜು ಮಾಡುವುದು.

ಕೆ.ಆರ್.ಎಸ್.ಜಲಾಶಯ ಕಟ್ಟುವ ಕೆಲಸವು ೧೯೧೧-೧೨ರ ಸಾಲಿನಲ್ಲಿ ಪ್ರಾರಂಭವಾಯಿತು. ಆ ವರ್ಷದಲ್ಲಿ ಕಾವೇರಿಯ ವಿದ್ಯುಚ್ಛಕ್ತಿಯ ಏರ್ಪಾಡಿನ ನಿವ್ವಳ ವರಮಾನವು ಸುಮಾರು ೧೦,೫೦,೦೦೦ ಲಕ್ಷರೂಪಾಯಿಗಳಾಗಿದ್ದವು. ಕಾವೇರಿನದಿಯ ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಏರ್ಪಾಡು ಮತ್ತು ಕೆ.ಆರ್.ಎಸ್. ಏರ್ಪಾಡು ಇವೆರಡಕ್ಕೂ ಪರಸ್ಪರವಾಗಿ ಪ್ರಬಲವಾದ ಮತ್ತು ಪ್ರತ್ಯೇಕಿಸಲಾರದ ಅನುಬಂಧವಾಗಿರುತ್ತದೆ. ಇನ್ನು ಮುಂದೆ ಇವುಗಳನ್ನು ಒಂದುಗೂಡಿಸಿದ ಏರ್ಪಾಡನ್ನಾಗಿ ಭಾವಿಸಬೇಕಾಗುತ್ತದೆ.

ಈ ಏರ್ಪಾಡಿಗಾಗಿ ೧೯೨೩-೨೪ನೇಯ ಸಾಲಿನವರೆಗೂ ತಗಲಿರುವ ಒಟ್ಟು ಮೂಲಧನದ ವೆಚ್ಚವು ಸುಮಾರು ४,೦೯,೫೦,೦೦೦ ಲಕ್ಷ ರೂಪಾಯಿಗಳ ಮೂಲಧನಕ್ಕೆ ಶೇಕಡ ೭,೬೯ರಂತೆ ಪ್ರತಿಫಲವು ದೊರೆತಂತಾಯಿತು.

ಆಧಾರ : ಖಾಸಗಿ ದಾಖಲೆಗಳ ವಿಭಾಗ, ಕೆ.ಜಿ.ಎಫ್ ಸಂಗ್ರಹ, ವಿಕಾಸ ಸೌಧ, ಬೆಂಗಳೂರು

೩.೭. ಏಳನೆಯ ಹಂತದ ವಿಸ್ತರಣೆ

೧೯೨೪ರಲ್ಲಿ ಆರನೇ ಹಂತದ ವಿಸ್ತರಣೆ ಮುಗಿಯುವ ಮುನ್ನವೇ ವಿದ್ಯುತ್ ಬೇಡಿಕೆ ಇನ್ನಷ್ಟು ಹೆಚ್ಚಿತು. ಸುಮಾರು ೧೨,೮೦೦ ಹೆಚ್.ಪಿ.ವಿದ್ಯುತ್ ಕೊರತೆ ಉಂಟಾಯಿತು. ಈ ಸಂದರ್ಭದಲ್ಲಿ ವಿದ್ಯುತ್ ಉತ್ಪಾದನೆಗಾಗಿ ಕೆ.ಆರ್.ಎಸ್.ನಿಂದ ೯೦೦ಕ್ಯೂಸೆಕ್ಸ್ ನೀರು ಬಿಡಲಾಗುತ್ತಿತ್ತು. ೧೯೨೪ರ ಮದ್ರಾಸ್ ಸರ್ಕಾರದೊಂದಿಗಿನ ಒಪ್ಪಂದದಂತೆ ವಿದ್ಯುದುತ್ಪಾದನೆಗೆ ೯೦೦ ಕ್ಯೂಸೆಕ್ಸ್ ಬಳಸಿದರೂ ಹೆಚ್ಚಿನ ವಿದ್ಯುತ್ ಬೇಡಿಕೆಗೆ ಇದು ಸಾಲದೆ ಕೊರತೆ ಉಂಟಾಯಿತು. ೯೦೦ ಕ್ಯೂಸೆಕ್ಸ್ ಬದಲು ಮುಂದಿನ ೨೦ ವರ್ಷ. ಅಂದರೆ ನೀರಾವರಿಗೆ ಪೂರ್ಣಸಿದ್ಧತೆ ಆಗುವವರೆಗೆ ವಿದ್ಯುತ್ ಉತ್ಪಾದನೆಗೆ ೧೨೦೦ ಕ್ಯೂಸೆಕ್ಸ್ ನೀರು ಪಡೆಯಲು ಮದ್ರಾಸ್ ಸರ್ಕಾರದ ಅನುಮತಿ ಪಡೆಯಿತು. ೧೨೦೦ ಕ್ಯೂಸೆಕ್ಸ್ ನೀರಿನ ಲಭ್ಯತೆಯಿಂದ ಶಿವನಸಮುದ್ರ ವಿದ್ಯುದಾಗರದಲ್ಲಿ ४೬,೦೦೦ ಹೆಚ್.ಪಿ.ವರೆಗೂ ವಿದ್ಯುತ್ ಉತ್ಪಾದನೆ ಸಾಧ್ಯವೆಂದು ನಿರ್ಧರಿಸಲಾಯಿತು. ಅದರಂತೆ ಇನ್ನೂ ಅಧಿಕ ೧४,೦೦೦ ಹೆಚ್.ಪಿ.ವಿದ್ಯುತ್ ಉತ್ಪಾದನೆಗಾಗಿ ४೫,೫ ಲಕ್ಷ ರೂಪಾಯಿಗಳ ಅಂದಾಜು ಪಟ್ಟಿ ತಯಾರಿಸಲಾಯತು.[४೨]

ಅ. ಏಳನೆಯ ವಿಸ್ತರಣೆಯಲ್ಲಿ ಕೈಗೊಂಡ ಕಾಮಗಾರಿಗಳು

ಅ. ಕಾಲುವೆಗೆ ಹೆಚ್ಚಿನ ನೀರು ಹರಿಯುವಂತೆ ಮಾಡುವ ಉದ್ದೇಶದಿಂದ ಮುಖ್ಯ ಅಣೆಕಟ್ಟೆಯ ಎತ್ತರವನ್ನು ೧.೭೫ ಅಡಿ ಎತ್ತರಿಸಿ ಕಾಲುವೆ ಸಾಮರ್ಥ್ಯವನ್ನು ಈಗಿನ ೧೦೦೦ ಕ್ಯೂಸೆಕ್ಸ್ ನಿಂದ ೧೨೦೦ ಕ್ಯೂಸೆಕ್ಸ್‌ಗೆ ಮಾರ್ಪಡಿಸುವುದು.

ಆ. ಫೋರ್ ಬೇಯನ್ನು ಪೂರ್ವದ ಕಡೆ ವಿಸ್ತರಿಸಿ, ಇನ್ನೂ ಎರಡು ಚೇಂಬರ್ ನಿರ್ಮಿಸುವುದು, ಎರಡು ದೊಡ್ಡ ಟರ್ಬೈನ್‌ಗೆ ನೀರುಣಿಸಲು ೭೫.೧/೨ ಇಂಚಿನ ಎರಡು ಪೆನ್‌ಸ್ಟಾಕ್‌ಗಳನ್ನು ಅಳವಡಿಸಿ ವಿದ್ಯುದಾಗರ ಕಟ್ಟಡವನ್ನು ಇನ್ನು ೮೭.೧/೨ ಅಡಿ ವಿಸ್ತರಿಸಿ, ಇನ್ನೊಂದು ವಿದ್ಯುತ್ ಘಟಕ ಸ್ಥಾಪಿಸುವುದು.[४४]

ಇ. ಎರಡು ೬೦೦೦ ಕಿ.ವ್ಯಾ. ವಿದ್ಯುತ್ ಘಟಕ ಮತ್ತು ಅದಕ್ಕೆ ಅಗತ್ಯವಾದ ೯೦೦೦ ಬಿ.ಹೆಚ್.ಪಿ ಫ್ರಾನ್ಸಿಸ್ ರಿಯಾಕ್ಟರ್ ಟರ್ಬೈನ್ ಸ್ಥಾಪಿಸಿವುದು ೩೩೩೩ ಕೆ.ವಿ.ಎ ಸಾಮರ್ಥ್ಯದ ಒಂಬತ್ತು ೨೨೦೦/

೭೪,೦೦೦ ವೋಲ್ಟ್ ನೀರಿನಿಂದ ತಂಪಾಗುವ ಟ್ರಾನ್ಸ್‌ಫಾರ್ಮರ್‌ಗಳನ್ನು ಈಗಿನ ೧೭೫೦ ಕೆ.ವಿ.ಎ. ಟ್ರಾನ್ಸ್‌ಫಾರ್ಮರ್‌ಗೆ ಬದಲಾಗಿ ಅಳವಡಿಸುವುದು.

ಆ. ಕನಕನಹಳ್ಳಿಯ ಉಪಸ್ಥಾವರದ ಕಾಮಗಾರಿಗಳು

೧. ಕನಕನಹಳ್ಳಿ ಸ್ಥಾವರವನ್ನು, ೩೮.೧/೨ ಅಡಿಗಳಷ್ಟು ವಿಸ್ತರಣೆಗೊಳಿಸಿ ಈಗಿರುವ ಎರಡು ೫೦೦೦ ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ ಬ್ಯಾಂಕಿನ ಜೊತೆಗೆ ಇನ್ನೊಂದು ೫೦೦೦ ಕೆ.ವಿ.ಎ. ೭೮೦೦೦/೩೫೦೦೦ ವೋಲ್ಟೇಜ್ ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಸ್ಥಾಪಿಸುವುದು[೪೪] ಇದರಿಂದ ಬೆಂಗಳೂರಿನ ಜೊತೆಗೆ ಚನ್ನಪಟ್ಟಣ, ರಾಮನಗರ(ಕ್ಲೋಸ್‌ಪೇಟೆ), ಬೆಂಗಳೂರು ನೀರು ಸರಬರಾಜು ಸ್ಥಾವರಗಳಿಗೆ ವಿದ್ಯುತ್ ಸರಬರಾಜು ಮಾಡುವುದು.

೨. ಶಿವನಸಮುದ್ರದಿಂದ ಕನಕನಹಳ್ಳಿಗೆ ೭೮೦೦೦ ವೋಲ್ಟ್‌ನ ನಾಲ್ಕು ಮಾರ್ಗಗಳು, ಕನಕನಹಳ್ಳಿಯಿಂದ ಕೆ.ಜಿ.ಎಫ್‌ಗೆ ೭೮೦೦೦ ವೋಲ್ಟ್‌ನ ಎರಡು ಮಾರ್ಗ (೩೦,೦೦೦ ಹೆಚ್.ಪಿ.ಸಾಮರ್ಥ್ಯ).

೩. ಕೆ.ಜಿ.ಎಫ್ ನಲ್ಲಿ ೨೨.೫೦೦ ವೋಲ್ಟೇಜ್ ಟ್ರಾನ್ಸ್‌ಫಾರ್ಮರ್ ಸ್ಥಾಪಿಸಿ ಬೇತಮಂಗಲಕ್ಕೆ ವಿದ್ಯುತ್ ಸರಬರಾಜು ನೀಡಲಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ೫೦೦೦ ಕೆ.ವಿ.ಎ ಸಾಮರ್ಥ್ಯದ ಸಿಂಕ್ರನೈಸ್ ಕಂಡೆನ್ಸರ್ ಅಳವಡಿಸಲಾಯಿತು.[೪೫] ಇದರಿಂದ ಮೊಟ್ಟಮೊದಲ ಬಾರಿಗೆ ನಮ್ಮ ವಿದ್ಯುತ್ ವ್ಯವಸ್ಥೆಗೆ ಪವರ್ ಫ್ಯಾಕ್ಟರ್ ಸುಧಾರಿಸಲು ಸಿಂಕ್ರನೈಸ್ ಕಂಡೆನ್ಸರ್ ಅಳವಡಿಸಿದಂತಾಯಿತು. ಸಾಮಾನ್ಯವಾಗಿ ಸಿಂಕ್ರನೈಸ್ ಕಂಡೆನ್ಸರ್ ಮತ್ತು ಕೆಪಾಸಿಟರ್ ಬ್ಯಾಂಕ್‌ಗಳನ್ನು ವಿದ್ಯುತ್ ಜಾಲದ ವೋಲ್ಟೇಜ್‌ನ್ನು ಉತ್ತಮ ಮಟ್ಟದಲ್ಲಿ ಕಾಪಾಡಿಕೊಳ್ಳಲು ಮತ್ತು ವಿದ್ಯುತ್ ವಿತರಣಾ ನಷ್ಟವನ್ನು ಕಡಿಮೆ ಮಾಡಲು ಬಳಸುತ್ತಾರೆ. ಆಗ ಬಳಸುತ್ತಿದ್ದ ೨೫,೦೦೦ ಹೆಚ್.ಪಿ ವಿದ್ಯುತ್‌ನಲ್ಲಿ ಸುಮಾರು ೨೦೦೦ ಹೆಚ್.ಪಿ. ಉಳಿತಾಯವಾಗುತ್ತಿತ್ತು.

೪. ಕನಕನಹಳ್ಳಿ ಸ್ಥಾವರದಲ್ಲಿ ೩x೫೦೦೦ ಕೆ.ವಿ.ಎ ೭೮೦೦೦/೩೫೦೦೦ ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಮತ್ತು ಅಗತ್ಯ ಸ್ವಿಚಿಂಗ್ ಉಪಕರಣ.[೪೬] ಇಲ್ಲಿಂದ ಬೆಂಗಳೂರಿಗೆ ೩೫೦೦೦ ವೋಲ್ಟ್‌ನ ಜೋಡಿ ಮಾರ್ಗ, ಬೆಂಗಳೂರಿನಲ್ಲಿ ೩೦೦೦ ಕೆ.ವಿ.ಎ ಸಾಮರ್ಥ್ಯದ ನಾಲ್ಕು ಬ್ಯಾಂಕುಗಳು 'ಎ' ಸ್ಥಾವರಕ್ಕೆ, ಜೊತೆಗೆ ೩೦೦ ಕಿ.ವ್ಯಾ. ಸಾಮರ್ಥ್ಯದ ಎರಡು ಎಫ್.ಸಿ.ಸೆಟ್‌ಗಳು. ಅಲ್ಲದೇ ಶಿವನಸಮುದ್ರದಿಂದ ಮೈಸೂರಿಗೆ ೩೫೦೦೦ ವೋಲ್ಟ್‌ನ ಜೋಡಿಮಾರ್ಗ ಪೂರೈಸಲಾಯಿತು. ಇದೇ ಸಂದರ್ಭದಲ್ಲಿ ಶಿವನಸಮುದ್ರ ಪವರ್ ಚಾನಲ್ಲಿಗೆ ಅಡ್ಡವಾಗಿ ಒಂದು ಸಿಲ್ಟ್ ರಿಸರ್ವಾಯರ್(ಹೊಳು ಜಲಾಶಯ)ವನ್ನು ೫೫,೨೦೦ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿ ಕಾಲುವೆಗೆ ಸೇರುತ್ತಿದ್ದ ಹೊಳನ್ನು ತಡೆ ಹಿಡಿಯುವ ಪ್ರಯತ್ನ ಮಾಡಲಾಯಿತು.

ಇ. ವಿದ್ಯುತ್ ಇಲಾಖೆಯಲ್ಲಿ(ಗೋಮೆಡ್) ಆರ್ಥಿಕ ಶಾಖೆ

ಇಲ್ಲಿಯವರೆಗಿನ ಸಾಧನೆಯನ್ನು ಗಮನಿಸಿದಾಗ ಗೋಮೆಡ್ ಮೈಸೂರು ಸರ್ಕಾರಕ್ಕೆ ಉತ್ತಮ ಆದಾಯವನ್ನು ತರುತ್ತಿದ್ದ ಇಲಾಖೆಯಾಗಿತ್ತು. ಜೊತೆಗೆ ಗೋಮೆಡ್‌ನಲ್ಲಿ ಹೊಸ ಹೊಸ ಕಾಮಗಾರಿಗಳು ನಿರಂತರವಾಗಿ ಪ್ರಗತಿ ಪಥದಲ್ಲಿ ಮುನ್ನೆಡೆದಿತ್ತು. ಈ ಸಂದರ್ಭದಲ್ಲಿ ಇಲಾಖೆಯ ಹಣಕಾಸು ವ್ಯವಹಾರವನ್ನು ಸುವ್ಯವಸ್ಥಿತವಾಗಿ ನಿರ್ವಹಿಸಲು ಆರ್ಥಿಕ ಶಾಖೆಯೊಂದು ಅಗತ್ಯವೆಂದು ಮುಖ್ಯ ಇಂಜಿನಿಯರ್‌ರವರು ಸೂಚಿಸಿದರು. ಮೈಸೂರು ಸರ್ಕಾರ ೫-೧-೧೯೨೫ರಲ್ಲಿ ಪ್ರತ್ಯೇಕ ಹಣಕಾಸು ಶಾಖೆಯನ್ನು ಮಂಜೂರು ಮಾಡಿತು. ಜೊತೆಗೆ ಶ್ರೀಯುತ ಎಂ.ಎ. ಶ್ರೀನಿವಾಸನ್ ರವರನ್ನು ಮೊಟ್ಟ ಮೊದಲ ಆರ್ಥಿಕ ಸಹಾಯಕರನ್ನಾಗಿ ನೇಮಿಸಿತು.[೬೭] ಹೀಗೆ ಆರ್ಥಿಕ ಶಾಖೆಯೂ ಸೇರಿ ವಿದ್ಯುತ್ ಇಲಾಖೆಯು ಸ್ವಯಂ ಪೂರ್ಣ ಇಲಾಖೆಯ ಸ್ವರೂಪ ಪಡೆಯಿತು.

ಈ. ವಿದ್ಯುದಾಗರ ಸ್ಥಾಪಿಸಿ ೨೫ ವರ್ಷಗಳು

೧೯೨೭ರ ಸೆಪ್ಟೆಂಬರ್ ತಿಂಗಳಿನಲ್ಲಿ "ಕಾವೇರಿ ಪವರ್ ಸ್ಕೀಂ"ನ ಬೆಳ್ಳಿ ಹಬ್ಬವನ್ನು ಆಚರಿಸಲಾಯಿತು. ಇದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು ಅಧ್ಯಕ್ಷರಾಗಿದ್ದರು. ೧೯೨೭ನೇ ಇಸವಿ ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತದ ಬೆಳ್ಳಿಹಬ್ಬವೂ ಆಗಿತ್ತು. ಅವರ ಆಡಳಿತದ ಈ ೨೫ ವರ್ಷಗಳಲ್ಲಿ ಮೈಸೂರು ರಾಜ್ಯವು ಅನೇಖ ಪ್ರಗತಿಯತ್ತ ಸಾಗಿತ್ತು. ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸಿಲ್ವರ್ ಜೂಬಿಲಿ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್ ಪ್ರಾರಂಭವಾಗಿ ತಾಂತ್ರಿಕ ಕೆಲಸದ ಸ್ಮರಣೆಯನ್ನು ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸುವುದರೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ತಮಿಳುನಾಡಿನ ಮೆಟ್ಟೂರು ಜಲಾಶಯ ನಿರ್ಮಾಣಕ್ಕೆ ಶಿವನಸಮುದ್ರ ಜಲ ವಿದ್ಯುತ್ ಯೋಜನೆಯಿಂದ ವಿದ್ಯುತ್ ಪೂರೈಕೆ

ಕೃಷ್ಣರಾಜ ಸಾಗರ ನಿಮಾಣ ಕಾರ್ಯಯೋಜನೆಯನ್ನು ಮೈಸೂರು ಸಿದ್ಧಪಡಿಸುವುದಕ್ಕೂ ಮುಂಚೆ ಮದ್ರಾಸ್ ಸರ್ಕಾರವು ಕನ್ನಂಬಾಡಿಗಿಂತ ಕೆಳಗೆ ೬೦ ಮೈಲು ದೂರದ ಮೆಟ್ಟೂರಿನಲ್ಲಿ ಕನ್ನಂಬಾಡಿಗಿಂತ ದೊಡ್ಡದಾದ ಜಲಾಶಯ ನಿರ್ಮಾಣ ಯೋಜನೆ ಸಿದ್ದಪಡಿಸಿತ್ತು. ೧೯೨೫ರ ಜುಲೈ ತಿಂಗಳಲ್ಲಿ ಮೆಟ್ಟೂರು ಜಲಾಶಯದ ಕೆಲಸ ಆರಂಭವಾಯಿತು. ಆದರೆ ವಿಶಾಲವಾದ ಜಲಾಶಯದ ಬೃಹತ್ ನಿರ್ಮಾಣ ಕಾಮಗಾರಿಗೆ ಯಂತ್ರೋಪಕರಣಗಳ ಬಳಕೆ ಅನಿವಾರ್ಯವಾಯಿತು. ಅಲ್ಲದೇ ವಿದ್ಯುತ್ ಬಳಕೆಯ ಅಗತ್ಯದ ಸಂದರ್ಭದಲ್ಲಿ ಮದ್ರಾಸ್ ಸರ್ಕಾರವು, ಮೈಸೂರು ಸರ್ಕಾರಕ್ಕೆ ಬೇಡಿಕೆ ಮುಂದಿಟ್ಟಿತು.

ಮದ್ರಾಸ್ ಸರ್ಕಾರ ಒಟ್ಟು ೩೫೦೦ ಹೆಚ್.ಪಿ.ವಿದ್ಯುತ್ತಿಗೆ ಬೇಡಿಕೆ ಸಲ್ಲಿಸಿತು. ಶಿವನ ಸಮುದ್ರದಿಂದ ಮೆಟ್ಟೂರಿಗೆ ೬೨ ಮೈಲಿ ಪ್ರಸರಣ ಮಾರ್ಗ ನಿರ್ಮಾಣಕ್ಕೆ ೧೦,೬೯,೦೦೦ ರೂಪಾಯಿಗಳ

ಅಂದಾಜು ಮೊತ್ತ ನಿಗದಿಮಾಡಿ, ಮದ್ರಾಸ್ ಸರ್ಕಾರದೊಂದಿಗೆ ಐದು ವರ್ಷಗಳ ಕಾಲ ವಿದ್ಯುತ್ ಪೂರೈಸಲು ೨೦೪೦ ಕಿ.ವಾ. ವಿದ್ಯುತ್ತನ್ನು ೦.೭೫ ಪವರ್ ಫ್ಯಾಕ್ಟರ್‌ನಲ್ಲಿ ೫೦ ಸೈಕಲ್ಸ್‌ನಲ್ಲಿ ಒದಗಿಸಲು ೩೩೦೦ ವೋಲ್ಟ್ ಫ್ರೀಕ್ವೆನ್ಸಿ ಕನ್ವರ್ಟರ್‌ಗಳನ್ನು ಸ್ಥಾಪಿಸಲಾಯಿತು.[೪೮] ವಿದ್ಯುತ್ ಸರಬರಾಜು ಒಪ್ಪಂದದ ಷರತ್ತುಗಳು ಹೀಗಿದ್ದವು.

೧. ಸಾಮಾನ್ಯ ಶೃಂಗ ಬೇಡಿಕೆ ೦.೮.ಪಿ.ಎಫ್ ನಲ್ಲಿ ೩೫೦೦ ಕಿ.ವಾ ಮೀರುವಂತಿಲ್ಲ.

೨. ಸರಬರಾಜು ಕಾಮಗಾರಿಗಳು ಮುಗಿದು ೧೪-೧೧-೧೯೨೮ರಿಂದ ವಿದ್ಯುತ್ ಪೂರೈಕೆ ಪ್ರಾರಂಭವಾಗಬೇಕು.

೩. ವಿದ್ಯುತ್ತಿನ ಬೆಲೆ : ಹಗಲು ೩,೭೪,೯೯ ಯುನಿಟ್ ತನಕ ಪ್ರತಿ ಯೂನಿಟಿಗೆ ೦.೭೫ ಆಣೆ, ನಂತರ ವಿದ್ಯುತ್ ಬಳಕೆಯ ಪ್ರಮಾಣ ಹೆಚ್ಚಿದಂತೆ ಬೆಲೆ ಕಡಿಮೆಯಾಗುತ್ತಾ ೫,೫೦,೦೦೦ ಯೂನಿಟ್‌ಗಿಂತ ಹೆಚ್ಚು ಬಳಸಿದರೆ, ಪ್ರತಿ ಯೂನಿಟ್‌ಗೆ ೦.೫೩೦ ಅಣೆಯೆಂದು ನಿರ್ಧರಿಸಲಾಯಿತು. ರಾತ್ರಿ ಬಳಸುವ ವಿದ್ಯುತ್ತಿನ ಪ್ರತಿಯೂನಿಟ್ಟಿಗೆ ಸರಾಸರಿ ೦.೪೦ ಅಣೆ.

ಫೋರ್ಬ್ಸ್ ನಿರ್ದೇಶನದಲ್ಲಿ ಕಾಮಗಾರಿ ನಡೆಯಿತು. ಒಟ್ಟು ೫ ವರ್ಷದ ಈ ಯೋಜನೆಯ ಗಳಿಕೆ ೮,೧೯,೦೯೬ ರೂಪಾಯಿಗಳು ಆ ಸಂದರ್ಭದ ನಿರ್ವಹಣಾ ವೆಚ್ಚ ೧,೧೨,೩೧೦ ರೂಪಾಯಿಗಳು ನಿವ್ವಳ ಲಾಭ ೭,೦೬,೭೮೦ ರೂಪಾಯಿಗಳು.[೪೯] ೧೯೩೪ ಮಾರ್ಚ್ ತಿಂಗಳ ೧೮ನೇ ತಾರೀಖು ಮೆಟ್ಟೂರು ಜಲಾಶಯ ಕಾಮಗಾರಿ ಪೂರ್ಣಗೊಂಡು ವಿದ್ಯುತ್ ಸರಬರಾಜನ್ನು ನಿಲ್ಲಿಸಲಾಯಿತು. ನಂತರ ಉಳಿತಾಯದ ವಿದ್ಯುತ್ತನ್ನು ಮೈಸೂರು ಮಾರ್ಗಕ್ಕೆ ಸರಬರಾಜು ಮಾಡಲಾಯಿತು.

೩.೮. ಎಂಟನೆಯ ಹಂತದ ವಿಸ್ತರಣೆ

೧೯೩೩ರಲ್ಲಿ ಮೂರನೆ ವಿಸ್ತರಣೆಯ ಒಂದು ೧೫೦೦ ಕಿ.ವ್ಯಾ. ವಿದ್ಯುತ್ ಘಟಕವು ತನ್ನ ಕಾರ್ಯ ಕ್ಷಮತೆಯನ್ನು ಕಳೆದುಕೊಂಡು, ಸಂಪೂರ್ಣ ವಿಫಲವಾಗುವ ಹಂತ ತಲುಪಿತ್ತು. ಇದರ ಜಾಗದಲ್ಲಿ ೬೦೦೦ ಕಿ.ವ್ಯಾ. ವಿದ್ಯುತ್ ಜನಕವನ್ನು ಅದಕ್ಕೆ ೯೦೦೦ ಬಿ.ಹೆಚ್.ಪಿಯ ಫ್ರಾನ್ಸಿಸ್ ಟರ್ಬೈನ್‌ಗಳನ್ನು ಅಳವಡಿಸುವ ಪ್ರಸ್ತಾಪ ಸಲ್ಲಿಸಿ ಮಂಜೂರಾತಿ ಪಡೆಯಲಾಯಿತು. ಈ ವಿಸ್ತರಣೆಯಲ್ಲಿ ಮುಖ್ಯವಾಗಿ ಭದ್ರಾವತಿಗೆ ೧೩,೨೯,೨೦೦ ರೂಪಾಯಿಗಳ ವೆಚ್ಚದಲ್ಲಿ ಪ್ರಸರಣ ಮತ್ತು ವಿತರಣಾ ಮಾರ್ಗವನ್ನು ಅಳವಡಿಸಲಾಯಿತು.[೫೧]

ಬೆಂಗಳೂರಿನ ಕೆ-೧ ಮತ್ತು ಕೆ-೨ ಮಾರ್ಗಗಳ ಪುನರ್‌ನವೀಕರಣ ವಾಣಿವಿಲಾಸ ಆಸ್ಪತ್ರೆ, ಶೇಷಾದ್ರಿ ಮೆಮೋರಿಯಲ್ ಹಾಲ್, ಟೌನ್‌ಹಾಲ್‌ಗಳಿಗೆ ವಿದ್ಯುತ್ತನ್ನು ಪೂರೈಸಲಾಯಿತು.

ಶಿವನಸಮುದ್ರದಲ್ಲಿ ಪ್ರಮುಖ ಟರ್ಬೈನ್‌ಗಳ ಪುನರ್ ನವೀಕರಣ ಮತ್ತು ವಿತರಣೆ ಮಾರ್ಗಗಳ ಬದಲಾವಣೆ ಮಾಡಲಾಯಿತು. ಬೆಂಗಳೂರಿಗೆ ನೀರು ಸರಬರಾಜು ಮಾಡುವ ಶ್ರೀ ಚಾಮರಾಜೇಂದ್ರ

ವಾಟರ್ ವರ್ಕ್ಸ್, ತಿಪ್ಪಗೊಂಡನಹಳ್ಳಿಗೆ ೭.೨೫.೦೦೦ ರೂ.ಗಳ ವೆಚ್ಚದಲ್ಲಿ ವಿದ್ಯುತ್ತನ್ನು ಪೂರೈಸಲಾಯಿತು.[೫೧] ಮಂಡ್ಯದ ಸಕ್ಕರೆ ಕಾರ್ಖಾನೆ, ಮೇಲುಕೋಟೆಗೆ ವಿದ್ಯುತ್ ಸಂಪರ್ಕ ನೀಡಲಾಯಿತು. ಭದ್ರಾವತಿ ವಿಭಾಗಕ್ಕೆ ಸಂಬಂಧಿಸಿದಂತೆ ಪೇಪರ್ ಮಿಲ್ಲಿಗೆ, ಹಳೆ ಭದ್ರಾವತಿ ನಗರಕ್ಕೆ ವಿದ್ಯುತ್ ವಿತರಿಸಲಾಯಿತು.

೪೬೦೦ ವೋಲ್ಟ್ ಸಾಮರ್ಥ್ಯದ ೨೫ ಸೈಕಲ್ ಫ್ರಿಕ್ವೆನ್ಸಿಯ ೨ ಫೇಸ್‌ಗಳಲ್ಲಿ ಚಿಕ್ಕಮಗಳೂರು ಮತ್ತು ಕುಸುವಲಕ್ಕಿ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಯಿತು. ಈ ವಿಸ್ತರಣೆಯಿಂದ ವಿದ್ಯುತ್ ಪಡೆದ ಪ್ರಮುಖ ನಗರಗಳು ಯಾವುದೆಂದರೆ ತುಮಕೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ದೇವನಹಳ್ಳಿ, ಮಂಚೇನಹಳ್ಳಿ, ಗೌರಿಬಿದನೂರು, ನೆಲಮಂಗಲ, ಗುಬ್ಬಿ, ವಡಿಗೇನಹಳ್ಳಿ, ಮಾಗಡಿ, ತರೀಕೆರೆ, ಹಾಸನ, ಮಾಲೂರು ಮುಂತಾದವು. ೧೯೩೬-೩೭ರಲ್ಲಿ ಶಿವನಸಮುದ್ರದಲ್ಲಿ ೨೨೫,೧೮೦,೭೨೦ ಕಿ.ವಾ. ವಿದ್ಯುತ್ತನ್ನು ಇದರ ಹಿಂದಿನ ವರ್ಷದಲ್ಲಿ ೨೦೮,೩೩೨,೪೪೦ ಕಿ.ವಾ.ಘಂಟೆಗೆ ಉತ್ಪಾದಿಸಲಾಯಿತು.[೫೨] ಅಲ್ಲದೇ ೩.೭೪೭ ವಿದ್ಯುತ್ ಸಂಪರ್ಕ, ೩೧,೭೭೭ ದೀಪಗಳ ಸಂಪರ್ಕವನ್ನು ಮೈಸೂರು ರಾಜ್ಯದಲ್ಲಿ ನೀಡಲಾಗಿತ್ತು.

೩.೯. ಒಂಬತ್ತನೆಯ ಹಂತದ ವಿಸ್ತರಣೆ

ಕೃಷ್ಣರಾಜ ಸಾಗರ ಜಲಾಶಯದಿಂದ ೧೯೨೪ರ ನಂತರ ೯೦೦ಕ್ಯೂಸೆಕ್ಸ್ ನೀರು ಮಾತ್ರ ನಿರಂತರವಾಗಿ ದೊರೆಯಲು ಸಾಧ್ಯವಾಯಿತು. ೯೦೦ ಕ್ಯೂಸೆಕ್ಸ್ ನೀರನ್ನು ರಾತ್ರಿ ವೇಳೆಯಲ್ಲಿ ಸಂಗ್ರಹಿಸಿ, ಅಧಿಕ ಬೇಡಿಕೆಯ ಸಂದರ್ಭದಲ್ಲಿ ಬಳಸುವುದರಿಂದ ಬೇಡಿಕೆಯನ್ನು ತಕ್ಕ ಮಟ್ಟಿಗೆ ಸುಧಾರಿಸಬಹುದಾಗಿತ್ತು. ಹೀಗೆ ಮಾಡುವುದಾದರೆ ಫೋರ್‌ಬೇ ಸಮೀಪ ನೀರನ್ನು ಸಂಗ್ರಹಿಸುವ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಧನಗೆರೆ ಅಥವಾ ಮಾದವ ಮಂತ್ರಿ ಅಣೆಕಟ್ಟೆಯಲ್ಲಿ ನೀರು ಸಂಗ್ರಹಿಸಿದರೆ ಇಲ್ಲಿಂದ ಫೋರ್‌ಬೇಗೆ ನೀರು ಬರಲು ೬ ಗಂಟೆ ತಡವಾಗುತ್ತಿತ್ತು. ಈ ಪರಿಸ್ಥಿತಿಯಲ್ಲಿ ನೀರನ್ನು ನಿಗಧಿತ ಸಮಯದಲ್ಲಿ ನಿಗಧಿತ ಪ್ರಮಾಣದಲ್ಲಿ ಉಪಯೋಗಿಸಿ ಉಳಿದ ಸಂದರ್ಭದಲ್ಲಿ ಸಂಗ್ರಹಿಸಲು ಬ್ಯಾಲೆನ್ಸಿಂಗ್ ರಿಸರ್ವಾಯರ್ ಅಥವಾ ಸಂತುಲನ ಜಲಾಶಯವೊಂದನ್ನು ನಿರ್ಮಿಸುವುದು ಅವಶ್ಯಕವಾಗಿತ್ತು.[೫೩] ಇಂತಹ ಜಲಾಶಯ ನಿರ್ಮಾಣದಿಂದ ಸುಮಾರು ೪೦ ಹೆಚ್ಚಿನ ವಿದ್ಯುತ್ ಉತ್ಪಾದಿಸಬಹುದಾಗಿತ್ತು.

ಹಿಂದೆ ನಾಲ್ಕನೇ ವಿಸ್ತರಣೆಯ ಸಂದರ್ಭದಲ್ಲಿ ಅಳವಡಿಸಿದ್ದ ಪೆಲ್ಟನ್‌ವೀಲ್ ಟರ್ಬೈನ್‌ಗಳು ಕಾರ್ಯಕ್ಷಮತೆಯನ್ನು ಕಳೆದು ಕೊಂಡಿದ್ದವು. ಅದರ ಬದಲಿಗೆ ರಿಯಾಕ್ಷನ್ ಟರ್ಬೈನ್‌ಗಳನ್ನು ಬಳಸಿದರೆ ಹೆಚ್ಚಿನ ವಿದ್ಯುತ್ ಉತ್ಪಾದನೆ ಸಾಧ್ಯವಿತ್ತು. ಹೀಗಾಗಿ ೧೩೫ ಲಕ್ಷ ರೂಪಾಯಿಗಳ ಒಂಬತ್ತನೇ ವಿಸ್ತರಣೆಗೆ ದಿನಾಂಕ ೧೪-೮-೧೯೩೭ರಲ್ಲಿ ಸರ್ಕಾರ ಒಪ್ಪಿಗೆ ಸೂಚಿಸಿತು.[೫೪]

ಒಂಬತ್ತನೇ ಹಂತದ ವಿಸ್ತರಣೆಯಲ್ಲಿ ಕೈಗೊಂಡ ಕಾಮಗಾರಿಗಳು

ಅ. ಮೊದಲಿಗೆ ೨.೩೮.೦೦೦ ರೂಪಾಯಿ ವೆಚ್ಚದಲ್ಲಿ ಸಂತುಲನ ಜಲಾಶಯ ನಿರ್ಮಾಣ, ಜೊತೆಗೆ ಧನಗೆರೆ ಮತ್ತು ಮಾಧವಮಂತ್ರಿ ಅಣೆಕಟ್ಟೆಗೆ ಸ್ವಯಂಚಾಲಿತ ಗೇಟ್‌ಗಳನ್ನು ಅಳವಡಿಸುವುದು.

ಆ. ನಾಲ್ಕನೇ ವಿಸ್ತರಣೆಯಲ್ಲಿ ಎರಡು ಪೆಲ್ಟನ್ ವ್ಹೀಲ್‌ಗಳಿಂದ ಚಲಿಸುತ್ತಿದ್ದ ವಿದ್ಯುತ್ ಘಟಕಗಳನ್ನು ಬದಲಾಯಿಸಿ ೯೦೦೦ ಹೆಚ್.ಪಿ.ರಿಯಾಕ್ಷನ್ ಟರ್ಬೈನ್‌ನಿಂದ ಚಲಿಸುವ ೬೦೦೦ ಕಿ.ವಾ ಸಾಮರ್ಥ್ಯದ ಜನರೇಟರ್ ಸ್ಥಾಪಿಸುವುದು.

ಇ. ೩೩೩೩ ಕೆ.ವಿ.ಎ.ಯ ಮೂರು ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ನ್ನು ಹಳೆಯ ೧೨೫೦ ಕೆ.ವಿ.ಯ ಟ್ರಾನ್ಸ್‌ಫಾರ್ಮರ್ ಬ್ಯಾಂಕಿನ ಸ್ಥಳದಲ್ಲಿ ಸ್ಥಾಪಿಸುವುದು.

ಬೆಂಗಳೂರಿನಲ್ಲಿರುವ ಸರ್ಕಾರಿ ವಿದ್ಯುತ್ ಕಾರ್ಖಾನೆಗೆ ೬೦ ಸೈಕಲ್ ವಿದ್ಯುತ್‌ಪೂರೈಕೆ, ನಂದಿಬೆಟ್ಟ, ಕಬ್ಬನ್ ಪಾರ್ಕ್‌ಗಳಿಗೆ ದೀಪದ ವ್ಯವಸ್ಥೆ, ಹರಿಹರ ಮತ್ತು ಹಳೇ ಭದ್ರಾವತಿ ಟೌನ್‌ಗೆ ಬೀದಿ ದೀಪದ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಮೈಸೂರಿನ ರೈಲ್ವೆ ಕಛೇರಿ, ದಾವಣಗೆರೆ, ಶಿವಮೊಗ್ಗ, ರೈಲ್ವೆ ಸ್ಟೇಷನ್ ಗಳಿಗೆ, ಬೇಲೂರು ಮತ್ತು ಶಿವನಸಮುದ್ರದ ರಂಗನಾಥ ಸ್ವಾಮಿ ದೇವಾಲಯಕ್ಕೆ ವಿದ್ಯುತ್ ಪೂರೈಕೆ. ೧೯೩೮ರ ಸಂದರ್ಭದಲ್ಲಿ ಪ್ರಮುಖ ಪಟ್ಟಣ ಮತ್ತು ಹಳ್ಳಿಗಳು ವಿದ್ಯುತ್ ಸರಬರಾಜು ಪಡೆದವು. ಅವುಗಳೆಂದರೆ ದಾವಣಗೆರೆ, ಚಿತ್ರದುರ್ಗ, ಹುಣಸೂರು, ಟಿ.ನರಸೀಪುರ, ಹಾಸನ, ಶಿವಮೊಗ್ಗ, ತರೀಕೆರೆ, ಕುಣಿಗಲ್, ಬೇಲೂರು, ಶಿಡ್ಲಘಟ್ಟ ಹೊಳೆನರಸೀಪುರ ಮುಂತಾದವು ಒಟ್ಟು ೧೮೫ ಪಟ್ಟಣ ಮತ್ತು ಹಳ್ಳಿಗಳು ಈ ವರ್ಷದ ಅಂತ್ಯದಲ್ಲಿ ವಿದ್ಯುತ್ ಸೌಲಭ್ಯ ಪಡೆದವು.[೫೫]

೧೯೨೪ರ ಕಾವೇರಿ ಒಪ್ಪಂದ ಅನ್ವಯ ಕೃಷ್ಣರಾಜ ಸಾಗರ ಜಲಾಶಯದಿಂದ ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ೯೦೦ ಕ್ಯೂಸೆಕ್ಸ್ ದೊರೆತವು. ಆ ವೇಳೆಗಾಗಲೇ ಇಲ್ಲಿ ೬೦,೦೦೦ ಹೆಚ್ .ಪಿ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ವಿದ್ಯುದುತ್ಪಾದನೆಯ ಹೊಸ-ಹೊಸ ಸಾಧ್ಯತೆಗಳ ಕುರಿತು ಚಿಂತಿಸುವ ಅನಿವಾರ್ಯತೆ ಇತ್ತು. ೧೯೩೨ರಲ್ಲಿ ಒಂದು ಹೊಸ ಸಮಿತಿಯನ್ನು ಕೆ.ಆರ್.ಶೇಷಾಚಾರ್ ನಿವೃತ್ತ ಮುಖ್ಯ ಇಂಜಿನಿಯರ್ ನೇತೃತ್ವದಲ್ಲಿ ರಾಜ್ಯದ ಜಲವಿದ್ಯುತ್ ಅಭಿವೃದ್ಧಿಯ ಕುರಿತು ನಿರ್ದಿಷ್ಟ ಯೋಜನೆಗಳನ್ನು ರೂಪಿಸುವುದು ಸಮಿತಿಯ ಮುಖ್ಯ ಉದ್ದೇಶವಾಗಿತ್ತು. ಈ ಸಮಿತಿಯು ಜಲವಿದ್ಯುತ್ ಉತ್ಪಾದನೆಯ ಬೇರೆ-ಬೇರೆ ಸಾಧ್ಯತೆಗಳ ಕುರಿತು ಚರ್ಚೆ ನಡೆಸಿತು. ಅದರಂತೆ ೧೯೪೧ರ ಹೊತ್ತಿಗೆ ೩೦,೦೦೦ ಹೆಚ್.ಪಿ ಮತ್ತು ೧೯೪೬ರ ಹೊತ್ತಿಗೆ ೪೦,೦೦೦ ಹೆಚ್ .ಪಿ. ವಿದ್ಯುತ್ ಕೊರತೆ ಉಂಟಾಗಬಹುದೆಂದು ಕೆಲವು ಯೋಜನೆಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿದವು. ಅವುಗಳೆಂದರೆ

ಅ. ೫೯.೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಶಿವನಸಮುದ್ರ ಸಂತುಲನ ಜಲಾಶಯಕ್ಕೆ ಬರುತ್ತಿದ್ದ ೯೦೦ ಕ್ಯೂಸೆಕ್ಸ್ ನೀರನ್ನು ಶಿಂಷಾದತ್ತ ತಿರುವಿ, ಅಲ್ಲಿ ೨೩,೦೦೦ ಹೆಚ್.ಪಿ ವಿದ್ಯುತ್ ಉತ್ಪಾದಿಸುವುದು. ತಾತ್ಕಾಲಿಕವಾಗಿ ૩೦೦ ಕ್ಯೂಸೆಕ್ಸ್ ನೀರು ಬಳಸಿ ಎರಡು ಘಟಕಗಳನ್ನು ಸ್ಥಾಪಿಸುವುದು.

ಆ. ಜೋಗದಲ್ಲಿ ೬೪,೦೦೦ ಹೆಚ್.ಪಿ. ವಿದ್ಯುತ್ ಉತ್ಪಾದನೆಯ ಮೊದಲ ಹಂತದ ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಿದವು. ತಜ್ಞರ ಸಮಿತಿಯ ಈ ಎರಡು ಸಲಹೆಗಳನ್ನು ಒಪ್ಪಿ ೧೯೩೭ರಲ್ಲಿ ಕಾರ್ಯಾನುಷ್ಠಾನಕ್ಕೆ ಸರ್ಕಾರ ಮಂಜೂರಾತಿ ನೀಡಿತು.

೧೯೨೮ರಲ್ಲಿ ಒಂಬತ್ತನೇ ವಿಸ್ತರಣೆಯ ಕಾರ್ಯಗಳು ಬಹುತೇಕ ಮುಗಿದವು. ಆ ಸಂದರ್ಭದಲ್ಲಿ ಶಿವನಸಮುದ್ರ ಜಲವಿದ್ಯುದಾಗರವು ಈ ಘಟಕಗಳನ್ನು ಹೊಂದಿತ್ತು.

ರ೦೦೦ ಕಿ.ವ್ಯಾ.ನ ೧ ಘಟಕ = ೪೦೦೦ ಹೆಚ್.ಪಿ/೩೦೦೦ ಕಿ.ವಾ

೩೦೦೦ ಕಿ.ವ್ಯಾ.ನ ೬ ಘಟಕ = ೨೪೦೦೦ ಹೆಚ್.ಪಿ/೧೮೦೦೦ ಕಿ.ವಾ

೬೦೦೦ ಕಿ.ವ್ಯಾ.ನ ೪ ಘಟಕ = ೩೨೦೦೦ ಹೆಚ್.ಪಿ/೨೪೦೦೦ ಕಿ.ವಾ

ಒಟ್ಟು = ೬೦,೦೦೦ ಹೆಚ್.ಪಿ/೪೫.೦೦೦ ಕಿ.ವಾ

ಆಧಾರ : ಗಜಾನನ ಶರ್ಮ, ಬೆಳಕಾಯಿತು ಕರ್ನಾಟಕ, ಸಾಗರ, ೨೦೦೨, ಪು.೬೦)

ಇದರಲ್ಲಿ ಒಂದು ೨೦೦೦ ಕಿ.ವಾ. ಘಟಕವು ೧೯೪೪ರ ಬೆಂಕಿ ಆಕಸ್ಮಿಕ ಘಟನೆಯ ನಂತರ ಸ್ಥಗಿತಗೊಂಡ ಪರಿಣಾಮ ವಿದ್ಯುದಾಗರದ ಒಟ್ಟು ಸಾಮರ್ಥ್ಯ ೪೨,೦೦೦ ಕಿ.ವಾ.ಆಯಿತು.

ಅಡಿ ಟಿಪ್ಪಣಿಗಳು

೧. ಗೋಪಾಲಕೃಷ್ಣಯ್ಯ ಎಂ., **ಹಿಸ್ಟರಿ ಆಫ್ ದಿ ಕಾವೇರಿ ಪವರ್ ಸ್ಕೀಂ**, ೧೯೩೨, ಪು.೯

೨. ಅದೇ, ಪು.೭೫

೩. ಗಜಾನನ ಶರ್ಮ, **ಬೆಳಕಾಯಿತು ಕರ್ನಾಟಕ**, ೨೦೦೩, ಪು.೪೧

೪. ಗೋಪಾಲಕೃಷ್ಣಯ್ಯ ಎಂ., **ಪೂರ್ವೋಕ್ತ**, ಪು.೧೦೧

೫. ಅದೇ

೬. ಅದೇ, ಪು.೯೮

೭. ಪ್ರೊಸಿಡಿಂಗ್ಸ್, ಗೌರ್ನಮೆಂಟ್ ಆಫ್ ಇಸ್ ಐನೆಸ್ ದಿ ಮಹಾರಾಜ ಆಫ್ ಮೈಸೂರು, ನಂ.೧೨೧೭-೨೧/೬೧೩೩-೩೭, ದಿನಾಂಕ ೧೦ ನವೆಂಬರ್ ೧೯೦೩, ಪು.೧

೮. ಗೋಪಾಲಕೃಷ್ಣಯ್ಯ ಎಂ, ಪೂರ್ವೋಕ್ತ, ಪು.೧೦೨

೯. ಬರಗೂರು ರಾಮಚಂದ್ರಪ್ಪ(ಪ್ರ.ಸಂ), ಕರ್ನಾಟಕ ಸಂಗಾತಿ, ೨೦೦೨, ಪು.೭೩೨

೧೦. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೧೦೭

೧೧. ಗಜಾನನ ಶರ್ಮ, ಪೂರ್ವೋಕ್ತ, ಪು.೪೬

೧೨. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೧೦೭

೧೩. ಗಜಾನನ ಶರ್ಮ, ಪೂರ್ವೋಕ್ತ, ಪು.೪೭

೧೪. ಅದೇ, ಪು.೪೮

೧೫. ಗಜಾನನ ಶರ್ಮ, ಪೂರ್ವೋಕ್ತ, ಪು.೪೮

೧೬. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ ಪು.೧೦೮

೧೭. ಗೌರ್ನಮೆಂಟ್ ಆಫ್ ಮೈಸೂರ್, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಫಾರ್ ದಿ ಇಯರ್ ೧೯೧೪-೧೫, ಪು.೯

೧೮. ಬರಗೂರು ರಾಮಚಂದ್ರಪ್ಪ(ಪ್ರ.ಸಂ), ಪೂರ್ವೋಕ್ತ, ಪು.೭೩೩

೧೯. ಪ್ರೋಸೀಡಿಂಗ್ಸ್, ಗೌರ್ನಮೆಂಟ್ ಆಫ್ ಮೈಸೂರು, ಪಬ್ಲಿಕ್ ವರ್ಕ್ಸ್, ಇಯರ್, ೧೯೧೪-೧೯೧೫, ಪು.೪

೨೦. ಪ್ರೋಸಿಡಿಂಗ್ಸ್, ೧೯೧೪-೧೯೧೫, ಅದೇ

೨೧. ಗೌರ್ನಮೆಂಟ್ ಆಫ್ ಮೈಸೂರ್, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಫಾರ್ ದಿ ಇಯರ್ ೧೯೧೫-೧೬ ಪು.೪

೨೨. ಗೋಪಾಲಕೃಷ್ಣಯ್ಯ ಎಂ. ಪೂರ್ವೋಕ್ತ, ಪು.೧೦೮

೨೩. ಜಿ.ಓ.ಎಮ್, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಅಡ್ಮಿನಿಸ್ಟ್ರೇನಿವ್ ರಿಪೋರ್ಟ್ ೧೯೧೪-೧೫, ಪು.೪

೨೪. ಅದೇ, ಪು.೬

೨೫. ಜಿ.ಓ.ಎಮ್, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ೧೯೧೫-೧೬, ಪು.೫

೨೬. ಅದೇ, ಪು.೩

೨೭. ಗಜಾನನ ಶರ್ಮ, ಪೂರ್ವೋಕ್ತ, ಪು.೫೫

೨೮. ಜಿ.ಓ.ಎಮ್., ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್, ೧೯೧೫-೧೬, ಪು.೨

೨೯. ಅದೇ, ಪು.೬

೩೦. ಅದೇ, ಪು.೫

೩೧. ಗಜಾನನ ಶರ್ಮ, ಪೂರ್ವೋಕ್ತ, ಪು.೫೬

೩೨. ಅದೇ, ಪು.೫೬

೩೩. ಅದೇ, ಪು.೫೮

೩೪. ಅದೇ, ಪು.೫೯

೩೫. ಗೌರ್ನಮೆಂಟ್ ಆಫ್ ಮೈಸೂರು, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಫ್ ದಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ೧೯೨೨-೨೩, ಪು.೫

೩೬. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೧೩೫

೩೭. ಅದೇ, ಪು.೧೩೬

೩೮. ಗೌರ್ನಮೆಂಟ್ ಆಫ್ ಮೈಸೂರು, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಫ್ ದಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ೧೯೨೩-೨೪, ಪು.೯

೩೯. ಗಜಾನನ ಶರ್ಮ, ಪೂರ್ವೋಕ್ತ, ಪು.೬೧

೪೦. ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್, ೧೯೨೩-೨೪, ಪು.೧೦

೪೧. ಅದೇ, ಪು.೭

೪೨. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೧೩೪

೪೩. ಗೌರ್ನಮೆಂಟ್ ಆಫ್ ಮೈಸೂರು, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಫ್ ದಿ ಎಲೆಕ್ಟ್ರಿಕಲ್ ಡಿಪಾರ್ಡ್‌ಮೆಂಟ್, ೧೯೨೬-೨೭, ಪು.೨

೪೪. ಅದೇ

೪೫. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ ಪು.೧೩೫

೪೬. ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಅಡ್ನಿನಿಸ್ಟ್ರೇಟಿವ್ ರಿಪೋರ್ಟ್, ೧೯೨೬-೨೭, ಪು.೩

೪೭. ಗಜಾನನ ಶರ್ಮ, ಪೂರ್ವೋಕ್ತ, ಪು.೬೪

೪೮. ಅದೇ, ಪು.೬೫

೪೯. ಅದೇ, ಪು.೬೬

೫೦. ಗೌರ್ನಮೆಂಟ್ ಆಫ್ ಮೈಸೂರು, ಆಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಫ್ ದಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ೧೯೩೪-೩೫, ಪು.೪

೫೧. ಅದೇ, ಪು.೯

೫೨. ಗೌರ್ನಮೆಂಟ್ ಆಫ್ ಮೈಸೂರ್, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಪ್ ದಿ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್, ೧೯೩೬-೩೭, ಪು-೫

೫೩. ಗಜಾನನ ಶರ್ಮ, ಪೂರ್ವೋಕ್ತ, ಪು.೬೯

೫೪. ಗೌರ್ನಮೆಂಟ್ ಆಫ್ ಮೈಸೂರು, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಫ್ ದಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ೧೯೩೮-೪೯, ಪು.೫

೫೫. ಅದೇ, ಪು.೬

ಅಧ್ಯಾಯ ೪

ಆಧುನಿಕತೆ

೪.೧. ಮೈಸೂರಿನ ಅರಸರ ಮೇಲೆ ಆಧುನಿಕತೆಯ ಪ್ರಭಾವ

೪.೨. ಮೈಸೂರು ಅರಸರು ಹಾಗೂ ಯೋಜನೆ

೪.೩. ಯೋಜನೆಯ ಅನುಷ್ಠಾನ

೪.೪. ಟ್ರಾನ್ಸ್‌ಫಾರ್ಮರ್ ಸ್ಥಾವರ

೪.೫. ಯಂತ್ರೋಪಕರಣಗಳ ಸಾಗಣಿ ವ್ಯವಸ್ಥೆ

೪.೬. ವಿದ್ಯುದಾಗರದ ಕಾಮಗಾರಿ

೪.೭. ವಿದ್ಯುದಾಗರ ಉದ್ಘಾಟನೆ/ಯೋಜನೆಯ ಕಾರ್ಯಾರಂಭ

೪

ಆಧುನಿಕತೆ

ಆಧುನಿಕ ಅಥವಾ ಮಾಡರ್ನ್ ಎಂಬ ವಿಚಾರವು ಯುರೋಪಿನ ಪುನರುಜ್ಜೀವನ ಕಾಲದಲ್ಲಿ ಉಗಮಗೊಂಡು, ಜ್ಞಾನ ಪುನರುಜ್ಜೀವನ ಕಾಲದಲ್ಲಿ ಪ್ರಸಿದ್ಧಿಗೆ ಬಂದಿತು.

ಪೌಸಿನ್ ಎಂಬುವವನು "ಮಾಡರ್ನ್" ಎಂಬ ಶಬ್ದದ ಶೋಧಕ, ಪೌಸಿನ್ ೧೬೭೯ರಲ್ಲಿ ತನ್ನ ಥಿಯೋಡಿಯಂ ಎಂಬ ಕೃತಿಯಲ್ಲಿ ಮೊದಲ ಬಾರಿಗೆ "ಏನ್ಸಿಯಂಟ್" "ಮೆಡೀವಲ್" ಮತ್ತು "ಮಾಡರ್ನ್" ಎಂಬ ಶಬ್ದಗಳನ್ನು ಬಳಸಿದರು. ನಂತರ ಹ್ಯಾಲೆ ವಿಶ್ವವಿದ್ಯಾನಿಲಯದ ಕ್ರೀಸ್ಟೋಫರ್ ಸೆಲ್ಲಾರಿಯಸ್ (೧೬೩೪-೧೭೦೧) ಎಂಬುವವನು ಇದನ್ನು ಪ್ರಚಾರಪಡಿಸಿದನು.[೧]

ಆನಂತರದಲ್ಲಿ ಮಾನವತಾವಾದಿ ಬರಹಗಾರರಾದ ಪೆಟ್ರಾರ್ಕ್, ಪೊವಿಯಾ, ಬಿಯಾಂಡೋ ಮುಂತಾದವರಿಂದ ಅದು ಪ್ರಸಿದ್ಧಿಗೆ ಬಂದಿತು. ಆಧುನಿಕ ಎಂಬ ಪದ ಲೌಕಿಕ ವ್ಯವಹಾರಕ್ಕೆ ಸಂಬಂಧಿಸಿದಾಗಿದ್ದು, ಅನೇಕ ಅರ್ಥಗಳನ್ನು ಹೊರಡಿಸುತ್ತದೆ.

"ಇತ್ತೀಚಿನದು", "ನವಕಾಲೀನ", 'ನವೀನ', 'ಪ್ರಚಲಿತ' ಎಂಬ ಸಾಮಾನ್ಯ ಅರ್ಥಗಳನ್ನು ನೀಡುತ್ತದೆ. ೧೮ನೇ ಶತಮಾನದ ಅಂತ್ಯದಲ್ಲಿ ಅಂದರೆ ಟಿಪ್ಪುವಿನ ಕಾಲದಲ್ಲಿ ಮೈಸೂರು ಪ್ರದೇಶದಲ್ಲಿ ಆಧುನಿಕತೆ ಅಂಶಗಳು ತಿಳಿಯಾಗಿ ಕಾಣಿಸಿಕೊಂಡವು.

ಆಧುನಿಕತೆ ೧೯ನೇ ಶತಮಾನದಲ್ಲಿ ತೀವ್ರತೆ ನಿಧಾನಗತಿಯಲ್ಲಿ ಸಾಗಿ ೨೦ನೆ ಶತಮಾನದ ಆರಂಭ ಒಂದು ಸ್ಥಾನೀಯ ಸ್ವರೂಪವನ್ನು ಪಡೆದವೆಂದು ಹೇಳಬಹುದು. ಈ ಕಾಲಮಾನದಲ್ಲಿ ಮೈಸೂರು ಪ್ರದೇಶದಲ್ಲಿ ನಡೆದ ಸಾಮಾಜಿಕ ಸಂಘಟನೆಯ ಫಲವಾಗಿ ಆಧುನಿಕತೆಯ ಅಂಶಗಳು ಇಡೀ ಮೈಸೂರು ರಾಜ್ಯದಲ್ಲಿ ಕಾಣಬಹುದು. ಪರಿಣಾಮವಾಗಿ ನಗರೀಕರಣ, ಕೈಗಾರಿಕೋದ್ಯಮ ಹೆಚ್ಚಾಯಿತು. ಜೊತೆಗೆ ಆಧುನಿಕ ಸಂಪರ್ಕಗಳು ಸಾಮಾನ್ಯ ಜನ ಜೀವನದಲ್ಲಿ ಆಧುನಿಕತೆಯನ್ನು ತುಂಬುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವು.[೨] ಇಲ್ಲಿ ಆಧುನಿಕತೆಯ ಆರಂಭ ಎಂದರೆ ಬಹುತೇಕ ಪಾಶ್ಚಾತೀಕರಣ, ಆಧುನೀಕತೆ ಎಂದರೆ ವಿಜ್ಞಾನ, ತಂತ್ರಜ್ಞಾನ, ಹೊಸ ಆವಿಷ್ಕಾರ ಎಂಬುದಾಗಿದೆ.

೪.೧. ಮೈಸೂರಿನ ಅರಸರ ಮೇಲೆ ಆಧುನಿಕತೆಯ ಪ್ರಭಾವ

ಮೈಸೂರಿನ ಅರಸರು ಆಧುನಿಕ ಭಾರತದ ಇತಿಹಾಸದಲ್ಲಿ ನವೋದಯ ಮತ್ತು ಪ್ರಗತಿಶೀಲ ಆಡಳಿತಗಾರರಾಗಿದ್ದು ಅವರ ದೃಷ್ಟಿಕೋನ ಮತ್ತು ನಡತೆಗಳು ಪಾಶ್ಚಿಮಾತ್ಯ ಸಂಸ್ಕೃತಿಗಳ ಪ್ರಭಾವದಿಂದ ರೂಪುಗೊಂಡಿದ್ದವು. ಅರಸರು ಪಾಶ್ಚಿಮಾತ್ಯ ಪ್ರಭಾವಗಳಿಂದ ಬಂದ ನವೀನ ಅಂಶಗಳನ್ನು ಎಲ್ಲ ರಂಗಗಳಲ್ಲೂ ಅಳವಡಿಸಿಕೊಳ್ಳುವಂತೆ ಮಾಡುವ ಬದಲಾವಣೆಗೆ ಪ್ರೇರಕ ಶಕ್ತಿಯಾದರು. ನಾಲ್ವಡಿ ಕೃಷ್ಣರಾಜ ಒಡೆಯರು ಆಧುನಿಕ ಶಿಕ್ಷಣ ಜ್ಞಾನವನ್ನು ಪಡೆದವರಾಗಿದ್ದು ತಾಂತ್ರಿಕ, ವೈಜ್ಞಾನಿಕ ಹಾಗೂ ಆರ್ಥಿಕ ಕ್ಷೇತ್ರಗಳ ಬಗ್ಗೆ ಅಪಾರ ಆಸಕ್ತಿಯನ್ನು ಹೊಂದಿದ್ದರು. ಈ ಅಂಶಗಳನ್ನು ಪ್ರಜೆಗಳಲ್ಲಿ ಪ್ರತಿಪಾದಿಸುತ್ತಾ ತಮ್ಮ-ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಅರಸರು, ಪಾಶ್ಚಿಮಾತ್ಯ ಮೂಲದ ಆಧುನಿಕ ವಿಚಾರ ಧಾರೆಗಳು, ಹೊಸ ಆವಿಷ್ಕಾರ ಮತ್ತು ಬೆಳವಣಿಗೆಗಳನ್ನು ತಮ್ಮ ಚಿಂತನೆಗಳಲ್ಲಿ ಭಾಷಣಗಳಲ್ಲಿ ಬೆಂಬಲಿಸಿದರು. ಹಾಗೂ ತಮ್ಮ ರಾಜ್ಯದಲ್ಲಿ ಅಳವಡಿಸಲು ಪ್ರಯತ್ನಿಸಿದರು.

ಅನೇಕ ವಿದೇಶ ಪ್ರವಾಸಗಳ ಅಧ್ಯಯನದಿಂದ ದೇಶಿಯ ಆರ್ಥಿಕ ವ್ಯವಸ್ಥೆ ಹಾಗೂ ಪಾಶ್ಚಿಮಾತ್ಯ ದೇಶಗಳ ಆರ್ಥಿಕ ವ್ಯವಸ್ಥೆಗಳ ಬಗ್ಗೆ ಹೋಲಿಕೆಯ ಅಂಕಿ ಅಂಶಗಳನ್ನು ನೀಡುತ್ತಾ ದೇಶೀಯ ಆರ್ಥಿಕ ವ್ಯವಸ್ಥೆಗಿಂತ ಪಾಶ್ಚಿಮಾತ್ಯ ಆರ್ಥಿಕ ವ್ಯವಸ್ಥೆಯು ಆಧುನಿಕವಾಗಿ ಬೆಳವಣಿಗೆಗೊಂಡ ವ್ಯವಸ್ಥೆಯೆಂದು ಹಾಗೂ ಅಂತಹ ವ್ಯವಸ್ಥೆಯನ್ನು ತಾವೂ ಮುಟ್ಟಬೇಕೆಂದು ತಮ್ಮ ಇಚ್ಛಾಶಕ್ತಿಯನ್ನು ಪ್ರಕಟಿಸುತ್ತಾರೆ. ಅದಕ್ಕೆ ಪೂರಕ ಯೋಜನೆಗಳು ಸೌಲಭ್ಯಗಳನ್ನು ರೂಪಿಸುತ್ತಾ ಆದರ್ಶ ಗುರಿಯನ್ನು ತಲುಪಲು ಯತ್ನಿಸಿದರು. ಪಾಶ್ಚಿಮಾತ್ಯ ಪ್ರಭಾವದಿಂದುಂಟಾದ ಪ್ರಗತಿಪರ ಸುಧಾರಣೆಗಳಿಗೆ ರಾಜ ತಾನೇ ಮಾದರಿಯಾಗಿ ನಾಯಕತ್ವವನ್ನು ವಹಿಸಿಕೊಂಡು ಸಮಾಜವನ್ನು ಮುನ್ನಡೆಸಲು ಮುಂದಾದರು. ಮೈಸೂರು ರಾಜ್ಯದ ಜನತೆಗೆ ಸೈಕಲ್, ಕಾರು, ವಿಮಾನ, ವಿದ್ಯುಚ್ಛಕ್ತಿ ಇವೇ ಮೊದಲಾದ ಹೊಸ ಆವಿಷ್ಕಾರಗಳ ಪರಿಚಯವಾದದ್ದು ಅರಸರ ಮುಂಜಾಗ್ರತೆ ಎನ್ನಬಹುದು.[೩]

ದೇಶಿಯ ಆಡಳಿತದ ಕೇಂದ್ರ ಬಿಂದುಗಳಾಗಿರುವ ರಾಜರುಗಳ ನಿಷ್ಠೆ ಬ್ರಿಟೀಷ್ ಸಾರ್ವಭೌಮತ್ವದ ಕಡೆ ಕೇಂದ್ರೀಕೃತವಾಗಿರುವಂತೆಯೂ ಅರಸರನ್ನು ರೂಪಿಸುವ ಹಿನ್ನೆಲೆಯಲ್ಲಿ ಬ್ರಿಟೀಷ್ ಸಾರ್ವಭೌಮತ್ವದ ಹಾಗೂ ಆಡಳಿತಗಾರರ ಪ್ರಯತ್ನಗಳನ್ನು ಇಲ್ಲಿ ಗಮನಿಸಬಹುದು.

೪.೨. ಮೈಸೂರು ಅರಸರು ಹಾಗೂ ಯೋಜನೆ

ಆಧುನಿಕ ಮೈಸೂರಿನ ಇತಿಹಾಸವೆಂದರೆ ಪಾಶ್ಚಿಮಾತ್ಯ ಜಗತ್ತಿನ ಸಂಪರ್ಕ, ಅದರಲ್ಲೂ ಪ್ರಮುಖವಾಗಿ ಬ್ರಿಟೀಷ್ ವಸಹಾತು ಆಡಳಿತ ಮತ್ತು ವ್ಯವಸ್ಥೆಯ ನೇರ ಸಂಪರ್ಕದಿಂದ ಪ್ರಭಾವಿತರಾದ ಕಾಲ. ಭಾರತದ

ಮಟ್ಟದಲ್ಲಿ ಆಧುನಿಕತೆಯ ಪ್ರಕ್ರಿಯೆಯ ಆರಂಭ ಹತ್ತೊಂಬತ್ತನೇ ಶತಮಾನವಾದರೆ, ಮೈಸೂರು ಪ್ರದೇಶದಲ್ಲಿ ಹದಿನೆಂಟನೇ ಶತಮಾನದ ಅಂತ್ಯದಲ್ಲೇ ಕಾಣಿಸಿಕೊಳ್ಳಲು ಆರಂಭಿಸಿತು.

ಶಿವನಸಮುದ್ರ ಯೋಜನೆಗೆ ಒಪ್ಪಿಗೆ ದೊರಕಲು ರೀಜೆಂಟ್ ಮಹಾರಾಣಿಯವರಾಗಿದ್ದ ಕೆಂಪನಂಜಮ್ಮಣ್ಣಿರವರ ಆಡಳಿತಾವಧಿ ಮತ್ತು ದಿವಾನ್ ಶೇಷಾದ್ರಿ ಅಯ್ಯರ್‌ರವರ ಆಸಕ್ತಿಯೂ ಕಾರಣವಾಗಿದೆ. ಇದಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ ಸಂದರ್ಭದಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆ ನೆನೆಗುದಿಯಲ್ಲಿದ್ದಾಗ ೧೬ ವರ್ಷದ ಬಾಲಕ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಅನಿರೀಕ್ಷಿತವಾಗಿ ಈ ಯೋಜನೆಗೆ ಪ್ರೋತ್ಸಾಹ ನೀಡಿದರು.[೪] ಅದೇ ವೇಳೆಗೆ ಮೈಸೂರಿಗೆ ಬೇಟಿ ನೀಡಿದ್ದ ಅಮೇರಿಕಾದ ಪ್ರವಾಸಿಯೊಬ್ಬರನ್ನು ಮಹಾರಾಜ ಬೇಟಿ ಮಾಡಿ 'ತಮ್ಮ ದೇಶಕ್ಕೂ ನಮ್ಮ ಸಂಸ್ಥಾನಕ್ಕೂ ಸಾಮ್ಯವೇನಾದರೂ ಉಂಟೆ? ಎಂದು ಪ್ರಶ್ನಿಸಿದಾಗ ಅವರು 'ದೊಡ್ಡದೊಂದು ಸಾಮ್ಯವಿದೆ ನಮ್ಮ ದೇಶದಲ್ಲಿರುವಂತೆ ತಮ್ಮ ಸಂಸ್ಥಾನದಲ್ಲಿಯೂ ಜಲಪಾತಗಳಿವೆ. ಆದರೆ ನಾವು ಧೈರ್ಯದಿಂದ ನಯಾಗಾರ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಲಾಭ ಹೊಂದುತ್ತಿದ್ದೇವೆ ತಮ್ಮಲ್ಲಿ ಮಾತ್ರ ಇನ್ನೂ ಹಾಗೆ ಧೈರ್ಯ ಮಾಡಿಲ್ಲ' ಎಂದು ಉತ್ತರ ನೀಡಿದರು.[೫]

ಇದು ನಾಲ್ವಡಿ ಕೃಷ್ಣರಾಜ ಒಡೆಯರ ಮೇಲೆ ಗಂಭೀರ ಪರಿಣಾಮ ಬೀರಿತು. ಅವರು ತಮ್ಮ ಟ್ಯೂಟರ್ ಆದ ಎಸ್.ಎಂ.ಪ್ರೇಜರ್ ಹಾಗೂ ಗುರುಗಳಾದ ಪೂರ್ಣ ರಾಘವೇಂದ್ರರಾಯರಿಂದ ಜಲವಿದ್ಯುತ್ ಬಗ್ಗೆ ವಿವರವಾದ ಮಾಹಿತಿ ಪಡೆದರು.[೬] ದಿವಾನ್ ಶೇಷಾದ್ರಿ ಅಯ್ಯರ್ ಮತ್ತು ಜಲವಿದ್ಯುತ್ ಯೋಜನೆಯ ಅಧ್ಯಯನಕ್ಕೆ ಅಮೇರಿಕಾಗೆ ಬೇಟಿ ನೀಡಿದ್ದ ಎ.ಸಿ.ಜೆ.ಲಾಬಿನೀರ್ ರವರಿಂದ ಮಾಹಿತಿಯನ್ನು ಪಡೆದರು. ನಂತರ ರೀಜೆಂಟರಾದ ತಾಯಿಯ ಬಳಿ ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಬಗ್ಗೆ ವಿವರಿಸಿ ಅಂತಹ ಬೃಹತ್ ಯೋಜನೆಯನ್ನು ಮೈಸೂರು ಕೈಗೊಂಡರೆ ಅಮೇರಿಕಾ ತೋರಿದಂತಹ ಎದೆಗಾರಿಕೆಯನ್ನು ತೋರಿಸಿದಂತಾಗಿ ವಿಶ್ವಮಾನ್ಯತೆ ಪಡೆಯುತ್ತದೆಂದೂ ಯೋಜನೆಯನ್ನು ಕೈಗೊಳ್ಳಬೇಕೆಂದು ಅರಿಕೆ ಮಾಡಿಕೊಂಡರು.[೭] ಆಧುನಿಕ ಪ್ರಪಂಚವು ಒಡ್ಡುವ ಸವಾಲುಗಳಿಗೆ ರಾಜ್ಯದ ಜನತೆಯನ್ನು ಕೊಂಡೊಯ್ಯಲು ಬೇಕಾದ ವಿಜ್ಞಾನ ತಂತ್ರಜ್ಞಾನಗಳ ಅವಿಷ್ಕಾರಗಳಿಗೆ ಸಂಬಂಧಿಸಿದ ವಿಚಾರಗಳ ಬಗೆಗಿನ ಆಸಕ್ತಿಯನ್ನು ಕೃಷ್ಣರಾಜ ಒಡೆಯರ್ ತೋರ್ಪಡಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ ಚರಿತ್ರೆಕಾರರು ಉಲ್ಲೇಖಿಸಿರುವಂತೆ ಈ ವಿಚಾರಕ್ಕೆ ಮಹಾಸ್ವಾಮಿಯವರು ಪ್ರವೇಶಿಸದೆ ತಟಸ್ಥರಾಗಿದ್ದ ಪಕ್ಷಕ್ಕೆ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯ ಏರ್ಪಾಡೇ ಬಹುಶಃ ನೆರವೇರುತ್ತಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು.[೮] ಹೀಗೆ ಅಪರೋಕ್ಷವಾಗಿ ಬಾಲಕ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ತೋರಿದ ಆಸಕ್ತಿಯಿಂದಾಗಿ ಈ ಯೋಜನೆ ಕಾರ್ಯರೂಪಕ್ಕೆ ಬಂದಿತು.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮೈಸೂರು ಸಂಸ್ಥಾನದ ಅಧಿಕಾರಿಗಳ ಮೂಲವಾಗಿ, ಮೈಸೂರಿನ ಚರಿತ್ರೆಯಲ್ಲಿ ಕಂಡುಬರುವ ಎಲ್ಲಾ ರಾಜರುಗಳಿಗಿಂಥ ಭಿನ್ನವಾಗಿದ್ದು, ಆಡಳಿತ ವಿಷಯಗಳನ್ನು ಅಮೂಲಾಗ್ರವಾಗಿ ತಿಳಿದುಕೊಂಡವರಾಗಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ರಲ್ಲಿ ಸಂಪೂರ್ಣ ಅಧಿಕಾರ ವಹಿಸಿಕೊಂಡು ೧೯೪೦ರವರೆಗೆ(೩೮ ವರ್ಷಗಳು) ಆಡಳಿತ ನಿರ್ವಹಿಸಿದರು. ಇವರ ಅಧಿಕಾರವಧಿಯಲ್ಲಿ ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್‌ರವರು ದಿವಾನರಾಗಿ ಅಧಿಕಾರವಹಿಸಿಕೊಂಡಿದ್ದ ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಬಗ್ಗೆ ಕಾಳಜಿವಹಿಸಿ, ಅಭಿವೃದ್ಧಿಗೆ ದಿವಾನರು ಮುಂದಾದಾಗ ಅವರ ದಿನನಿತ್ಯದ ಆಡಳಿತದಲ್ಲಿ ಅರಸರು ಹಸ್ತಕ್ಷೇಪ ಮಾಡದೇ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಿ ಅನುಮೋದಿಸುತ್ತಿದ್ದರು.

ಶಿವನಸಮುದ್ರದಿಂದ ಉತ್ಪಾದಿಸಲಾಗುತ್ತಿದ್ದ ವಿದ್ಯುತ್‌ಗೆ ಕಾಲಕ್ರಮೇಣ ಬೇಡಿಕೆ ಹೆಚ್ಚಾಗತೊಡಗಿತು. ಕೈಗಾರಿಕೆ, ವಾಣಿಜ್ಯ, ಗೃಹಬಳಕೆ ಹೀಗೆ ಹಲವು ಕ್ಷೇತ್ರಗಳಿಗೆ ವಿದ್ಯುಚ್ಚಕ್ತಿಯು ಆವರಿಸಿಕೊಂಡಿದ್ದ ಸಂದರ್ಭದಲ್ಲಿ ಅರಸರು, ವಿದ್ಯುಚ್ಛಕ್ತಿ ಇಲಾಖೆಗೆ ವಿದೇಶಗಳಿಂದ ಆಮದಾಗಿ ಬರಬೇಕಿದ್ದ ಎಲೆಕ್ಟ್ರಿಕಲ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸಂಸ್ಥಾನದಲ್ಲೇ ರಚಿಸಿ ಒದಗಿಸಿಕೊಡಬೇಕು.[೯] ಇಲ್ಲಿ ಆ ವೇಳೆಗಾಗಲೇ ವಿದ್ಯುಚ್ಛಕ್ತಿ ಬೇಡಿಕೆ ಎಷ್ಟಿತ್ತೆಂಬುದನ್ನು ತಿಳಿಯಬಹುದು. ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಿ ಜನಮನ್ನಣೆಗಳಿಸಿದರು. ಬೇರೆ ಬೇರೆ ಕ್ಷೇತ್ರದಲ್ಲಿ ತಮ್ಮ ರಾಜ್ಯವನ್ನು ಇತರ ದೇಶೀಯ ರಾಜರಿಗಿಂತ ಮುಂಚೂಣಿಯಲ್ಲಿ ನಿಲ್ಲಿಸಿದ ಮೈಸೂರು ಅರಸರು ವಿದ್ಯುತ್ ಕ್ಷೇತ್ರದಲ್ಲಿ ಕೂಡ ತಮ್ಮ ಛಾಪನ್ನು ಮೂಡಿಸಿದರು. ಅವರ ಈ ಪ್ರಯತ್ನದ ಫಲವಾಗಿಯೇ ಮುಂದೆ ಪ್ರಜೆಗಳು ಅವರನ್ನು "ಕೃಷ್ಣರಾಜೇಂದ್ರ ಭೂಪ ಮನೆ ಮನೆಗಳ ದೀಪ" ಎಂದು ಕೊಂಡಾಡಿದರು.[೧೦] ಬೇರೆ ದೇಶಿಯ ರಾಜರುಗಳಿಗಿಂತ ತಮ್ಮ ಪ್ರತಿಷ್ಠೆಯನ್ನು ಜನಪರ, ಪ್ರಗತಿಪರ, ಚಿಂತನೆಯ ಹಿನ್ನೆಲೆಯಾಗಿ ಗುರುತಿಸಿಕೊಂಡರು.

೪.೩. ಯೋಜನೆಯ ಅನುಷ್ಠಾನ

ವಿದ್ಯುದಾಗರದ ಕಾಮಗಾರಿಗಳು ೧೯೦೦ನೇ ಇಸವಿ ಆಗಸ್ಟ್ ೧೬ರಂದು ಗುದ್ದಲಿ ಪೂಜೆಯೊಂದಿಗೆ ಆರಂಭವಾಯಿತು.[೧೧] ಯೋಜನೆಯ ಮೊದಲ ಹೆಜ್ಜೆಯಾಗಿ ಕಾಮಗಾರಿ ಇಲಾಖೆಯಲ್ಲಿ "ಕಾವೇರಿ ವಿದ್ಯುತ್ ಯೋಜನೆ" ಎಂಬ ಹೊಸ ವಿಭಾಗವೊಂದನ್ನು ತಾತ್ಕಾಲಿಕವಾಗಿ ಆರಂಭಿಸಲಾಯಿತು.[೧೨] ಈ ವಿಭಾಗದ ಮುಖ್ಯಸ್ಥರಾಗಿ ಜೆ.ಸಿ.ಹಂಟರ್‌ರವರು ಅಧಿಕಾರ ವಹಿಸಿಕೊಂಡರು. ಈ ವಿಭಾಗದ ಅಡಿಯಲ್ಲಿ ೪ ಉಪ ವಿಭಾಗಗಳನ್ನು ರಚಿಸಲಾಯಿತು.

ಮೊದಲನೆ ಉಪವಿಭಾಗ : ನದಿ ಮತ್ತು ಚಾನಲ್ ಅರ್ಧಭಾಗದ ಕಾಮಗಾರಿಯ ಉಸ್ತುವಾರಿ

ಎರಡನೇ ಉಪವಿಭಾಗ : ಉಳಿದ ಚಾನಲ್ ಕಾಮಗಾರಿ, ಸಿಬ್ಬಂದಿ ವಸತಿಗೃಹಗಳ ನಿರ್ಮಾಣ, ವಿದ್ಯುದಾಗಾರದ ಕಟ್ಟಡ ನಿರ್ಮಾಣ ಉಸ್ತುವಾರಿ.

ಮೂರನೇ ಉಪವಿಭಾಗ : ಮುಖ್ಯ ಪ್ರಸರಣ ಮಾರ್ಗವಾದ ಶಿವನಸಮುದ್ರದಿಂದ ಕೋಲಾರದವರೆಗಿನ ೯೩ ಮೈಲಿಗಳ ನಿರ್ಮಾಣ ಕಾಮಗಾರಿ ಉಸ್ತುವಾರಿ.

ನಾಲ್ಕನೇ ಉಪವಿಭಾಗ : ಕೋಲಾರದಲ್ಲಿ ವಿದ್ಯುತ್ ವಿತರಣಾ ಕಟ್ಟಡಗಳು ಮತ್ತು ಪ್ರಸರಣ ಮಾರ್ಗ ಪರಿಶೀಲನಾ ಕಾಮಗಾರಿಯ ಉಸ್ತುವಾರಿ.

ಕಾವೇರಿ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಸೇವೆ ಸಲ್ಲಿಸಲು ಇಂಜಿನಿಯರಿಂಗ್ ಸಿಬ್ಬಂದಿಗಳನ್ನು ಸಾರ್ವಜನಿಕ ಕಾಮಗಾರಿ ವಿಭಾಗದ ಅಧೀನಕ್ಕೆ ಒಳಪಟ್ಟಂತೆ ಆಯ್ಕೆ ಮಾಡಲಾಯಿತು. ಅವರೆಂದರೆ,

೧. ಕರ್ನಲ್ ಡಿ, ಮೆಕ್‌ನೆಲ್ ಕ್ಯಾಂಪಬೆಲ್, ಮುಖ್ಯ ಇಂಜಿನಿಯರ್ ಮೈಸೂರು.

೨. ಕ್ಯಾಪ್ಟನ್, ಎ.ಸಿ.ಜೆ.ಲಾಬಿನೀರ್, ಉಪ ಮುಖ್ಯ ಇಂಜಿನಿಯರ್.

೩. ಜೆ.ಪಿ.ಹಂಟರ್, ರೆಸಿಡೆಂಟ್ ಇಂಜಿನಿಯರ್

೪. ಜೆ.ಬೋರೆ, ಸಹಾಯಕ ಇಂಜಿನಿಯರ್, ಹಂಟರ್‌ರವರ ಆಪ್ತಸಹಾಯಕ.

೫. ಜೆ.ಇ.ಎ ಡಿಕೋರ್ಸ್, ಸಹಾಯಕ ಇಂಜಿನಿಯರ್ ೧ನೇ ಉಪವಿಭಾಗ

೬. ಸಿ.ಮಾಧವರಾವ್, ಸಹಾಯಕ ಇಂಜಿನಿಯರ್ ೨ನೇ ಉಪವಿಭಾಗ

೭. ಕೆ.ಶ್ರೀನಿವಾಸ ಅಯ್ಯಂಗಾರ್, ಸಹಾಯಕ ಇಂಜಿನಿಯರ್ ೩ನೇ ಉಪವಿಭಾಗ

೮. ಎಫ್.ಎ.ಸ್ಟೀಲ್, ಸಹಾಯಕ ಇಂಜಿನಿಯರ್ ೪ನೇ ಉಪವಿಭಾಗ

೯. ಹೆಚ್.ಡಿ.ರೈಸ್, ಸಹಾಯಕ ಇಂಜಿನಿಯರ್, ರಸ್ತೆ ಮತ್ತು ಸಾರಿಗೆ(೩ನೇ ಉಪವಿಭಾಗಕ್ಕೆ ಪೂರಕವಾಗಿ)

ಆಧಾರ : ಗೋಪಾಲಕೃಷ್ಣಯ್ಯ ಎಂ., "ಹಿಸ್ಟರಿ ಆಫ್ ದಿ ಕಾವೇರಿ ಪವರ್ ಸ್ಕೀಂ", ಬೆಂಗಳೂರು, ೧೯೩೨, ಪು.೮೪ ಮತ್ತು ೮೫.

ಚಾನಲ್ ಕಾಮಗಾರಿಗಳು ಎಲ್ಲಕ್ಕಿಂತ ಮುಂಚೆ ಆಗಸ್ಟ್ ೧೦, ೧೯೦೦ ರಂದು ಗುದ್ದಲಿ ಪೂಜೆ ಯೊಂದಿಗೆ ಪ್ರಾರಂಭವಾಯ್ತು.[೧೩] ಕಾಮಗಾರಿಗಳು ನಡೆಯುತ್ತಿದ್ದ ಸ್ಥಳಕ್ಕೆ ಕೇವಲ ಒಂದೂವರೆ ಮೈಲಿಗಳ ದೂರದ ರೊಟ್ಟಿಕಟ್ಟೆಯಲ್ಲಿ ಕಾಮಗಾರಿ ಇಲಾಖೆಯು ತನ್ನ ತಾತ್ಕಾಲಿಕ ಬಿಡಾರವನ್ನು ಪ್ರಾರಂಭಿಸಿ, ಕೆಲಸವು ಬಿರುಸಿನಿಂದ ನಡೆಯುವಂತೆ ನೋಡಿಕೊಂಡರು.[೧೪] ಕಾಮಗಾರಿ ಪ್ರಾರಂಭವಾದಾಗ ಕಾವೇರಿ ನದಿಯು ತುಂಬಾ ಪ್ರವಾಹ ದಲ್ಲಿತ್ತು. ಆ ವೇಳೆಗಾಗಲೇ ಕಾಲುವೆ ಕಾಮಗಾರಿ ಕೆಲಸವನ್ನು ಸಿಬ್ಬಂದಿಗಳಿಗೆ ವಸತಿ ನಿಲಯ ನಿರ್ಮಿಸುವ ಕೆಲಸವನ್ನು ಪ್ರಾರಂಭಿಸಲಾಗಿತ್ತು.

ಶಿವನಸಮುದ್ರ ದ್ವೀಪವು ತೀರಾ ವಿರಳ ಜನಸಂಖ್ಯೆ ಹೊಂದಿದ ಪ್ರದೇಶವಾದ್ದರಿಂದ ಕಾಮಗಾರಿಗೆ ಕೂಲಿ ಕಾರ್ಮಿಕರ ಲಭ್ಯತೆ ಕಡಿಮೆ. ಅಲ್ಲದೇ ಬಹುತೇಕ ಸ್ಥಳೀಯರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ೧೯೦೧ರ ಮೊದಲ ಆರು ತಿಂಗಳು ಕಡಿಮೆಯೆಂದರೆ ದಿನಕ್ಕೆ ಐದು ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರು ಶಿವನಸಮುದ್ರ ಜಲ ವಿದ್ಯುತ್ ಯೋಜನೆಯ ಕಾಮಗಾರಿಗೆ ಅಗತ್ಯವಿತ್ತು. ನಂತರ ಬಹುತೇಕ ಕೂಲಿ ಕಾರ್ಮಿಕರನ್ನು ದೂರದ ಊರಿನಿಂದ ಕರೆತರಲಾಯಿತು. ಕಾರ್ಮಿಕರಿಗೆ ಪೂರಕವಾಗಿ ತಾತ್ಕಾಲಿಕ ಬಿಡಾರ ಮತ್ತು ಆಸ್ಪತ್ರೆ ಸೌಲಭ್ಯ ಕಲ್ಪಿಸಲಾಯಿತು. ಯೋಜನೆಯ ಕಟ್ಟಡ, ಚಾನಲ್ ಕಾಮಗಾರಿ ಕೆಲಸ ಬಿರುಸಿನಿಂದ ಸಾಗಲು, ಆ ಪ್ರದೇಶದಲ್ಲೇ ಸಿಕ್ಕುತ್ತಿದ್ದ ಕಟ್ಟಡ ಸಾಮಗ್ರಿಗಳು ನೆರವಾದವು. ಕಾಮಗಾರಿಯ ಸುತ್ತಮುತ್ತಲ ಪ್ರದೇಶದಲ್ಲಿ ಗ್ರಾನೈಟಿನ ಬಂಡೆಗಳು ಅಲ್ಲದೆ ಗಟ್ಟಿಯಾದ ಉರುಟುಗಲ್ಲುಗಳು ಹೇರಳವಾಗಿ ಸಿಕ್ಕುತ್ತಿದ್ದದ್ದು, ಹತ್ತಿರದ ಪ್ರದೇಶದಲ್ಲೇ ಕುಂಕೂರು-ಸುಣ್ಣದ ಕಲ್ಲುಗಳು ದೊರೆಯುತ್ತಿದ್ದುದರಿಂದ ಗಾರೆ ಮತ್ತು ಇಟ್ಟಿಗೆಗಳನ್ನು ಸ್ಥಳೀಯವಾಗಿ ತಯಾರಿಸಿಕೊಳ್ಳಲು ಅನುಕೂಲವಾಯಿತು.[೧೫] ಈ ಅವಕಾಶಗಳಿಂದ ಯೋಜನೆಯ ಕಾಮಗಾರಿಗಳು ಬಿರುಸಾಗಿ ನಡೆಯಲು ಸಾಧ್ಯವಾಯಿತು ಎನ್ನಬಹುದು.

೧೯೦೦ರ ಸೆಪ್ಟೆಂಬರ್ ತಿಂಗಳಿನಲ್ಲಿ ಜನರಲ್ ಎಲೆಕ್ಟ್ರಿಕಲ್ ಕಂಪನಿಯೊಂದಿಗೆ ವಿತರಣಾ ಉಪಸ್ಥಾವರದ(ಡಿಸ್ಟ್ರಿಬ್ಯೂಷನ್ ಪ್ಲಾಂಟ್) ಕುರಿತು ಅಂತಿಮ ಒಪ್ಪಂದವನ್ನು, ಮಾಡಿಕೊಂಡು ಲಾಬಿನೀರ್ ರವರು ಭಾರತಕ್ಕೆ ಮರಳಿದರು.[೧೬] ಅದೇ ಸಂದರ್ಭದಲ್ಲಿ ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯ ಇಂಜಿನಿಯರ್‌ಗಳು ಮತ್ತು ತಾಂತ್ರಿಕ ವರ್ಗದ ಸಿಬ್ಬಂದಿಗಳ ಮೊದಲ ತಂಡವು ಭಾರತಕ್ಕೆ ಬಂದಿತು. ಅವರುಗಳೆಂದರೆ

ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿ, ನ್ಯೂಯಾರ್ಕ್‌ನಿಂದ

೧. ಅಕ್ಸೆಲ್ ಎಕ್ಸ್‌ಟ್ರೋಮ್, ಮುಖ್ಯ ವಿದ್ಯುತ್ ಅಭಿಯಂತರ

೨. ಎ.ಸಿ.ಜೀವೆಟ್, ವಿದ್ಯುತ್ ಅಭಿಯಂತರ, ಮುಖ್ಯ ವಿದ್ಯುತ್ ಅಭಿಯಂತರರ ಆಪ್ತ ಸಹಾಯಕ

೩. ಎಚ್ ಫೂಟ್‌ಮ್ಯಾನ್, ಕಾರ್ಯದರ್ಶಿ

೪. ಇ.ಎಲ್.ಕುಲ್ಲೆನ್, ವಿದ್ಯುತ್ ಅಭಿಯಂತರ ಜೊತೆಗೆ ಮೂವರು ಸಹಾಯಕರು(ಜಲವಿದ್ಯುದಾಗರದ ಉಸ್ತುವಾರಿ).

೫. ಎಚ್.ಹಸ್ಸನ್, ವಿದ್ಯುತ್ ಅಭಿಯಂತರ, ಜೊತೆಗೆ ನಾಲ್ಕು ಮಂದಿ ಸಹಾಯಕರು(೯೨ ಮೈಲಿ ಪ್ರಸರಣ ಮಾರ್ಗದ ಉಸ್ತುವಾರಿ)

೬. ಎಚ್.ಬಿಮ್ಸ್, ವಿದ್ಯುತ್ ಅಭಿಯಂತರ, ಜೊತೆಗೆ ಮೂವರು ಸಹಾಯಕರು(ಕೋಲಾರ ವಿತರಣ ಸ್ಥಾವರದ ಉಸ್ತುವಾರಿ)

ಮೆಸರ್ ಎಶ್ಚರ್‌ವೇಸ್ ಅಂಡ್ ಕಂ, ಜ್ಯೂರಿಚ್‌ನಿಂದ

ಡಬ್ಲ್ಯೂ ಮುಲ್ಲರ್, ಉಸ್ತುವಾರಿ ಮುಖ್ಯಸ್ಥ, ಒಬ್ಬ ಸಹಾಯಕ ಅವನ ಇಬ್ಬರು ಸಹವರ್ತಿಗಳು (ಪೆನ್‌ಸ್ಟಾಕ್ ಅಳವಡಿಕೆಗೆ). ಹೀಗೆ ಎರಡು ಕಂಪನಿಗಳಿಂದ ಜಲ ವಿದ್ಯುತ್ ಯೋಜನೆಗೆ ವಿದೇಶಗಳಿಂದ ಬಂದ ತಾಂತ್ರಿಕ ವರ್ಗದವರಾಗಿದ್ದಾರೆ.

೧೯೦೧ರ ಜನವರಿಯಲ್ಲಿ ನೌಕೆಸಾರಿಗೆಯಲ್ಲಿ ಜಲವಿದ್ಯುದಾಗರಕ್ಕೆ ಸಂಬಂಧಿಸಿದ ಅಮೇರಿಕಾ ಮತ್ತು ಯೂರೋಪಿನಿಂದ ಪೆನ್‌ಸ್ಟಾಕ್ ಪೈಪುಗಳು, ಗ್ಲಾಸ್‌ಗೋವ್ ಮಾರ್ಗವಾಗಿ ಮರ್ಮಗೋವಾಗೆ ಆಮದಾಯಿತು. ಆ ವೇಳೆಗೆ ಪ್ರಸರಣ ಮಾರ್ಗದ ಸರ್ವೆಕಾರ್ಯ ನಡೆದು ಅಲ್ಲಿ ಬೆಳೆದಿದ್ದ ಗಿಡಮರಗಳನ್ನು ಕಡಿಯುವ ಕಾರ್ಯ ಚಾಲ್ತಿಯಲ್ಲಿತ್ತು. ವಿದೇಶಗಳಿಂದ ಯೋಜನೆಗಾಗಿ ಬರುತ್ತಿದ್ದ ಸರಕು ಸಾಮಗ್ರಿಗಳನ್ನು ಬೆಂಗಳೂರು ರೈಲ್ವೆ ನಿಲ್ದಾಣದ ಸಮೀಪ ಉಗ್ರಾಣದಲ್ಲಿ ಸಂಗ್ರಹಿಸಿ ಜಾಗರೂಕವಾಗಿ ಇಡಲಾಯಿತು.

ನಡುವೆ ರೊಟ್ಟಿಕಟ್ಟೆಯಲ್ಲಿದ್ದ ಕಾಮಗಾರಿ ಇಲಾಖೆಯ ತಾತ್ಕಾಲಿಕ ಬಿಡಾರವನ್ನು ಬ್ಲಫ್‌ಗೆ ಸ್ಥಳಾಂತರಿಸಲಾಯಿತು. ಉನ್ನತ ದರ್ಜೆಯ ಸಿಬ್ಬಂದಿಗಳಿಗಾಗಿ ಕ್ವಾಟ್ರರ್ಸ್‌ಗಳನ್ನು ನಿರ್ಮಿಸಲಾಯಿತು. ಪೂರಕವಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ದಿನಸಿ ಅಂಗಡಿ ವ್ಯವಸ್ಥೆ, ಮದ್ದೂರಿನಿಂದ ಶಿವನಸಮುದ್ರದ ನಡುವೆ ಕುದುರೆ ಗಾಡಿಗಳನ್ನು ಓಡಿಸುವ ಮುಖಾಂತರ ಸಾರಿಗೆ ವ್ಯವಸ್ಥೆ, ಅಂಚೆಕಚೇರಿ, ಬ್ಲಫ್‌ನಿಂದ ಬೆಂಗಳೂರಿಗೆ ಟೆಲಿಫೋನ್ ವ್ಯವಸ್ಥೆಯನ್ನು ಕಲ್ಪಿಸಲಾಯಿತು.

ವಿದ್ಯುದಾಗರದ ಫೋರ್‌ಬೇ ಮತ್ತು ಟ್ರಾನ್ಸ್‌ಫಾರ್ಮರ್ ಸ್ಥಾವರದ ಸ್ಥಳಗಳನ್ನು ಗುರುತಿಸಲಾಗಿತ್ತು. ಒಂದು ಮೆಟೀರಿಯಲ್ ಟ್ರಾಮ್‌ವೇಯನ್ನು ಸ್ಥಾಪಿಸಲಾಯಿತು. ಸ್ಥಾವರದ ಗುದ್ದಲಿ ಪೂಜೆ ೧೯೦೧ನೇ ಮಾರ್ಚ್ ತಿಂಗಳಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ಟ್ರಾನ್ಸ್‌ಫಾರ್ಮರ್ ಸ್ಥಾವರ, ಕಂಪ್ರೆಸರ್ ಹೌಸ್ ಮೋಟಾರ್ ಶೆಡ್‌ನ ಕೆಲಸಗಳು ಪ್ರಾರಂಭವಾಯಿತ್ತಲ್ಲದೇ ಕೆ.ಜಿ.ಎಫ್.ನಲ್ಲಿ ವಿತರಣಾ ಸ್ಥಾವರದ ಕೆಲಸಗಳು ಪ್ರಾರಂಭವಾದವು. ೯೨ ಮೈಲುಗಳ ಉದ್ದ ಪ್ರಸರಣ ಮಾರ್ಗವನ್ನು ಸುಮಾರು ೩೦ ಮೈಲುಗಳ ಮೂರು ವಿಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ಕಡೆ ಮಾರ್ಗದ ನಿರೀಕ್ಷಣೆ, ಕಾಮಗಾರಿಗೆ ಅನುಕೂಲವಾಗುವಂತೆ ತಾತ್ಕಾಲಿಕ ಬಿಡಾರ ವ್ಯವಸ್ಥೆಯನ್ನು ಮಾಡಲಾಯಿತು.

೪.೪. ಟ್ರಾನ್ಸ್‌ಫಾರ್ಮರ್ ಸ್ಥಾವರ

ಬೇರೆಲ್ಲಾ ವಿದ್ಯುದಾಗರಗಳಲ್ಲಿ ಇರುವುದಕ್ಕಿಂತ ಭಿನ್ನವಾದ ಟ್ರಾನ್ಸ್‌ಫಾರ್ಮರ್ ಸ್ಥಾವರವನ್ನು ಶಿವನಸಮುದ್ರ ಜಲವಿದ್ಯುತ್ ಯೋಜನೆಯಲ್ಲಿ ಸ್ಥಾಪಿಸಿದ ಹಿರಿಮೆ.

ಎಲ್ಲ ಕಡೆಯೂ ಟ್ರಾನ್ಸ್‌ಫಾರ್ಮರ್‌ಗಳನ್ನು ವಿದ್ಯುದಾಗರ ಸ್ಥಾವರದಲ್ಲಿ ಅಥವಾ ಅದರ ಪಕ್ಕದಲ್ಲಿ ಸ್ಥಾಪಿಸುತ್ತಾರೆ. ಆದರೆ ಶಿವನಸಮುದ್ರದಲ್ಲಿ ವಿದ್ಯುದಾಗರಕ್ಕಿಂತ ಸುಮಾರು ೯೦೦ ಅಡಿಗಳ ದೂರದಲ್ಲಿ

ಸ್ಥಾಪಿಸಲಾಯಿತು. ಮುಖ್ಯ ಸ್ಥಾವರದಿಂದ ಟ್ರಾನ್ಸ್‌ಫಾರ್ಮರ್ ಸ್ಥಾವರಕ್ಕೆ ವಿದ್ಯುತ್ ಹರಿಸಿ ಟ್ರಾನ್ಸ್‌ಫಾರ್ಮರ್ ಗಳನ್ನು ಸುವ್ಯವಸ್ಥಿತ ಜಾಗದಲ್ಲಿ ಇಡುವ ಯೋಜನೆಯನ್ನು ಇಂಜಿನಿಯರ್ ಡಿ.ಲಾಬಿನೀರ್ ಚಾಣಾಕ್ಷತನ ದಿಂದ ನಿರ್ವಹಿಸಿದರು.[೭೭]

ಆ ಕಾಲದಲ್ಲಿ ವಿಶ್ವದಲ್ಲೇ ಅತ್ಯಂತ ಉದ್ದವಾದ ಶಿವನಸಮುದ್ರ ಕೋಲಾರ ನಡುವಿನ ಪ್ರಸರಣ ಮಾರ್ಗದ ಮೊದಲ ಕಂಬವನ್ನು ೧೯೦೧ರ ಮೇ ತಿಂಗಳ ೨೯ನೇ ತಾರೀಖಿನಂದು ಸ್ಥಾಪಿಸಿ ಭಾರತದಲ್ಲಿ ವಿದ್ಯುತ್ ಪ್ರಸರಣ ಮಾರ್ಗದ ಇತಿಹಾಸವನ್ನು ಪ್ರಾರಂಭಿಸಲಾಯಿತು.

೪.೫. ಯಂತ್ರೋಪಕರಣಗಳ ಸಾಗಣೆ ವ್ಯವಸ್ಥೆ

ಪ್ರಸ್ತುತ ಸಂದರ್ಭದಲ್ಲಿ ಯಂತ್ರೋಪಕರಣಗಳನ್ನು ಸಾಗಿಸಲು ಅರ್ಥಮೂವರ್, ಕ್ರೇನ್‌ಗಳು, ಲಿಫ್ಟ್‌ಗಳು ಅತ್ಯಾಧುನಿಕ ಯಂತ್ರೋಪಕರಣಗಳು ಲಭ್ಯವಿದ್ದು, ಶಿವನಸಮುದ್ರ ಜಲವಿದ್ಯುದಾಗರದ ಯಂತ್ರೋಪಕರಣಗಳನ್ನು ೧೯೦೨ರ ಸಂದರ್ಭದಲ್ಲಿ ಸಾಗಿಸಲು ಹರಸಾಹಸವೇ ಪಡಬೇಕಾಯಿತು. ಅತ್ಯಾಧುನಿಕ ಸೌಲಭ್ಯಗಳು ಲಭ್ಯವಿಲ್ಲದ ಸಂದರ್ಭವದು. ಯೋಜನಾ ಸಾಮಗ್ರಿಗಳು ಬೆಂಗಳೂರಿನಿಂದ ಮದ್ದೂರಿನವರೆಗೆ ರೈಲಿನಲ್ಲಿ ಸಾಗಿಸಬಹುದಾಗಿತ್ತು. ಆದರೆ ಮದ್ದೂರಿನಿಂದ ಶಿವನಸಮುದ್ರದವರೆಗಿನ ೨೮ ಮೈಲು ಉದ್ದದ ರಸ್ತೆಗಳಲ್ಲಿ ಯಂತ್ರೋಪಕರಣಗಳನ್ನು ಸಾಗಿಸಲು ವಿಶೇಷ ರಸ್ತೆ ಟ್ರಾಲಿಗಳನ್ನು ಬಳಸಿ, ಅದನ್ನು ಎಳೆಯಲು ಮೈಸೂರು ಸರ್ಕಾರ ಅರಣ್ಯ ಇಲಾಖೆಯ ಎಂಟು ಆನೆಗಳನ್ನು ಬಳಸಿಕೊಳ್ಳಲಾಯಿತು. ಮಹಾರಾಜರ ಒಪ್ಪಿಗೆಯ ಮೇರೆಗೆ ದೊರೆತ ಈ ಅಷ್ಟ ಗಜಗಳೊಂದಿಗೆ ಹಲವಾರು ಕುದುರೆ, ಎತ್ತುಗಳನ್ನು ಜೋಡಿಸಿ ಭಾರೀ ಗಾತ್ರದ ಬಹುಭಾರದ ಗಾಡಿಗಳನ್ನು ಎಳೆಯಲಾಯಿತು.

೪.೬. ವಿದ್ಯುದಾಗರದ ಕಾಮಗಾರಿ

ಯೋಜನೆಯ ಕಾಮಗಾರಿಯ ಆರಂಭ ಘಟ್ಟದಲ್ಲಿ ಚಾನಲ್‌ಗಳು, ಟ್ರಾನ್ಸ್‌ಫಾರ್ಮರ್ ಸ್ಥಾವರ, ಸಿಬ್ಬಂದಿ ವಸತಿಗೃಹದ ಕಾಮಗಾರಿಗಳು ಸಂಪೂರ್ಣ ಪೂರ್ಣಗೊಂಡ ನಂತರ ವಿದ್ಯುದಾಗರದ ಕಾಮಗಾರಿ ಯನ್ನು ಪ್ರಾರಂಬಿಸಲಾಯಿತು. ೧೦ ಅಡಿ ಉದ್ದದ ೪ ಅಡಿ ಅಗಲದ ಪೈಪುಗಳನ್ನು ಒಂದಕ್ಕೊಂದು ಜೋಡಿಸಿ ಕಣಿವೆಯೊಳಗೆ ಇಳಿಸಿ ಪೆನ್‌ಸ್ಟಾಕ್ ಕಾಮಗಾರಿಯನ್ನು ಪೂರೈಸಲಾಯಿತು. ಹೈಡ್ರಾಲಿಕ್ ಉಪಕರಣ ಗವರ್ನರ್‌ಗಳನ್ನು ಕಣಿವೆಯ ಕೆಳಭಾಗಕ್ಕೆ ತರಲಾಯಿತು. ೧೯೦೧ರ ಡಿಸೆಂಬರ್ ವೇಳೆಗೆ ಶಿವನಸಮುದ್ರ ಮತ್ತು ಕೆ.ಜಿ.ಎಫ್ ಎರಡೂ ಕಡೆಗಳಲ್ಲಿ ಟ್ರಾನ್ಸ್‌ಫಾರ್ಮರ್ ಸ್ಥಾವರದ ಕಟ್ಟಡಗಳನ್ನು ನಿರ್ಮಿಸಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಯಿತು.[೭೮] ಜನವರಿ ೧೯೦೩ರ ಹೊತ್ತಿಗೆ ಬಹಳಷ್ಟು ಹೈಡ್ರಾಲಿಕ್ ಯಂತ್ರೋಪಕರಣಗಳ ಅಳವಡಿಕೆ ಕಾರ್ಯ ಮುಗಿಯುವ ಹಂತಕ್ಕೆ ತಲುಪಿತು.

ವಿದ್ಯುದಾಗರಕ್ಕೆ ವಿದ್ಯುತ್ ಉಪಕರಣಗಳ ಜೋಡಣೆಯನ್ನು ವಿದ್ಯುತ್ ತಾಂತ್ರಿಕವರ್ಗದ ಅಭಿಯಂತರು ೧೯೦೩ ಫೆಬ್ರವರಿ ೧ ರಿಂದ ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿ ಫೆಬ್ರವರಿ ಅಂತ್ಯಕ್ಕೆ ಕೋಲಾರದಿಂದ ಪ್ರಸರಣ ಮಾರ್ಗ ಮುಕ್ತಾಯವಾಗುತ್ತಾ ಶಿವನಸಮುದ್ರದವರೆಗೂ ಬಂದಿತು.[೧೯] ಮಾರ್ಚ್ ೧ನೇ ತಾರೀಖು, ೯೨ ಮೈಲು ಉದ್ದದ ಕೆ.ಜಿ.ಎಫ್.ನಿಂದ ಶಿವನಸಮುದ್ರದವರೆಗೂ ಜೋಡಿ ಪ್ರಸರಣ ಮಾರ್ಗದ ಕಾಮಗಾರಿ ಮುಗಿಯಿತು. ಕೇವಲ ಒಂಬತ್ತು ತಿಂಗಳುಗಳಲ್ಲಿ ಪ್ರಪಂಚದಲ್ಲಿಯೇ ಅತ್ಯಂತ ಉದ್ದವೆನಿಸಿದ ೯೨ ಮೈಲುದ್ದದ ಪ್ರಸರಣ ಮಾರ್ಗವನ್ನು ನಿರ್ಮಿಸಲಾಯಿತು.[೨೦]

ಇದೆಲ್ಲದರ ನಡುವೆ ಮಾರ್ಚ್ ತಿಂಗಳಿನಲ್ಲಿ ಪೆನ್‌ಸ್ಟಾಕ್ ಇಳಿಸುವ ಕಾರ್ಯ ತೀವ್ರಗತಿಯಲ್ಲಿ ಸಾಗಿತು. ಹಗಲುರಾತ್ರಿ ಎನ್ನದೆ ಕೈಗೊಂಡ ಈ ಕೆಲಸ ಮೂರು ತಿಂಗಳ ಕಾಲ ನಡೆದು ೩೧-೫-೧೯೦೩ರಂದು ಪೆನ್‌ಸ್ಟಾಕ್ ಅಳವಡಿಕೆ ಕಾರ್ಯ ಪೂರ್ಣ ಪ್ರಮಾಣದಲ್ಲಿ ಮುಗಿಯಿತು. ಇದೇ ವೇಳೆಗೆ ೩.೫ ಮೈಲು ಉದ್ದದ ಎರಡೂ ಕಾಲುವೆಗಳ ಕೆಲಸ ಮುಗಿದು. ಪರೀಕ್ಷೆ ನಡೆದು ಫೋರ್‌ಬೇ ವರೆಗಿನ ನೀರಿನ ಹರಿವು ಸಂಪೂರ್ಣವಾಗಿ ಯಶಸ್ವಿಯಾಯಿತು.

೪.೭. ವಿದ್ಯುದಾಗರದ ಉದ್ಘಾಟನೆ, ಯೋಜನೆಯ ಕಾರ್ಯಾರಂಭ

ಜೂನ್ ೧೯೦೩ರ ವೇಳೆಗೆ ವಿದ್ಯುದಾಗರ, ಪ್ರಸರಣ ಮತ್ತು ವಿತರಣ ಮಾರ್ಗ, ಟ್ರಾನ್ಸ್‌ಫಾರ್ಮರ್ ಸ್ಥಾವರದ ಕೆಲಸ, ಎಲ್ಲ ಕಟ್ಟಡ ಕಾಮಗಾರಿಗಳು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಂಡಿತು.[೨೧] ಜೂನ್ ತಿಂಗಳ ೯ನೇ ತಾರೀಖು ಪೆನ್‌ಸ್ಟಾಕ್‌ಗಳಲ್ಲಿ ನೀರು ಹರಿದು ಬಿಡುವ ಮೂಲಕ ಪರೀಕ್ಷೆಗೆ ಒಳಪಡಿಸಲಾಯಿತು. ಎರಡು ವಾರಗಳ ತನಕ ಪೆನ್‌ಸ್ಟಾಕ್‌ಗಳ ಸೋರಿಕೆ, ವಿವಿಧ ಒತ್ತಡಗಳ ಪರೀಕ್ಷೆ, ಗವರ್ನರ್‌ಗಳು, ಜನರೇಟರ್‌ಗಳು ಮುಂತಾದವುಗಳನ್ನು ಪರೀಕ್ಷಿಸಲಾಯಿತು. ಜೂನ್ ತಿಂಗಳ ಕೊನೆಯ ಹೊತ್ತಿಗೆ ಎಲ್ಲ ಪರೀಕ್ಷೆಗಳು ಮುಗಿದವು.[೨೨]

ನಂತರ ದಿನಾಂಕ ೩೦-೬-೧೯೦೨ ರಂದು ವಿದ್ಯುಕ್ತವಾಗಿ ಈ ಯೋಜನೆಯಿಂದ ವಿದ್ಯುತ್ ಉತ್ಪಾದನೆಯನ್ನು ಆರಂಭಿಸಲಾಯಿತು. ಅಂದು ಸ್ವಿಚ್ ಒತ್ತುವುದರ ಮೂಲಕ ಅಧಿಕೃತವಾಗಿ ಯಂತ್ರಗಳನ್ನು ಚಾಲನೆಗೊಳಿಸಿದವರು ಶ್ರೀಮತಿ ರಾಬರ್ಟ್‌ಸನ್.[೨೩] ಅವರು ಆಗ ಮೈಸೂರಿನಲ್ಲಿ ಬ್ರಿಟೀಷ್ ರೆಸಿಡೆಂಟ್ ಆಗಿದ್ದ ಕರ್ನಲ್ ಡೊನಾಲ್ಡ್ ರಾಬರ್ಟ್‌ಸನ್ ಅವರ ಪತ್ನಿ.

ಈ ಯೋಜನೆಗೆ ೧೯೦೩ರ ವೇಳೆಗೆ ಹೂಡಿದ ಒಟ್ಟು ಬಂಡವಾಳ ೩,೪೦,೧೦೦ ಪೌಂಡ್ ಅಥವಾ ೫೦ ಲಕ್ಷ ರೂಪಾಯಿಗಳು.[೨೪] ಆಗ ಉತ್ಪಾದಿಸಲ್ಪಟ್ಟ ವಿದ್ಯುತ್ತನ್ನು ತಕ್ಷಣ ಗೃಹಪಯೋಗಕ್ಕೆ ಬಳಸಿಕೊಳ್ಳಲಾಗಲಿಲ್ಲ. ಜಾನ್ ಟೇಲರ್ ಅಂಡ್ ಸನ್ಸ್‌ನವರೊಂದಿಗೆ ಈ ಬಗ್ಗೆ ಮೊದಲೇ ಒಪ್ಪಂದವಾಗಿತ್ತು.

ಎಲ್ಲ ಅಡೆತಡೆಗಳನ್ನು ನಿವಾರಿಸಿಕೊಂಡ ನಂತರ ದಿನಾಂಕ ೧೫-೭-೧೯೦೨ರಂದು ಕೋಲಾರದ ಚಿನ್ನದ ಗಣಿಗೆ ವಾಣಿಜ್ಯ ಬಳಕೆಗೆಂದು ಪ್ರಪ್ರಥಮವಾಗಿ ವಿದ್ಯುತ್ ಸರಬರಾಜು ಮಾಡಲಾಯಿತು.[೨೫]

೧೯೦೨ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ರಾಜ್ಯದ ಮಹಾರಾಜರಾಗಿ ಅಧಿಕಾರ ವಹಿಸಿಕೊಂಡರು. ಆ ವರ್ಷ ಮೈಸೂರಿನ ಇತಿಹಾಸದಲ್ಲಿ ಅತ್ಯಂತ ಮಹತ್ವದ ವರ್ಷವಾಯಿತು. ಇಡೀ ಭಾರತದಲ್ಲಿ ಪ್ರಪ್ರಥಮವಾಗಿ ವಿದ್ಯುತ್ ಉತ್ಪಾದಿಸಿದ ಕೀರ್ತಿ ಮೈಸೂರು ಸಂಸ್ಥಾನಕ್ಕೆ ಸಂದಿತು.[೨೬]

ಇಂತಹ ಒಂದು ಬೃಹತ್ ಯೋಜನೆಯನ್ನು ಮೈಸೂರಿನಲ್ಲಿ ಕಾರ್ಯಗತಗೊಳಿಸಿ ಆಧುನಿಕ ಸಂಸ್ಥಾನದಲ್ಲಿ ಚಾಲನೆಗೊಳಿಸಲಾಯಿತು.[೨೭]

ಅಡಿಟಿಪ್ಪಣಿಗಳು

೧. ಸುರೇಂದ್ರರಾವ್ ಬಿ., ದಿ ಮಾಡರ್ನ್ ಇನ್ ಮಾಡರ್ನ್, ಐ.ಸಿ.ಎಚ್.ಆರ್., ೧೬ನೇ ಸಮ್ಮೇಳನ ಅಧ್ಯಕ್ಷರ ಭಾಷಣ ಕೈಪಿಡಿ, ಕೊಲ್ಕತ್ತಾ, ೨೦೦೧, ಪು.೩೧

೨. ಶ್ರೀಪಾದ್ ಭಟ್, **ಆಧುನಿಕೋತ್ತರವಾದ**, ಮೈಸೂರು, ೧೯೯೪, ಪು.೧೩

೩. ವೆಂಕಟರಾಮಯ್ಯ ಸಿ.ಕೆ., **ಆಳಿದ ಮಹಾಸ್ವಾಮಿಯವರು**, ೧೯೪೧, ಪು.೧೬೦

೪. ಲಕ್ಷ್ಮಣ್ ತೆಲಗಾವಿ(ಸಂ), ಸದಾಶಿವರವರ ಲೇಖನ, **ಚರಿತ್ರೆ ಅಧ್ಯಯನ**, **ಸಂಪುಟ ೧**, ೨೦೦೬, ಪು.೨೮

೫. ವೆಂಕಟರಾಮಯ್ಯ ಸಿ.ಕೆ., **ಪೂರ್ವೋಕ್ತ**, ಪು.೧೨೯

೬. ಲಕ್ಷ್ಮಣ್ ತೆಲಗಾವಿ(ಸಂ), **ಪೂರ್ವೋಕ್ತ**, ಪು.೨೮

೭. ಅದೇ, ಪು.೨೯

೮. ವೆಂಕಟರಾಮಯ್ಯ ಸಿ.ಕೆ., **ಪೂರ್ವೋಕ್ತ**, ಪು.೧೩೦

೯. ಅದೇ, ಪು.೩೨೪

೧೦. ಗಜಾನನ ಶರ್ಮ, **ಬೆಳಕಾಯಿತು ಕರ್ನಾಟಕ**, ೨೦೦೩, ಪು.೨೪

೧೧. ಬರಗೂರು ರಾಮಚಂದ್ರಪ್ಪ(ಪ್ರ.ಸಂ), **ಕರ್ನಾಟಕ ಸಂಗಾತಿ**, ೨೦೦೨, ಪು.೭೩೧

೧೨. ಗಜಾನನ ಶರ್ಮ, **ಪೂರ್ವೋಕ್ತ**, ಪು.೩೪

೧೩. ಅದೇ

೧೪. ಗೋಪಾಲಕೃಷ್ಣಯ್ಯ ಎಂ., **ಹಿಸ್ಟರಿ ಆಫ್ ದಿ ಕಾವೇರಿ ಪವರ್ ಸ್ಕೀಂ**, ೧೯೩೨, ಪು.೮೫

೧೫. ಅದೇ, ಪು.೮೬

೧೬. ಗಜಾನನ ಶರ್ಮ, **ಪೂರ್ವೋಕ್ತ**, ಪು.೩೫

೧೭. ಅದೇ, ಪು.೩೬

೧೮. ಗೋಪಾಲಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೮೯

೧೯. ಗಜಾನನ ಶರ್ಮ, ಪೂರ್ವೋಕ್ತ, ಪು.೩೭

೨೦. ಗೋಪಾಲ ಕೃಷ್ಣಯ್ಯ ಎಂ., ಪೂರ್ವೋಕ್ತ, ಪು.೮೯

೨೧. ಅದೇ, ಪು.೬೦

೨೨. ಬರಗೂರು ರಾಮಚಂದ್ರಪ್ಪ (ಪ್ರ.ಸಂ), ಪೂರ್ವೋಕ್ತ, ಪು.೭೩೧

೨೩. ಶಾಮರಾವ್ ಎಂ., ಮಾಡರ್ನ್ ಮೈಸೂರು, ಸಂಪುಟ.೨, ೧೯೩೬, ಪು.೧೮೨

೨೪. ಲಕ್ಷ್ಮಣ್ ತೆಲಗಾವಿ(ಸಂ), ಪೂರ್ವೋಕ್ತ, ಪು.೨೯

೨೫. ಬರಗೂರು ರಾಮಚಂದ್ರಪ್ಪ(ಪ್ರ.ಸಂ), ಪೂರ್ವೋಕ್ತ, ಪು.೭೩೨

೨೬. ಸುಂದರ ರಾವ್ ಬ.ನ., ಬೆಂಗಳೂರಿನ ಇತಿಹಾಸ, ೧೯೮೫, ಪು.೪೨೮

೨೭. ಹಯವದನರಾವ್ ಸಿ., ಮೈಸೂರು ಗೆಜೆಟಿಯರ್, ಸಂಪುಟ ೩, ಎಕನಾಮಿಕ, ೧೯೩೦, ಪು.೧೮೨

ಅಧ್ಯಾಯ ೫

ಯೋಜನೆಗೆ ದಿವಾನರುಗಳ ಕೊಡುಗೆ

೫.೧. ಕೆ.ಶೇಷಾದ್ರಿ ಅಯ್ಯರ್

೫.೨. ಸರ್.ಎಂ.ವಿಶ್ವೇಶ್ವರಯ್ಯ

೫.೩. ಮಿರ್ಜಾ ಇಸ್ಮಾಯಿಲ್

೫

ಯೋಜನೆಗೆ ದಿವಾನರುಗಳ ಕೊಡುಗೆ

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಪೂರ್ವದ ಆಡಳಿತದಲ್ಲಿ ರಾಜ್ಯಯಂತ್ರದ ಮುಖ್ಯ ಚಾಲಕರಾಗಿದ್ದವರು ದಿವಾನರು, ಅಂದರೆ ಮುಖ್ಯಮಂತ್ರಿಗಳು. ಯಾರ ಸಲಹೆಯನ್ನಾದರೂ, ಯಾರ ಆಲೋಚನೆಯನ್ನಾದರೂ ಕಾರ್ಯರೂಪಕ್ಕೆ ಬರುವುದು ದಿವಾನರ ಮೂಲಕ.[೧] ಮಹಾರಾಜರು ಮತ್ತು ಪ್ರಮುಖ ಸಭೆಗಳಲ್ಲಿ ಚರ್ಚೆಗೊಳಪಟ್ಟ ಪ್ರಗತಿಪರ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರ ದಿವಾನರದಾಗಿತ್ತು. ನಂತರ ಅವಧಿಯಲ್ಲಿ ಯಾರ ಸಲಹೆ ಸೂಚನೆಗಳಿಗೂ ಕಾದಿರದೆ ಸ್ವತಂತ್ರ್ಯ ಆಲೋಚನೆಯಿಂದ ಪ್ರಮುಖ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ರಾಜ್ಯದ ಆರ್ಥಿಕ ಪರಿಸ್ಥಿತಿಯ ಸುಧಾರಣೆಯ ಜವಾಬ್ದಾರಿ ಮತ್ತು ರಾಜ್ಯದ ಜನತೆಯ ಹಿತರಕ್ಷಣೆಯನ್ನು ಮಾಡುವ ಜವಾಬ್ದಾರಿ ದಿವಾನರದ್ದಾಗಿತ್ತು. ಅದರಂತೆ ೧೧ ದಿವಾನರು ಮೈಸೂರಿನ ಆಡಳಿತ ನಿರ್ವಹಿಸಿದ್ದಾರೆ. ೧೮೮೧ ರಿಂದ **೧೯೪೭ ರವರೆಗೆ ಆಡಳಿತ ನಿರ್ವಹಿಸಿದ ಪ್ರಮುಖ ದಿವಾನರುಗಳೆಂದರೆ**

೧. ಸಿ.ರಂಗಾಚಾಲು	೧೮೮೧-೧೮೮೩
೨. ಕೆ.ಶೇಷಾದ್ರಿ ಅಯ್ಯರ್	೧೮೮೩-೧೯೦೧
೩. ಪಿ.ಎನ್.ಕೃಷ್ಣಮೂರ್ತಿ	೧೯೦೧ - ೧೯೦೬
೪. ವಿ.ಪಿ.ಮಾಧವರಾವ್	೧೯೦೬-೧೯೦೯
೫. ಟಿ.ಆನಂದರಾವ್	೧೯೦೯ - ೧೯೧೨
೬. ಎಂ.ವಿಶ್ವೇಶ್ವರಯ್ಯ	೧೯೧೨ - ೧೯೧೮
೭. ಎಂ.ಕಾಂತರಾಜಅರಸು	೧೯೧೯ - ೧೯೨೨
೮. ಅಲ್ಬಿಯನ್ ಬ್ಯಾನರ್ಜಿ	೧೯೨೨ - ೧೯೨೬
೯. ಮಿರ್ಜಾ ಇಸ್ಮಾಯಿಲ್	೧೯೨೬ - ೧೯೪೧
೧೦. ಎನ್.ಮಾಧವರಾವ್	೧೯೪೧ - ೧೯೪೬
೧೧. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್	೧೯೪೬ - ೧೯೪೯

[illegible]

[illegible]

[illegible]

ಹಲವು ದಿವಾನರುಗಳು ಆಡಳಿತ ವಹಿಸಿಕೊಂಡರು ಸಹ ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಆಸಕ್ತಿ ವಹಿಸಿದವರು ಕೆಲವರು ಮಾತ್ರ. ಯೋಜನೆಯನ್ನು ವಿಸ್ತಾರಗೊಳಿಸಿ ಅದರ ಮಹತ್ವವನ್ನು ಇನಷ್ಟು ವಿಸ್ತರಣೆ ಮಾಡಲು ದಿವಾನರು ಹಲವು ಕ್ರಮಗಳನ್ನು ಕೈಗೊಂಡರು. ಯೋಜನೆಯ ಆರಂಭದ ಅವಧಿ, ಮಧ್ಯಾಂತರ ಅವಧಿ ಮತ್ತು ಅಂತಿಮ ಅವಧಿಯವರೆಗಿನ ವಿವಿಧ ಆಯಾಮಗಳಿಗೆ ಇವರ ಕೊಡುಗೆ ಅಪಾರ. ದಿವಾನರು ಆಡಳಿತದಲ್ಲಿ ವಸಾಹತು ವ್ಯವಸ್ಥೆಯ ಹಿತಾಸಕ್ತಿ ಮತ್ತು ಸಂಸ್ಥಾನದ ಹಿತಾಸಕ್ತಿಗಳನ್ನು ಪರಸ್ಪರ ಹೊಂದಾಣಿಕೆಯಿಂದ ಅನುಷ್ಠಾನಕ್ಕೆ ತರುವ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.[೨]

ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಆರಂಭದ ಅವಧಿಯಲ್ಲಿ ಕೆ.ಶೇಷಾದ್ರಿ ಅಯ್ಯರ್ ರವರು ನಂತರ ಯೋಜನೆಯ ವೇಗವನ್ನು ಇನ್ನಷ್ಟು ಹೆಚ್ಚಿಸುವಲ್ಲಿ ಎಂ.ವಿಶ್ವೇಶ್ವರಯ್ಯನವರು ಹಾಗೂ ಅಂತಿಮ ಅವಧಿಯಲ್ಲಿ ಯೋಜನೆಯನ್ನು ವಿಸ್ತೃತಗೊಳಿಸುವಲ್ಲಿ ಮಿರ್ಜಾ ಇಸ್ಮಾಯಿಲರ ಪಾತ್ರವು ಬಹುಮುಖ್ಯವಾಗಿದೆ. ಇವರ ಆಡಳಿತಾವಧಿಯಲ್ಲಿ ಯೋಜನೆಯ ಆರಂಭ, ಬೆಳವಣಿಯ ವಿವಿಧ ಆಯಾಮಗಳನ್ನು ಮುಂದಿನಂತೆ ಚರ್ಚಿಸಲಾಗಿದೆ.

೫.೧. ಕೆ.ಶೇಷಾದ್ರಿ ಅಯ್ಯರ್ ೧೮೮೩-೧೯೦೧

ಶಿವನಸಮುದ್ರ ಜಲವಿದ್ಯುತ್ ಯೋಜನೆಯು ೧೮೯೪ರಲ್ಲಿ ಪ್ರಸ್ತಾಪಕ್ಕೆ ಬಂದಾಗ ದಿವಾನರಾಗಿ ಆಡಳಿತ ನಿರ್ವಹಿಸುತ್ತಿದ್ದವರು ಶೇಷಾದ್ರಿ ಅಯ್ಯರ್‌ರವರು. ಪಾಶ್ಚಿಮಾತ್ಯ ದೇಶಗಳಲ್ಲಿನ ಅನೇಕ ಬದಲಾವಣೆಗಳನ್ನು ವಿದೇಶಿ ಪತ್ರಿಕೆಗಳ ಮುಖಾಂತರ ತಿಳಿದುಕೊಳ್ಳುತ್ತಿದ್ದರು. ೧೮೯೪ರಲ್ಲಿ ಚಾರಿಂಗ್ಟ್ ನ್ ಎಂಬ ಎಲೆಕ್ಟ್ರಿಕಲ್ ಇಂಜಿನಿಯರ್ ಕಾವೇರಿ ನದಿ ಜಲಪಾತದಿಂದ ವಿದ್ಯುತ್ತನ್ನು ಉತ್ಪಾದಿಸಬಹುದು ಎಂಬ ಪ್ರಸ್ತಾವನೆ ನೀಡಿದ್ದು, ಇವನಿಗೆ ಬೆನ್ನೆಲುಬಾಗಿ ನಿಂತ ಮೈಸೂರಿನ ರೆಸಿಡೆಂಟನಾದ ಹೆಂಡರ್ ಸನ್; ಶಿವನಸಮುದ್ರದಲ್ಲಿ ಉತ್ಪಾದಿಸಿದ ವಿದ್ಯುತ್ತನ್ನು ಬಹುದೂರದ ಪ್ರದೇಶಕ್ಕೆ ಕೊಂಡೊಯ್ಯಬಹುದು. ಅದರಂತೆ ಮುದ್ರಾಸಿನ ಹೋಮ್ಸ್ ಕೋಲಾರದ ಚಿನ್ನದ ಗಣಿಗಾರಿಕೆಗೆ ವಿದ್ಯುತ್ತನ್ನು ಪೂರೈಸಬಹುದೆಂದು ಸಲಹೆ ನೀಡಿ, ಉತ್ಪಾದಿಸಿದ ವಿದ್ಯುತ್ತನ್ನು ಕಾರ್ಖಾನೆಗಳಿಗೆ, ಮಿಲ್ಲುಗಳಿಗೆ, ಗಣಿಗಳಿಗೆ ಯಂತ್ರಗಳ ಚಾಲನೆಗೆ ಮುಂತಾದ ಚಟುವಟಿಕೆಗಳಿಗೂ ಸಹ ಬಳಸಬಹುದೆಂದು ಆಲೋಚಿಸಿದರು. ೧೮೮೬-೮೭ರಲ್ಲಿ ಕೋಲಾರದ ಚಿನ್ನದ ಗಣೆಯಿಂದ ಮೈಸೂರು ಸಂಸ್ಥಾನಕ್ಕೆ ಬರುತ್ತಿದ್ದ ರಾಜ್ಯಾದಾಯ ಸುಮಾರು ೪೭.೦೦೦ ರೂಪಾಯಿಗಳು[೩] ೧೯೦೦ರ ವೇಳೆಗೆ ಸುಮಾರು ೭ ಲಕ್ಷರೂಪಾಯಿಗಳಾಗಿತ್ತು. ದಿವಾನ್ ಶೇಷಾದ್ರಿ ಅಯ್ಯರ್‌ರವರು ಮೊದಲಿನಿಂದಲೂ ಈ ಯೋಜನೆಯ ಬಗೆಗೆ ಆಸಕ್ತಿ ಹೊಂದಿದ್ದರು. ಪ್ರಮುಖ ಬೆಳವಣಿಗೆಗಳನ್ನು ಗಮನಿಸುತ್ತಿದ್ದರು. ಯೋಜನೆಯ ಪ್ರಾಮುಖ್ಯತೆಯನ್ನು ಮನಗಂಡು, ಅದಕ್ಕೆ

ಸಂಬಂಧಪಟ್ಟ ಪೂರ್ಣ ಮಾಹಿತಿ ಪಡೆದು ಬರಲು ೧೮೯೯ರಲ್ಲಿ ಕ್ಯಾಪ್ಟನ್ ಲಾಟ್ ಬಿನೀಯರ್ ಎಂಬಾತನನ್ನು ಇಂಗ್ಲೆಂಡ್, ಅಮೇರಿಕಾ ದೇಶಗಳಿಗೆ ಕಳುಹಿಸಿದರು.[೪] ಈ ಅವಧಿಯಲ್ಲಿ ಶೇಷಾದ್ರಿ ಅಯ್ಯರ್‌ರವರು ಕಾವೇರಿ ಜಲಪಾತದ ನೀರನ್ನು ಬಳಸಿಕೊಂಡು ವಿದ್ಯುತ್ತನ್ನು ಉತ್ಪಾದಿಸಿ, ಕೈಗಾರಿಕೆ ಮತ್ತು ಗಣಿಗಾರಿಕೆಗಳಂತಹ ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಂಡರೆ ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳು ವೃದ್ಧಿಯಾಗಿ, ಆದಾಯದ ಮೂಲವಾಗಿ, ಯೋಜನೆಯ ಮಹತ್ವವನ್ನು ಮನಗಂಡು ಈ ಯೋಜನೆಯನ್ನು ಸರ್ಕಾರದ ಮುಖಾಂತರ ಆರಂಭಿಸಲು ಮುಂದಾದರು. ಇಲ್ಲಿ ಶೇಷಾದ್ರಿ ಅಯ್ಯರ್‌ರವರ, ದೂರದೃಷ್ಟಿ, ಮುಂಜಾಗ್ರತೆಯ ಕ್ರಮಗಳು ತಿಳಿದುಬರುತ್ತದೆ.

ಶೇಷಾದ್ರಿ ಅಯ್ಯರ್‌ರವರು ೧೮೯೯ರ ಜುಲೈನಲ್ಲಿ ಮದ್ರಾಸ್‌ನ ಕಂದಾಯ ಇಲಾಖೆಯ ಸೆಕ್ರೆಟರಿಗೆ ಅಧಿಕೃತ ಮನವಿಯನ್ನೊಳಗೊಂಡ ಪತ್ರವನ್ನು ಬರೆದು ಕಾವೇರಿ ಜಲಪಾತದ ಬಳಿ ಉತ್ಪಾದಿಸುವ ಎಲ್ಲಾ ವಿದ್ಯುತ್ತನ್ನು ಬಳಸಿಕೊಳ್ಳಲು ಮದ್ರಾಸ್ ಸರ್ಕಾರ ಅನುಮತಿ ನೀಡಬೇಕೆಂದು ಕೇಳಿಕೊಂಡರು. ಅದರಂತೆ ಹಲವು ಮಾತುಕತೆ, ಒಪ್ಪಂದಗಳ ನಂತರ ಒಪ್ಪಿಗೆಯನ್ನು ಪಡೆಯಲಾಯಿತು. ಹಾಗೆಯೇ ಮೈಸೂರು ಸರ್ಕಾರವು ಆಂತರಿಕ ವಿರೋಧ ಮತ್ತು ಯೋಜನೆ ಆರಂಭಕ್ಕೆ ತಡೆಗಳನ್ನು ಎದುರಿಸಬೇಕಾಯಿತು. ಶೇಷಾದ್ರಿ ಅಯ್ಯರ್‌ರವರನ್ನು ವೈಯಕ್ತಿಕವಾಗಿ ಹಾಗೂ ಅವರ ಆಡಳಿತವನ್ನು ಪ್ರಶ್ನೆ ಮಾಡುತ್ತಿದ್ದ ಗುಂಪಿನಿಂದ ಬಂದಿತು. ವಿರೋಧಿ ಗುಂಪು ಈ ಯೋಜನೆಯನ್ನು ಕೆ.ಶೇಷಾದ್ರಿ ಅಯ್ಯರ್‌ರವರ ಶುಷ್ಕ ಪ್ರತಿಷ್ಠೆಯ ವೃಥಾ ಭ್ರಾಂತಿ ಎಂದು ಅವಹೇಳನ ಮಾಡಿತು.[೫] ಅಲ್ಲದೇ ಈ ಯೋಜನೆಯು ವಿಫಲಗೊಂಡು, ಮೈಸೂರು ರಾಜ್ಯದ ಬೊಕ್ಕಸದ ಹಣವನ್ನು ಬಂಡವಾಳವಾಗಿ ತೊಗಿಸುವುದು ಹೊಳೆಯಲ್ಲಿ ಮುಳಿಗಿಸಿದಂತೆ, ಒಬ್ಬರಂತೂ ಕೆ.ಶೇಷಾದ್ರಿ ಅಯ್ಯರ್‌ರವರು ತಮ್ಮ ಸ್ವಂತ ಹಣವನ್ನು ಬೇಕಾದರೆ ಲಕ್ಷಗಟ್ಟಲೆ ಅವಶ್ಯವಾಗಿ ಹಾಳು ಮಾಡಬಹುದೆಂದು, ಸಂಸ್ಥಾನದ ಹಣವನ್ನು ಪೋಲು ಮಾಡುವುದು ಉಚಿತವಲ್ಲವೆಂದು ಕಂಠೋಕ್ತವಾಗಿ ಹೇಳಿಬಿಟ್ಟರು.[೬] ಆ ಸಂದರ್ಭದಲ್ಲಿ ರೀಜೆಂಟರಾಗಿದ್ದ ವಾಣೀವಿಲಾಸ ಸನ್ನಿಧಾನದವರು ಪ್ರಮುಖರ ವಿರೋಧದ ಹಿನ್ನೆಲೆಯಲ್ಲಿ ಹಾಗೂ ಅಪಾರ ಬಂಡವಾಳವನ್ನು ತೊಡಗಿಸಬೇಕಿದ್ದ ಒತ್ತಡದಲ್ಲಿದ್ದಾಗ ೧೬ ವರ್ಷದ ಬಾಲಕ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ಅನಿರೀಕ್ಷಿತವಾಗಿ ಈ ಯೋಜನೆಗೆ ಪ್ರೋತ್ಸಾಹ ದೊರಕಿತು. ನಂತರ ಕೆ.ಶೇಷಾದ್ರಿ ಅಯ್ಯರ್‌ರವರು ದಿನಾಂಕ ೩೧-೮-೧೯೦೦ರಂದು ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ವಾಣೀವಿಲಾಸ ಸನ್ನಿಧಿಯಿಂದ ಅಂಕಿತ ಪಡೆದು, ಯೋಜನೆಯ ಅನುಷ್ಠಾನಕ್ಕೆ ಪ್ರಮುಖ ಪಾತ್ರವಹಿಸಿದರು.

ಈ ಯೋಜನೆ ಪ್ರಾರಂಭದಿಂದಲೂ ಅದರ ಅನುಷ್ಠಾನಕ್ಕೆ ತೀವ್ರ ಆಸಕ್ತಿ ತೋರುತ್ತಾ, ಯೋಜನೆಯ ಸಮರ್ಥ ಮುನ್ನಡೆಗಾಗಿ ಶ್ರಮಿಸಿದ ದಿವಾನ್ ಶೇಷಾದ್ರಿ ಅಯ್ಯರ್ ರವರು, ಯೋಜನೆಯ ಕಾರ್ಯಾರಂಭ ಮಾಡುವ ಮೊದಲೇ ವಿಧಿವಶರಾದರು. ೧೩-೦೯-೧೯೦೧ ರಂದು ನಿಧನರಾದ ಶ್ರೀ

ಶೇಷಾದ್ರಿರವರ ಹೆಸರನ್ನೇ ವಿದ್ಯಾದಾಗರಕ್ಕೆ ಇಡುವ ಮೂಲಕ ಶ್ರೀಮನ್ಮಹಾರಾಜರು ಸೇರಿ ಎಲ್ಲರೂ ಅವರ ಮಹಾನ್ ಕಾರ್ಯಕ್ಕೆ ಕೃತಜ್ಞತೆ ಅರ್ಪಿಸಿದರು.[೭]

ವಿಜ್ಞಾನವು ಅಷ್ಟಾಗಿ ಮುಂದುವರಿಯದಿದ್ದ ಕಾಲದಲ್ಲಿ - ಪ್ರಗತಿಪರವಲ್ಲದ ಪರಕೀಯ ಸರಕಾರದ ಪ್ರಾಬಲ್ಯ ಅತಿಶಯವಾಗಿದ್ದ ಕಾಲದಲ್ಲಿ - ಈ ಬೃಹದ್ಯೋಜನೆಯನ್ನು ಸಾಧಿಸಿದ್ದು, ಶೇಷಾದ್ರಿ ಅಯ್ಯರ್ ರವರ ಮಹತ್ವ.[೮] ವಿದ್ಯುಚ್ಛಕ್ತಿ ಯೋಜನೆಯ ಪೂರ್ವಾಪರಗಳನ್ನು ಸಮಾಲೋಚಿಸಿ ಅದನ್ನು ಕಾರ್ಯಗತ ಮಾಡುವ ಹವಣಿಕೆ ನಡೆಸಿದ್ದು, ಶೇಷಾದ್ರಿ ಅಯ್ಯರ್‌ರವರ ಪ್ರಜಾನುಕೂಲ ಚಿಂತನೆಗೆ ನಿದರ್ಶನ.

೧೦ ಜುಲೈ, ೧೯೦೨ರ ವೃತ್ತಾಂತ ಪತ್ರಿಕೆಯ ವರದಿ

ಮೈಸೂರು ಸಂಸ್ಥಾನದಲ್ಲಿ ಈ ಅದ್ಭುತ ಶಕ್ತಿಯುಳ್ಳ ಕಾವೇರಿ ಜಲಪಾತವಿರುವುದು ಇಂಥಾ ಶಕ್ತಿಯು ಈಗ ಮನುಷ್ಯನಿಗೆ ಪ್ರಯೋಜನವಾಗುವಂಥ ರೀತಿಯಲ್ಲಿ ಉಪಯೋಗ ಮಾಡಲ್ಪಟ್ಟಿದೆ. ಇದನ್ನು ನೋಡಲಾಗಿ ಸಕಲ ಪ್ರಜೆಗಳೂ ಈಗಿನ ಮೈಸೂರು ಗವರ್ನಮೆಂಟ್‌ನವರೂ, ಎಲ್ಲಾ ಸೇರಿ ಲೇಟ್ ದಿವಾನ್ ಶೇಷಾದ್ರಿ ಅಯ್ಯರ್‌ರವರಿಗೆ ಮನಃಪೂರ್ವಕವಾಗಿಯೂ ಕೃತಜ್ಞರಾಗಿರಬೇಕು. ಯಾಕೆಂದರೆ ಅವರ ಧೈರ್ಯವೂ ಸಾಮರ್ಥ್ಯವೂ ಮುಂದಾಲೋಚನೆಯ ಆದಿಯಲ್ಲಿ ಕಂಡುಬಂದ ಆಚರಣೆಗಳನ್ನು ವಿರೋಧಾಭಿಪ್ರಾಯಗಳನ್ನು ಜೈಸಿ ಈ ಮಹಾಕಾರ್ಯವನ್ನು ಪ್ರಾರಂಭಿಸಿದರು. ಇದಕ್ಕಾಗಿ ಸಕಲರೂ ಅವರನ್ನು ಕೊಂಡಾಡತಕ್ಕದಾಗಿದೆ.

೫.೨. ಸರ್.ಎಂ.ವಿಶ್ವೇಶ್ವರಯ್ಯ ೧೯೧೨-೧೯೧೮

ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದಿಸಲು ನೀರನ್ನು ಒದಗಿಸುವ ಉದ್ದೇಶದಿಂದ ೧೯೦೨ರಿಂದ ೧೯೦೮ರವರೆಗೆ ವಿವಿಧ ಅಡ್ಡಗಟ್ಟೆಗಳನ್ನು ಮರಳಿನ ಚೀಲಗಳನ್ನು ಅಡ್ಡವಾಗಿಟ್ಟು ಜಲಧಾರೆಯ ಹರಿವ ಗತಿ ಮತ್ತು ವೇಗವನ್ನು ನಿಯಂತ್ರಿಸಲಾಗುತ್ತಿತ್ತು. ಆದರೂ ಒದಗಿಸಲಾದ ನೀರಿನ ಪ್ರಮಾಣದಲ್ಲಿ ಏಕರೂಪತೆಯಿಲ್ಲದೆ ಏರಿಳಿತವಿದ್ದೇ ಇತ್ತು. ಇದರ ಪರಿಣಾಮವಾಗಿ ಸರಕಾರ ೧೦ ಸಾವಿರ ಅಶ್ವಶಕ್ತಿಯ ವಿದ್ಯುತ್ ಉತ್ಪಾದನೆಯ ಭರವಸೆ ನೀಡಿದ್ದರೂ ಅಷ್ಟನ್ನು ಪೂರೈಸುವುದು ಅಸಾಧ್ಯವಾಗಿತ್ತು.[೯] ಕೋಲಾರದ ಚಿನ್ನದ ಗಣಿಗಳಿಗೆ ಕನಿಷ್ಠ ೩೨ ಸಾವಿರ ಅಶ್ವಶಕ್ತಿ ವಿದ್ಯುತ್ ಬೇಕಾಗಿತ್ತು.

ಬೇಸಿಗೆ ಕಾಲದಲ್ಲಿ ಶಿವನಸಮುದ್ರದಲ್ಲಿ ಕಾವೇರಿ ನದಿಯ ಹರಿವು ತೀವ್ರವಾಗಿ ಕುಸಿಯುತ್ತಿದ್ದ ಪರಿಣಾಮ ನಿಗದಿತ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಸಾಗದೆ ಅದರಲ್ಲಿ ವ್ಯತ್ಯಯವಾಗುತ್ತಿತ್ತು.[೧೦] ೧೯೦೮ರ ವೇಳೆಗಾಗಲೇ ಬೆಂಗಳೂರು, ಮೈಸೂರು ನಗರಗಳಲ್ಲಿ ವಿದ್ಯುಚ್ಛಕ್ತಿ ಬೇಡಿಕೆ ಅಧಿಕಗೊಂಡಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟುವ ವಿಚಾರ, ಯೋಜನೆಗೆ ಹೆಚ್ಚು

ಆತುರವನ್ನು ತಂದಿತು. ೧೯೦೯ರ ನವೆಂಬರ್ ತಿಂಗಳಿನಲ್ಲಿ ಮೈಸೂರಿನ ಮುಖ್ಯ ಎಂಜಿನಿಯರ್ ಆಗಿ ವಿಶ್ವೇಶ್ವರಯ್ಯನವರು ಸೇವೆಗೆ ಸೇರಿದರು. ಕಾವೇರಿ ಕಣಿವೆಯಲ್ಲಿ ವಿಸ್ತೃತವಾದ ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆ ಎರಡು ಉದ್ದೇಶದಿಂದ ಕೃಷ್ಣರಾಜಸಾಗರ ಜಲಾಶಯ ನಿರ್ಮಾಣ ಕಾರ್ಯವನ್ನು ಕೈಗೊಂಡರು. ಈ ವಿಷಯಕ್ಕೆ ಸಂಬಂಧಿಸಿದಂತೆ ಗಣಿ ಕಂಪನಿ ಮಾಲೀಕರಾದ ಜಾನ್ ಟೇಯ್ಲರ್ ಅಂಡ್ ಸನ್ಸ್ ಮತ್ತು ವಿದ್ಯುತ್ ಇಲಾಖೆಯ ಮುಖ್ಯ ಇಂಜಿನಿಯರ್ ಆಗಿದ್ದ ಹೆಚ್.ಬಿ.ಗಿಬ್ಸ್‌ರೊಂದಿಗೆ ವಿಶ್ವೇಶ್ವರಯ್ಯನವರು ಚರ್ಚಿಸಿದರು.[೧೧] ಈ ಚರ್ಚೆಯ ನಂತರ ಜಲಾಶಯದ ಪ್ರಮಾಣ, ಗಾತ್ರ ಮತ್ತು ಅದರ ನಿರ್ಮಾಣದ ಹಂತಗಳ ಕುರಿತು ನಿರ್ಧರಿಸುವಾಗ ರಷ್ಯಾ, ಅಮೇರಿಕಾ, ಪ್ರಾನ್ಸ್ ಮತ್ತು ಜರ್ಮನಿಗಳಲ್ಲಿ ರೂಢಿಯಲ್ಲಿರುವ ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆ ವಿವಿದ್ದೋದ್ದೇಶಗಳ ಹಿನ್ನೆಲೆಯಾಗಿ ಕಾವೇರಿ ಅಣೆಕಣ್ಣೆಯನ್ನು ನಿರ್ಮಿಸಲು ಮುಂದಾದರು.[೧೨]

೧೨೪ ಅಡಿ ಎತ್ತರ, ೪೮.೦೦೦ ದಶಲಕ್ಷ ಘನ ಅಡಿ(೫೮ ಟಿ.ಎಂ.ಸಿ) ನೀರನ್ನು ಸಂಗ್ರಹಿಸಬಲ್ಲ ಗಾರೆ ಅಣೆಕಟ್ಟೆಗೆ ವಿನ್ಯಾಸವನ್ನು ಸಿದ್ಧಪಡಿಸಲಾಯಿತು. ಕಾಲಾಂತರದಲ್ಲಿ ಇದನ್ನು ೧,೫೦,೦೦೦ ಎಕರೆ ವಿಸ್ತೀರ್ಣದ ಭೂಮಿಗೆ ನೀರೋದಗಿಸಲು ಮತ್ತು ಸುಮಾರು ೮೦,೦೦೦ ಹೆಚ್.ಪಿ.ವಿದ್ಯುತ್ ಉತ್ಪಾದನೆಗೆ ಬಳಸಬಹುದೆಂದು ನಿರೀಕ್ಷಿಸಲಾಯ್ತು. ಕೋಲಾರದ ಚಿನ್ನದ ಗಣಿಗೆ ಮಾತ್ರವಲ್ಲದೆ ಕಣಿವೆಯ ಬೇರೆ ಪಟ್ಟಣ ಮತ್ತು ನಗರಗಳ ದೀಪ ಮತ್ತು ಕೈಗಾರಿಕೆಗಳ ಬಳಕೆಗಾಗಿಯೂ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗುತ್ತಿತ್ತು.

ಜಲಾಶಯ ನಿರ್ಮಾಣ ಪೂರ್ವದಲ್ಲಿ ಒಟ್ಟು ವಿದ್ಯುಚ್ಛಕ್ತಿಯ ಉತ್ಪಾದನೆ ೧೩,೦೦೦ ಹೆಚ್.ಪಿ.ಗಳಷ್ಟಿತ್ತು. ಅದರಲ್ಲಿ ಸುಮಾರು ೧೧,೦೦೦ ಹೆಚ್.ಪಿ.ಯಷ್ಟು ವಿದ್ಯುತ್ತನ್ನು ಕೋಲಾರದ ಚಿನ್ನದ ಗಣಿಗೆ ನೀಡಲಾಗುತ್ತಿತ್ತು.[೧೩] ನಂತರ ಮುಂದಿನ ಐದು ವರ್ಷದಲ್ಲಿ ತಮಗೆ ಹೊಸದಾಗಿ ೫೦೦೦ ಹೆಚ್.ಪಿ.ವಿದ್ಯುತ್ ಬೇಕೆಂದೂ ನಂತರದ ದಿನಗಳಲ್ಲಿ ತಮ್ಮ ಕೋರಿಕೆಯನ್ನು ಆಧರಿಸಿ ೧೦,೦೦೦ ಹೆಚ್.ಪಿ.ಯಷ್ಟು ಅಧಿಕ ವಿದ್ಯುತ್ ತಮಗೆ ಬೇಕಾಗಬಹುದೆಂದು ಕೋಲಾರದ ಗಣಿಮಾಲೀಕರು ಕೋರಿಕೆ ಸಲ್ಲಿಸಿದ್ದರು.[೧೪] ಇದುವರೆಗೂ ಉತ್ಪಾದಿಸಲಾಗುತ್ತಿರುವ ವಿದ್ಯುಚ್ಛಕ್ತಿ ಪ್ರಮಾಣವನ್ನು ಸೇರಿಸಿ ಶಿವನ ಸಮುದ್ರದಲ್ಲಿ ೨೦,೦೦೦ ಹೆಚ್.ಪಿ. ವಿದ್ಯುತ್ ಉತ್ಪಾದಿಸಲು ಅಗತ್ಯವಾಗುವಷ್ಟು ನೀರನ್ನು ಪ್ರಥಮ ಹಂತದಲ್ಲಿ ನೀಡಬಹುದೆಂದು ನಿರ್ಧರಿಸಲಾಯಿತು.[೧೫]

ಜಲಾಶಯವನ್ನು ನಿರ್ಮಿಸಲು ವಿನ್ಯಾಸಗೊಳಿಸಿದ ಗಾರೆ ಅಣೆಕಣ್ಣೆಯು ೮೬೦೦ ಅಡಿ ಉದ್ದ, ನದಿಯ ಮಟ್ಟದಿಂದ ೧೩೦ ಅಡಿ ಎತ್ತರ, ೧೪೦ ಅಡಿ ತಳಪಾಯವೆಂದು, ಜಲಾಶಯದ ಒಟ್ಟು ಜಲಾಶಯನ ಪ್ರದೇಶ ೪೧೦೦ ಚದುರ ಮೈಲುಗಳೆಂದೂ ವಾರ್ಷಿಕ ಸರಾಸರಿ ಹರಿವು ೨,೨೦,೦೦೦ ದಶಲಕ್ಷ ಘನ ಅಡಿಗಳೆಂದು ಗುರುತಿಸಲಾಯಿತು.

ಈ ಯೋಜನೆಯ ಮೊದಲ ಅಂದಾಜು ಪಟ್ಟಿಯ ಪ್ರಕಾರ ಜಲಾಶಯ ನಿರ್ಮಾಣ ಯೋಜನೆಯ ಒಟ್ಟು ವೆಚ್ಚ, ೨೫೩ ಲಕ್ಷ ರೂಪಾಯಿಗಳಾಗಿತ್ತು. (ಆ ಸಂದರ್ಭದಲ್ಲಿ ರಾಜ್ಯದ ಒಟ್ಟಾರೆ ಆದಾಯ ೨೨೩ ಲಕ್ಷ ರೂಪಾಯಿಗಳು)[೧೬] ಆಗ ಹಣಕಾಸು ಇಲಾಖೆಯು ಯೋಜನೆಗೆ ಹಿಂದೇಟು ಹಾಕಿತು. ನಂತರ ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನೀರಿನ ಹರಿವಿಗೆ ಕ್ರಮಗೊಂಡು ೧೦,೦೦೦ ಹೆಚ್.ಪಿ. ಅವಶ್ಯಕತೆಯ ವಿದ್ಯುತ್ ಪೂರೈಸಲು ತಿಳಿಸಿತು. ಆಗ ವಿಶ್ವೇಶ್ವರಯ್ಯನವರು ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರಿಂದ ಹೆಚ್ಚಿನ ಆದಾಯ ನಿರೀಕ್ಷಿಸಬಹುದೆಂದು ತಿಳಿಸಿದರು. ಅದರಂತೆ ಜಲಾಶಯ ನಿರ್ಮಾಣದಿಂದ ಆಗುವಂತಹ ಲಾಭಗಳನ್ನು ವಿವರಿಸಿದರು.[೧೭]

ನಂತರ ಅವಧಿಯಲ್ಲಿ ಯೋಜನೆ ಯಾವುದೇ ತಿದ್ದುಪಡಿಗೆ ಒಳಪಡದೇ ಚಾಚೂ ತಪ್ಪದಂತೆ ಸಂಪೂರ್ಣವಾಗಿ ಅನುಮೋದಿಸಲ್ಪಟ್ಟಿತು. ನಂತರ ಕಾವೇರಿ ಜಲಾಶಯ ೧೯೧೫ರ ಜುಲೈ ಒಂದರ ಹೊತ್ತಿಗೆ ಕಾಲಮಿತಿಯಲ್ಲಿ ಜಲಾಶಯದ ನಿರ್ಮಾಣವು ಮುಗಿದು, ವಿದ್ಯುದಾಗರಕ್ಕೆ ನೀರು ಹರಿದು ಕೋಲಾರದ ಚಿನ್ನದ ಗಣಿಯವರ ಕೋರಿಕೆಯ ವಿದ್ಯುತ್ ತಲುಪಿದಾಗ ಕಂಪನಿಯವರು ಸಂತೃಪ್ತಿ ವ್ಯಕ್ತಪಡಿಸಿದರು ಮತ್ತು ಈ ಕುರಿತು ಮಹಾರಾಜರಿಗೆ ಕೃತಜ್ಞತೆ ಅರ್ಪಿಸಿದರು.[೧೮]

ಈ ಯೋಜನೆಯು ನಿರ್ವಹಿಸಲಿರುವ ಕಾರ್ಯಗಳು

- ಈಗಾಗಲೇ, ಒಟ್ಟು ಒಂದು ಲಕ್ಷ ಎಕರೆ ವಿಸ್ತೀರ್ಣದ ನೆಲವನ್ನು ನೀರಾವರಿಗೆ ಒಳಪಡಿಸಿ ಇನ್ನೂ ಹೆಚ್ಚಿನ ವಿಸ್ತೀರ್ಣದ ನೆಲವನ್ನು ಮುಂದೆ ವಿಸ್ತರಿಸುವುದು.
- ಕೋಲಾರದ ಚಿನ್ನದ ಗಣಿಗಳಿಗೆ ವಿದ್ಯುತ್ ವಿತರಿಸುವುದು.
- ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಬೀದಿದೀಪಗಳು ಮತ್ತು ವಿದ್ಯುಚ್ಛಕ್ತಿ ಸಂಪರ್ಕವನ್ನೊದಗಿಸುವ ಜೊತೆಗೆ ರಾಜ್ಯದ ಹಲವಾರು ಹಳ್ಳಿ-ಪಟ್ಟಣಗಳಿಗೆ ವಿದ್ಯುತ್ ಒದಗಿಸುವುದು.
- ಕೈಗಾರಿಕೆಗಳಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡುವುದು.

ಈ ಯೋಜನೆಗಾಗಿ ಹೂಡಲಾದ ಒಟ್ಟು ಬಂಡವಾಳ ಸುಮಾರು ಹತ್ತುವರೆ ಕೋಟಿ ರೂಪಾಯಿಗಳು. ಯೋಜನೆಯಿಂದ ಜನಸಾಮಾನ್ಯರಿಗೆ ದಕ್ಕಿದ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರತಿಫಲ ವಾರ್ಷಿಕ ಸುಮಾರು ೧೫ ಕೋಟಿಗಳು.[೧೯] ಸರ್ಕಾರ ಈ ಯೋಜನೆಯಿಂದ ಪಡೆಯುತ್ತಿರುವ ಪ್ರತಿಫಲ ವಾರ್ಷಿಕವಾಗಿ ಒಟ್ಟು ಒಂದೂವರೆ ಕೋಟಿ ರೂಪಾಯಿಗಳು.

೫.೩. ಮಿರ್ಜಾ ಇಸ್ಮಾಯಿಲ್ ೧೯೨೬-೧೯೪೧

೧೯೨೬ ಮೇ ತಿಂಗಳಿನಲ್ಲಿ ಸರ್.ಮಿರ್ಜಾ ಇಸ್ಮಾಯಿಲ್‌ರವರು ಮೈಸೂರು ಸರ್ಕಾರದ ದಿವಾನರಾದರು. ೧೯೨೭ರಲ್ಲಿ ಶಿವನ ಸಮುದ್ರದ ಏಳನೇ ವಿಸ್ತರಣೆಯು ಮುಗಿದ ನಿಮಿತ್ತ ವಿದ್ಯುತ್ ಉತ್ಪಾದನೆ

ಅಧಿಕವಾಯಿತು. ೧೯೧೫-೧೬ರಲ್ಲಿ ೨೪೨೦ ಗ್ರಾಹಕರನ್ನು ಹೊಂದಿದ್ದ ವಿದ್ಯುತ್ ಇಲಾಖೆ ೯,೦೧,೯೨,೧೦೦ ಯೂನಿಟ್ ವಿದ್ಯುತ್ತನ್ನು ಗ್ರಾಹಕರಿಗೆ ಒದಗಿಸಿತ್ತು. ಮುಂದಿನ ಹತ್ತು ವರ್ಷಗಳಲ್ಲಿ ಅಂದರೆ ೧೯೨೫ರ ಹೊತ್ತಿಗೆ ಗ್ರಾಹಕರ ಸಂಖ್ಯೆ ೯೭೪೦ಕ್ಕೆ ಏರಿ, ೧೫,೩೨,೧೪,೦೦೦ ಯೂನಿಟ್ಟು ವಿದ್ಯುತ್ ಗ್ರಾಹಕರಿಗೆ ತಲುಪಿತು.[೨೦]

ಮಿರ್ಜಾ ಇಸ್ಮಾಯಿಲರು ತಮ್ಮ ಅಧಿಕಾರವಧಿಯಲ್ಲಿ ವಿದ್ಯುತ್ತನ್ನು ಕೇವಲ ಬೆಂಗಳೂರು, ಮೈಸೂರು, ಕೋಲಾರಗಳಿಗೆ ಸೀಮಿತಗೊಳಿಸದೇ ಇತರ ಸಣ್ಣ ಪಟ್ಟಣಗಳಿಗೂ ವಿದ್ಯುತ್ ಒದಗಿಸುವ ಪ್ರಸ್ತಾಪವನ್ನು ವಿದ್ಯುತ್ ಇಲಾಖೆಯ ಮುಂದಿಟ್ಟರು.[೨೧] ಅದರಂತೆ ವಿದ್ಯುತ್ ಸರಬರಾಜನ್ನು ಪ್ರಮುಖ ಪಟ್ಟಣಗಳಿಗೆ ವಿಸ್ತರಿಸಲಾಯಿತು. ಮೊಟ್ಟ ಮೊದಲ ವಿದ್ಯುತ್ ಸರಬರಾಜು ಪಡೆದ ಪಟ್ಟಣವೆಂದರೆ ೧೯೨೬ರಲ್ಲಿ ಬೌರಿಂಗ್ ಪೇಟೆ(ಪ್ರಸ್ತುತ ಬಂಗಾರಪೇಟೆ), ನಂತರ ಚನ್ನಪಟ್ಟಣ, ಕ್ಲೋಸ್ ಪೇಟೆ(ಪ್ರಸ್ತುತ ರಾಮನಗರ), ಮಂಡ್ಯ, ಮದ್ದೂರು ಮುಂತಾದ ಹಲವು ಪಟ್ಟಣಗಳು ಒಂದಾದ ಮೇಲೊಂದರಂತೆ ವಿದ್ಯುತ್ ಸೌಲಭ್ಯ ಪಡೆದವು.[೨೨]

೧೯೩೧ರ ವೇಳೆಗೆ ಒಟ್ಟು ೧೭ ಪಟ್ಟಣಗಳಲ್ಲಿದ್ದ ವಿದ್ಯುತ್ ಸಂಪರ್ಕ ಪಡೆದ ಗ್ರಾಹಕರ ಸಂಖ್ಯೆ ೧೩೨೨, ಪಟ್ಟಣಗಳಲ್ಲಿ ಸುಮಾರು ೮೭೦೦ ಬೀದಿ ದೀಪಗಳು, ೧೮೩೬ ಅಲಂಕಾರಿಕ ದೀಪಗಳು ಇದ್ದವು. ಗಣಿಗಾರಿಕೆ ಕಂಪನಿ ೧೦,೨೨,೪೩,೮೦೮ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಬಳಸಿದರೆ, ಇತರ ಗ್ರಾಹಕರು ಸುಮಾರು ೪,೦೩,೬೪,೭೬೩ ಯೂನಿಟ್‌ಗಳನ್ನು ಬಳಸಿದ್ದರು.[೨೩]

ಈ ಸಂದರ್ಭದಲ್ಲಿ ಸರ್ಕಾರವು ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ವಿದ್ಯುತ್ತಿನ ಬೆಲೆಯನ್ನು ಕಡಿಮೆ ಮಾಡಿತು. ಅದು ಪವರ್ ಗ್ರಾಹಕರಿಗೆ ಪ್ರತಿ ಯೂನಿಟ್ಟಿಗೇ ಒಂದು ಆಣೆಗೆ ಇಳಿಸಿತು. ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ವಿದ್ಯುತ್ ಬಳಕೆಗೆ ಪ್ರತಿ ಯೂನಿಟಿಗೆ ನಾಲ್ಕಾಣೆಯಿಂದ ಮೂರಾಣೆಗೆ ಇಳಿಸಲಾಯಿತು.

ಮಿರ್ಜಾ ಇಸ್ಮಾಯಿಲರ ಆಡಳಿತಾವಧಿಯ ಮತ್ತೊಂದು ಮಹತ್ವಪೂರ್ಣ ಯೋಜನೆಯೆಂದರೆ ಕುಡಿಯುವ ನೀರಿಗೆ ಮತ್ತು ಕೃಷಿಗೆ ನೀರು ಒದಗಿಸಲು ಪಂಪ್‌ಸೆಟ್‌ಗಳ ಬಳಕೆಯನ್ನು ಗ್ರಾಹಕರಲ್ಲಿ ಅರಿವು ಮೂಡಿಸಿದ್ದು, ೧೯೧೮ರಲ್ಲಿ ಮೊದಲ ಬಾರಿ ವಿದ್ಯುತ್ ಪಂಪಿನ ಪ್ರಾತ್ಯಕ್ಷತೆಯನ್ನು ಮೈಸೂರು ಸರ್ಕಾರದವರು ಕನಕನಹಳ್ಳಿಯಲ್ಲಿ ರೈತರಿಗೆ ಮತ್ತು ವಿದ್ಯುತ್ ಗ್ರಾಹಕರಿಗೆ ನೀಡಲಾಗಿತ್ತಾದರೂ ಅದು ಅಷ್ಟಾಗಿ ಯಶಸ್ವಿಗೊಳ್ಳದೇ, ಅದು ೧೯೨೦ರ ಸಂದರ್ಭದಲ್ಲಿ ಅದರ ಅಗತ್ಯತೆ ಹೆಚ್ಚಾಯಿತು. ೧೯೧೮ರ ಪ್ರತಿಫಲವನ್ನು ೧೯೩೦ರ ಸಂದರ್ಭದಲ್ಲಿ ಪಡೆಯಲಾಯಿತು. ರೈತರ ಹೊಲಗಳಿಗೆ ಬೆಳೆಗಳನ್ನು ಬೆಳೆಯಲು ದೂರದಿಂದ ನೀರಾವರಿ ಸೌಲಭ್ಯ ಕಲ್ಪಿಸಲು ವಿದ್ಯುತ್ ಪಂಪಿನ ಸೇವೆಯನ್ನು ಪಡೆಯಲಾಯಿತು.

ಎಲ್ಲಾ ರೀತಿಯ ವಿದ್ಯುತ್ ಸಂಪರ್ಕಗಳಿಗೆ ನಿಗಧಿಪಡಿಸಿದ ದರಕ್ಕಿಂತಲೂ ಕಡಿಮೆ ಮತ್ತು ರಿಯಾಯಿತಿ ದರದಲ್ಲಿ ವಿದ್ಯುತ್ ಪಂಪಿಗೆ ವಿದ್ಯುತ್ತನ್ನು ಸರಬರಾಜು ಮಾಡಲಾಯಿತು.

ಸರ್ಕಾರವು ಕೃಷಿಗೆ ಮತ್ತು ಕುಡಿಯುವ ನೀರಿಗೆ ನೀರೆತ್ತಲು ಪಂಪುಗಳನ್ನು ಬಾಡಿಗೆ ಆಧಾರದಲ್ಲಿ ನೀಡತೊಡಗಿತು. ಸರ್ಕಾರವೇ ವಿದ್ಯುತ್ ಸರಬರಾಜು ಮಾಡಿ, ಪಂಪ್‌ನ್ನು ಅಳವಡಿಸಿ, ಚಾಲನೆಗೆ ಒಳಪಡಿಸಿ ಕೊಡುವುದಾದರೆ, ಗ್ರಾಹಕರು ಒಟ್ಟು ಖರ್ಚಿನ ಶೇ.೨೦ ಭಾಗವನ್ನು ಯೋಜನೆಯ ಪ್ರಾರಂಭದಲ್ಲಿ, ಉಳಿದ ಹಣವನ್ನು ಮೂರು ವಾರ್ಷಿಕ ಸಮಾನ ಕಂತುಗಳಲ್ಲಿಯೂ ನೀಡಬೇಕಾಗುತ್ತಿತ್ತು.[೨೪] ಇಂತಹ ಸಂದರ್ಭದಲ್ಲಿ ಒಂದು ಮೈಲು ದೂರದವರೆಗೆ ವಿದ್ಯುತ್ ವಿತರಣಾ ಮಾರ್ಗವನ್ನು ಸರ್ಕಾರ ತನ್ನ ಖರ್ಚಿನಲ್ಲಿಯೇ ನಿರ್ವಹಿಸಿ, ಉಳಿದ ದೂರದ ಮಾರ್ಗದ ಖರ್ಚು ಮತ್ತು ಬೇರೆ ಖರ್ಚುಗಳನ್ನು ಗ್ರಾಹಕರು ಹೊರ ಬೇಕಾಗುತ್ತಿತ್ತು. ೧೯೨೬ ರಿಂದ ೧೯೩೨ರವರೆಗೆ ಈ ಸೌಲಭ್ಯದಡಿ ೨೧೯ ಗ್ರಾಹಕರು ವಿದ್ಯುತ್ ಪಡೆದರು. ಸರ್ಕಾರವು ಈ ವ್ಯವಸ್ಥೆಗಾಗಿ ಖರ್ಚು ಮಾಡಿದ ಹಣವು ಒಟ್ಟು ೩,೬೭,೪೨೦ ರೂಪಾಯಿಗಳು ಮತ್ತು ಸರ್ಕಾರಕ್ಕೆ ಹೂಡಿದ ಹಣದ ೪.೪ರಷ್ಟು ವಾರ್ಷಿಕ ವರಮಾನ ಇದರಿಂದ ಲಭಿಸಿತ್ತು.

ಮುಂದೆ ೧೯೩೧ರಲ್ಲಿ ಇಂತಹ ಗ್ರಾಹಕರಿಗೆ ವಿದ್ಯುತ್ ಬೆಲೆಯನ್ನು ಇನ್ನೂ ಕಡಿತಗೊಳಿಸಿ ೧ ೧/೨ ಆಣೆಯಿಂದ ೧ ಆಣೆಗೆ ಇಳಿಸಲಾಯಿತು. ಅಲ್ಲದೆ ೧೯೩೧ರಲ್ಲಿ ವಿದ್ಯುತ್ ಬಳಕೆಯನ್ನು ಈ ಕೆಳಗಿನ ರಿಯಾಯ್ತಿ ನೀಡಿ ಪ್ರೋತ್ಸಾಹಿಸಲಾಯ್ತು.[೨೫]

೧. ಕೃಷಿ ಬಳಕೆಗೆ ಪಂಪು ಖರೀದಿಸಲು ಇಡಬೇಕಾದ ಠೇವಣಿಯನ್ನು ೨೦೦ ರೂಪಾಯಿಂದ ೧೦೦ ರೂಪಾಯಿಗೆ ಕಡಿತಗೊಳಿಸಲಾಯಿತು. ಉಳಿದ ೧೦೦ ರೂಪಾಯಿಯನ್ನು ಸರಳ ಕಂತುಗಳಲ್ಲಿ ಶೇ.೬ ಬಡ್ಡಿಯೊಂದಿಗೆ ವಸೂಲು ಮಾಡಲು ಕ್ರಮವಹಿಸಲಾಯಿತು.

೨. ಹಿಟ್ಟಿನ ಮಿಲ್ಲುಗಳಿಗೆ ಮಿನಿಮಮ್ ಚಾರ್ಜ್ ಪದ್ಧತಿಯನ್ನು ಕೈಬಿಡಲಾಯಿತು(ಬೆಂಗಳೂರು ಹೊರತುಪಡಿಸಿ).

೩. ವಾಣಿಜ್ಯ ಉದ್ದೇಶಗಳಿಗೆ, ಪ್ರದರ್ಶನಾಲಯಗಳಿಗೆ ಬಳಸುವ ವಿದ್ಯುತ್ ಬೆಲೆಯಲ್ಲಿ ಇಳಿತ ಮಾಡಲಾಯಿತು.

೪. ಬೆಂಗಳೂರು ಮತ್ತು ಮೈಸೂರು ಹೊರತುಪಡಿಸಿ ಇತರ ಕಡೆಗಳಲ್ಲಿ ಗೃಹಬಳಕೆಗೆ ಮೂರು ದೀಪಕ್ಕಿಂತ ಕಡಿಮೆ ದೀಪ ಬಳಸುವವರಿಗೆ ರಿಯಾಯ್ತಿ ದರ ನಿಗದಿಪಡಿಸಲಾಯಿತು.

ಈ ರೀತಿ ಹಲವಾರು ರಿಯಾಯಿತಿ ತೋರಿ ಸರ್ಕಾರ ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಸಲು ಕ್ರಮ ಕೈಗೊಂಡಿತು.

ದಿವಾನ್ ಮಿರ್ಜಾ ಇಸ್ಮಾಯಿಲರು ವಿದ್ಯುತ್ ಬಳಕೆಯನ್ನು ಸಾರ್ವತ್ರಿಕಗೊಳಿಸಿದರು. ಪಟ್ಟಣ, ಹಳ್ಳಿಗಳಿಗೆ ವಿದ್ಯುತ್ ಪೂರೈಸಿ. ಇದರ ಸೇವೆಯನ್ನು ಇನ್ನಷ್ಟು ವಿಸ್ತರಿಸಿದರು. ಅಲ್ಲದೇ ಕೃಷಿ ಕೆಲಸಗಳಿಗೆ ಅನುಕೂಲವಾಗುವಂತೆ ಪಂಪಿನ ಬಳಕೆಗೆ ವಿಶೇಷ ರಿಯಾಯಿತಿ ಕೊಟ್ಟರು. ಶಿವಸಮುದ್ರ ಜಲವಿದ್ಯುತ್ ಯೋಜನೆಯ ಸೌಲಭ್ಯವನ್ನು ಇನ್ನಷ್ಟು ವಿಸ್ತರಿಸುವಲ್ಲಿ, ಅಂದರೆ ಉತ್ಪಾದಿಸಿದ ವಿದ್ಯುತ್ ಅನ್ನು ಬಳಸುವ ವಿಚಾರದಲ್ಲಿ ಮಿರ್ಜಾ ಇಸ್ಮಾಯಿಲರ ಮುಂದಾಲೋಚನೆ ತಿಳಿಯಬಹುದು. ೧೯೪೦ರ ಹೊತ್ತಿಗೆ ಮೈಸೂರು ಸಂಸ್ಥಾನದ ಸುಮಾರು ೧೮೦ ಹಳ್ಳಿಗಳಲ್ಲಿ ವಿದ್ಯುತ್ ಸೌಕರ್ಯವಿತ್ತು.[೧೩] "ಭಾರತದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ ಮೊಟ್ಟ ಮೊದಲನೇ ಸಂಸ್ಥಾನ ಮೈಸೂರು" ಎಂಬ ಹೆಮ್ಮೆಗೆ ಪಾತ್ರವಾಯಿತು.

ಅಡಿಟಿಪ್ಪಣಿಗಳು

೧. ಗುಂಡಪ್ಪ ಡಿ.ವಿ., **ಮೈಸೂರಿನ ದಿವಾನರುಗಳು,** ಮೈಸೂರು, ೧೯೭೧, ಪು.೨೯೪

೨. ಲಕ್ಷ್ಮಣ್ ತೆಲಗಾವಿ (ಸಂ), ಸದಾಶಿವರವರ ಲೇಖನ, **ಚರಿತ್ರೆ ಅಧ್ಯಯನ,** ಸಂ.೧, ಹಂಪಿ, ೨೦೦೬

೩. Vikram Sampath, **Splendours of Royal mysore,** New delhi, 2008

೪. ಗುಂಡಪ್ಪ ಡಿ.ವಿ., **ಪೂರ್ವೋಕ್ತ,** ಪು.೩೯

೫. ವೆಂಕಟರಾಮಯ್ಯ ಸಿ.ಕೆ., **ಆಳಿದ ಮಹಾಸ್ವಾಮಿಯವರು,** ಬೆಂಗಳೂರು, ೧೯೪೧, ಪು.೧೨೭

೬. ಅದೇ, ಪು.೧೨೮

೭. ಗಜಾನನ ಶರ್ಮ, **ಬೆಳಕಾಯಿತು ಕರ್ನಾಟಕ,** ಸಾಗರ, ೨೦೦೩, ಪು.೪೨

೮. ಗುಂಡಪ್ಪ ಡಿ.ವಿ., **ಪೂರ್ವೋಕ್ತ,** ಪು.೪೦

೯. ನಂಜರಾಜ ಅವರು ಪಿ.ವಿ., **ಮೈಸೂರು ನೂರಿನ್ನೂರು ವರ್ಷಗಳ ಹಿಂದೆ,** ಮೈಸೂರು, ೨೦೦೭, ಪು.೨೪೪

೧೦. ಜಯಪ್ಪಗೌಡ ಡಿ.ಎಸ್., **ಭಾರತರತ್ನ ಸರ್.ಎಂ.ವಿ.(ವಿಶ್ವೇಶ್ವರಯ್ಯನವರ ಜೀವನ ದರ್ಶನ),** ಮೈಸೂರು, ೨೦೦೭, ಪು.೫೬

೧೧. ವಿಶ್ವೇಶ್ವರಯ್ಯ ಎಂ.(ಕನ್ನಡಕ್ಕೆ:ಗಜಾನನ ಶರ್ಮ), **ನನ್ನ ವೃತ್ತಿ ಜೀವನದ ನೆನಪುಗಳು,** ಬೆಂಗಳೂರು, ೨೦೦೫, ಪು.೬೧

೧೨. Narayana Rao V.S., **Mokshagundam Vishveshvaraya his life and works,** Mysore, 1973, Pp.69

೧೩. Vishveshwaraiah M., **Cauvary Reservoir project in Mysore,** govt of Mysore PWD Department, Bangalore, 5th May 1911

೧೪. ಗುಂಡಪ್ಪ ಡಿ.ವಿ., **ಪೂರ್ವೋಕ್ತ**, ಪು.೧೮೩

೧೫. ವಿಶ್ವೇಶ್ವರಯ್ಯ ಎಂ., **ನನ್ನ ವೃತ್ತಿ ಜೀವನದ ನೆನಪುಗಳು**, ಪು.೬೨

೧೬. ಅದೇ

೧೭. Narayana Rao N.S., **abid,** Pp.64

೧೮. ಪ್ರಜಾವಾಣಿ ಲೇಖನ, ದಿನಾಂಕ ೧೬-೯-೦೯, ಪು.೫

೧೯. ವಿಶ್ವೇಶ್ವರಯ್ಯ ಎಂ., **ಪೂರ್ವೋಕ್ತ**, ಪು.೬೮

೨೦. Govt of Mysore, **Administrative Report of the Electrical Department for the year 1926-27,** Pp.3

೨೧. Gopala Krishnaiaha M., **History of the Cauvery Power scheme**, Bangalore, 1932, Pp.140

೨೨. **Administrative Report Electrical Department, year 1926-27,** Pp.12

೨೩. Govt of Mysore, **Administrative Report of the Electrical Department for the year, 1930-31**, Pp.11

೨೪. **Administrative Report Electrical Department, year 1926-27,** Pp.13

೨೫. **Administrative Report Electrical Department, year 1930-31,** Pp.13

೨೬. ಸನತ್ ಕುಮಾರ್ ಬೆಳಗಲಿ, **ನಾಲ್ವಡಿ ಕೃಷ್ಣರಾಜ ಒಡೆಯರ್**, ಬೆಂಗಳೂರು, ೧೯೯೪, ಪು.೨೮

ಅಧ್ಯಾಯ ೬

ವಿದ್ಯುತ್ ಪಡೆದ ನಗರಗಳ ಅಭಿವೃದ್ಧಿ ನೆಲೆಯ ಅಧ್ಯಯನ

೬.೧. ಕೆ.ಜಿ.ಎಫ್

೬.೨. ಬೆಂಗಳೂರು

೬.೩. ಮೈಸೂರು

೬.೪. ಭದ್ರಾವತಿ

೬

ವಿದ್ಯುತ್ ಪಡೆದ ನಗರಗಳ ಅಭಿವೃದ್ಧಿ ನೆಲೆಯ ಅಧ್ಯಯನ

೬.೧. ಕೋಲಾರ

೧೯೦೨ರಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಪ್ರಾರಂಭದ ಅವಧಿಯಲ್ಲಿ ಕೋಲಾರದ ಚಿನ್ನದ ಗಣಿಗೆ ಮಾತ್ರ ವಿದ್ಯುತ್ತನ್ನು ಪೂರೈಸಲಾಗುತ್ತಿತ್ತು. ಕಾರಣವೆಂದರೆ ಆ ಸಂದರ್ಭದ ಮೈಸೂರು ರಾಜ್ಯದ ಕೈಗಾರಿಕೆಗಳ ಸಂಖ್ಯೆ ಬಹಳ ವಿರಳವಾಗಿತ್ತು. ಅಲ್ಲದೇ ವಿದ್ಯುತ್ತನ್ನು ಬಳಸುವ ಯಂತ್ರೋಪಕರಣಗಳು ಬಳಕೆಯಲ್ಲಿ ಇದ್ದದ್ದು ಕೋಲಾರದ ಚಿನ್ನದ ಗಣಿಯಲ್ಲಿ ಮಾತ್ರ. ಆದ ಕಾರಣ ಮೈಸೂರು ಸರ್ಕಾರದವರು ಕೋಲಾರದ ಚಿನ್ನದ ಗಣಿಯ ಮಾಲೀಕರೊಡನೆ ಮಾತುಕತೆ ನಡೆಸಿ, ವಿದ್ಯುತ್ತನ್ನು ಚಿನ್ನದ ಗಣಿಯ ಯಂತ್ರಗಳಿಗೆ ಬಳಸಲು ಒಪ್ಪಿಗೆ ಸಿಕ್ಕ ನಂತರವಷ್ಟೆ ಈ ಯೋಜನೆಯನ್ನು ಮೈಸೂರು ಸರ್ಕಾರದವರು ಕಾರ್ಯ ರೂಪಕ್ಕೆ ತಂದರು. ಅದರಂತೆ ಸರ್ಕಾರ ಮತ್ತು ಕೆ.ಜಿ.ಎಫ್ ಪ್ರತಿನಿಧಿಗಳೊಡನೆ ಒಪ್ಪಂದವೇರ್ಪಟ್ಟಿತ್ತು. ಗಣಿಗೆ ಪೂರಕವಾದ ವಿದ್ಯುತ್ತನ್ನು ಕಾಲಕ್ಕೆ ಅನುಗುಣವಾಗಿ ಸರ್ಕಾರದವರು ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಮುಖಾಂತರ ಸರಬರಾಜು ಮಾಡಬೇಕಾಯಿತು.

ಅದರಂತೆ ಶಿವನಸಮುದ್ರ ಯೋಜನೆಯಿಂದ ಪ್ರಪ್ರಥಮವಾಗಿ ವಿದ್ಯುತ್ ಪೂರೈಸಲ್ಪಟ್ಟ ಪ್ರದೇಶ, ಕೋಲಾರದ ಚಿನ್ನದ ಗಣಿ, ಯೋಜನೆಯಿಂದ ದಿನದಿಂದ ದಿನಕ್ಕೆ ಹೆಚ್ಚಿನ ವಿದ್ಯುತ್ ಉತ್ಪಾದನೆ ಆಗ ತೊಡಗಿತು. ಕೋಲಾರದ ಚಿನ್ನದ ಗಣಿಗೆ ನಿಗಧಿತ ಪ್ರಮಾಣದ ವಿದ್ಯುತ್ ಪೂರೈಕೆ ನಂತರ ಉಳಿದ ವಿದ್ಯುಚ್ಛಕ್ತಿಯನ್ನು ಪ್ರಮುಖ ನಗರಗಳಿಗೆ ಪೂರೈಸಲಾಯಿತು. ಆರಂಭದಲ್ಲಿ ಕೆಲವೇ ನಗರಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಸೀಮಿತವಾಗಿತ್ತು. ನಂತರ ಅವಧಿಯಲ್ಲಿ ವಿವಿಧ ಪಟ್ಟಣ ಹಳ್ಳಿಗಳಿಗೂ ಪೂರೈಸಲಾಯಿತು.

೬.೨. ಬೆಂಗಳೂರು

ಅಮೇರಿಕಾ ಮತ್ತು ಯೂರೋಪುಗಳಲ್ಲಿ ಜಲವಿದ್ಯುದಾಗರಗಳಿಂದ ವಿದ್ಯುತ್ತನ್ನು ಉತ್ಪಾದಿಸಿ ದೂರದ ಕೈಗಾರಿಕೆಗಳಿಗೆ, ನಗರಗಳ ಬಳಕೆಗೆ ವಿದ್ಯುತ್ತನ್ನು ಪೂರೈಸಲಾಗುತ್ತಿತ್ತು.[೧] ಇದನ್ನು ಎ.ಸಿ.ಜೆ. ಲಾಬಿನೀರ್‌ರವರು ೧೯೦೦ರ ವಿದೇಶ ಪ್ರವಾಸ ಸಂದರ್ಭದಲ್ಲಿ ಗಮನಿಸಿದ್ದ. ಶಿವನಸಮುದ್ರದಲ್ಲಿ ಎರಡನೆಯ ಹಂತದ ವಿಸ್ತರಣೆಯಿಂದ ಕೆ.ಜಿ.ಎಫ್‌ನ ಅಗತ್ಯಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದನೆ

ಸಾಧ್ಯವಾಯಿತು. ಆ ವೇಳೆಗೆ ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಬೆಂಗಳೂರಿಗೆ ಒದಗಿಸುವ ಪ್ರಸ್ತಾಪ ಮುಂದಿಡಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ಸಣ್ಣ-ಸಣ್ಣ ಕೈಗಾರಿಕೆಗಳಿಂದ ಕೂಡಿದ ನಗರವಾಗಿತ್ತು. ಎ.ಸಿ.ಜೆ.ಲಾಬಿನೀರ್‌ರವರು ಅಂದಿನ ಆರ್ಥಿಕ ತಜ್ಞರಿಗೆ ಬೆಂಗಳೂರಿಗೆ ವಿದ್ಯುತ್ ಒದಗಿಸಲು ಸಲಹೆ ನೀಡಿ, ಅದರ ಲಾಭ-ನಷ್ಟಗಳ ಕುರಿತು ವರದಿ ನೀಡುವಂತೆ ಕೋರಿದರು. ಅಂದಿನ ಕಾಮಗಾರಿ ಮುಖ್ಯ ಇಂಜಿನಿಯರ್ ಆಗಿದ್ದ ಎ.ಮೆಕ್‌ಹಚಿನ್‌ರವರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾಪದಲ್ಲಿ ಬೆಂಗಳೂರಿಗೆ ವಿದ್ಯುತ್ ಸಂಪರ್ಕ ನೀಡುವ ಮಂಜೂರಾತಿಯನ್ನು ಬಹುಬೇಗನೆ ಈಡೇರಿಸಬೇಕು. ಸರ್ಕಾರವು ಸಮುದಾಯದ ಹಿತದೃಷ್ಟಿಯಿಂದಾದರೂ ಈ ಕೆಲಸವನ್ನು ಮಾಡಲೇಬೇಕು. ಅಲ್ಲದೇ ಈ ಕಾರ್ಯದಿಂದ ಮತ್ತೊಂದು ಪ್ರಯೋಜನವು ಆಗಲಿದೆ. ಇದರಿಂದ ಸರ್ಕಾರಕ್ಕೆ ಆರ್ಥಿಕವಾಗಿಯೂ ಲಾಭ, ಕೈಗಾರಿಕೆಗಳ ಬೆಳವಣಿಗೆಯ ದೃಷ್ಟಿಯಿಂದಲೂ ಲಾಭವಾಗಲಿದೆ.[೨] ಪ್ರಸ್ತುತ ತಮ್ಮ ವಿದ್ಯುಚ್ಛಕ್ತಿಯ ಬಹುಪಾಲು ಕೋಲಾರ ಚಿನ್ನದ ಗಣಿಗೆ ಹೋಗುತ್ತಿದೆ. ಉತ್ಪಾದಿಸುತ್ತಿರುವ ಅಧಿಕ ವಿದ್ಯುತ್ತನ್ನು ಬೇಕಾದರೆ ಚಿನ್ನದ ಗಣಿಗಳೇ ಬಳಸಿಕೊಳ್ಳಲಿ. ಆದರೆ ಭೂಮಿಯಲ್ಲಿ ನಿರಂತರ ಚಿನ್ನವು ಸಿಗಲಾರದು. ಕಾಲಕ್ರಮೇಣ ಗಣಿಗಳು ಸ್ಥಗಿತವಾದರೆ ಅದಕ್ಕೆ ನಾವು ಪರ್ಯಾಯವನ್ನು ಈಗಲೇ ಹುಡುಕಿಕೊಳ್ಳಬೇಕಾಗಿದೆ ಎಂದು ಹೇಳಿ ಪರ್ಯಾಯ ವ್ಯವಸ್ಥೆಯಾಗಿ ಬೆಂಗಳೂರಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು, ಲಭ್ಯವಿರುವ ಅಧಿಕ ವಿದ್ಯುಚ್ಛಕ್ತಿಯನ್ನು ಬೆಂಗಳೂರಿಗೆ ಒದಗಿಸಲು ಅನುವು ನೀಡಿದರೆ, ಬೆಂಗಳೂರಿನಲ್ಲಿರುವ ಕೈಗಾರಿಕೆಗಳಿಗೆ ೨೦೦ ಹೆಚ್.ಪಿ.ಗಿಂತ ಹೆಚ್ಚಿನ ವಿದ್ಯುತ್ ಬೇಕಿಲ್ಲ. ಅಲ್ಲಿಗೂ ಲಭ್ಯವಿರುವ ೪೦೦ ಹೆಚ್.ಪಿ.ವಿದ್ಯುತ್ ಉಳಿಯುತ್ತದೆ. ಬಂಡವಾಳ ಹೂಡಿಕೆದಾರರನ್ನು ಬೆಂಗಳೂರಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಮನವೊಲಿಸಬೇಕು. ಇದರಿಂದ ಕೈಗಾರಿಕೆಗಳು ಆರಂಭವಾದರೆ, ಸರ್ಕಾರಕ್ಕೆ ನೇರವಾಗಿ ಕಂದಾಯಗಳು ಹೆಚ್ಚಾಗಿ ಲಭ್ಯವಾಗುವುದಲ್ಲದೇ ಜನಸಾಮಾನ್ಯರು ಕೈಗಾರಿಕೆಗಳಿಂದ ಉದ್ಯೋಗವನ್ನು ಪಡೆದು ತಮ್ಮ ಬದುಕನ್ನು ನಿರ್ವಹಿಸಿಕೊಳ್ಳುತ್ತಾರೆ ಎಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದರು.

ನಂತರ ಈ ಎಲ್ಲಾ ಅಂಶಗಳಿಂದ ಉತ್ತೇಜಿತರಾದ ಮೈಸೂರು ಅರಸರು, ಬೆಂಗಳೂರಿಗೆ ವಿದ್ಯುತ್ ಒದಗಿಸುವ ಪ್ರಸ್ತಾವನೆಗೆ ೧೯೦೪ ಮೇ ೩೦ ರಂದು ಯೋಜನೆಯ ಕಾರ್ಯಾನುಷ್ಠಾನಕ್ಕೆ ಮಂಜೂರಾತಿ ನೀಡಿದರು.[೩] ಬೆಂಗಳೂರಿಗೆ ವಿದ್ಯುತ್ ಒದಗಿಸುವ ಕಾರಣಕ್ಕಾಗಿ ೩೫,೦೦೦ ವೋಲ್ಟ್‌ನ, ೫೭ ಮೈಲುದ್ದದ ಪ್ರಸರಣ ಮಾರ್ಗವನ್ನು ಶಿವನಸಮುದ್ರದಿಂದ ಬೆಂಗಳೂರಿಗೆ ನಿರ್ಮಿಸಲಾಯಿತು. ವಿತರಣೆ ಮತ್ತು ಉಪಸ್ಥಾವರ ನಿರ್ಮಾಣ ಕಾರ್ಯಕ್ಕೆ ೭,೪೬,೦೦೦ ರೂಪಾಯಿಗಳ ಅಂದಾಜು ಮೊತ್ತದ ಮಂಜೂರಾತಿ ದೊರೆಯಿತು. ಆದರೆ ಬೆಂಗಳೂರಿಗೆ ವಿದ್ಯುತ್ ಒದಗಿಸುವ ಕಾರಣಕ್ಕಾಗಿ ಶಿವನಸಮುದ್ರದಲ್ಲಿ ಹೊಸ ವಿದ್ಯುತ್ ಸ್ಥಾವರ ಸಾಮರ್ಥ್ಯ ಹೆಚ್ಚಿಸುವ ಪ್ರಯತ್ನ ನಡೆಸಲಿಲ್ಲ. ಅದರ ಬದಲು ಹಳೆಯ ಟರ್ಬೈನ್ ಗಳನ್ನು ದುರಸ್ತಿಗೊಳಿಸಿ ಕಾರ್ಯಕ್ಷಮತೆ ಹೆಚ್ಚಿಸಲಾಯಿತು. ಈ ಕಾರಣಕ್ಕಾಗಿ ಶಿವನಸಮುದ್ರದಲ್ಲಿ ಮತ್ತು

ಬೆಂಗಳೂರಿನಲ್ಲಿ ೪೫೦ ಕೆ.ವಿ.ಎ ಸಾಮರ್ಥ್ಯದ ಎರಡು ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಸ್ಥಾಪಿಸಲಾಯಿತು ಮತ್ತು ಅಗತ್ಯವಾದ ಸ್ವಿಚಿಂಗ್ ಉಪಕರಣಗಳನ್ನು ಅಳವಡಿಸಲಾಯಿತು.

ಬೆಂಗಳೂರಿನಲ್ಲಿ ಕೋಟೆಯ ಸಮೀಪ 'ಎ' ಸ್ಟೇಷನ್ ಅಗತ್ಯ ಕಟ್ಟಡ ನಿರ್ಮಿಸಲಾಯಿತು. ಪ್ರಸರಣ ಮಾರ್ಗಕ್ಕೆ ಕೆ.ಜಿ.ಎಫ್ ಮಾರ್ಗದಂತೆ ಮರದ ಕಂಬಗಳನ್ನು ಬಳಸದೆ, ಉಕ್ಕಿನ ಕಂಬವನ್ನು ಬಳಸಲಾಯಿತು. ಹೀಗೆ ಎಲ್ಲ ಕಾರ್ಯಗಳು ೩ ಆಗಸ್ಟ್ ೧೯೦೫ರಲ್ಲಿ ಮುಗಿದವು.[೪] ೧೯೦೫ರ ಆಗಸ್ಟ್ ೫ನೇ ತಾರೀಖು ಬೆಂಗಳೂರಿಗೆ ವಿದ್ಯುತ್ ಸರಬರಾಜು ಮಾಡಲಾಯಿತು. ವೈಸರಾಯ್ ಸಮಿತಿಯ ಸದಸ್ಯರಾದ ಸರ್.ಜಾನ್ ಹೆವಿಟ್ಸ್‌ರವರು ಇವರ ಪ್ರಾರಂಭೋತ್ಸವವನ್ನು ನೆರವೇರಿಸಿದರು.[೫] ಅಲ್ಲದೆ ವಿದ್ಯುತ್ ಪಡೆದ ಭಾರತದ ಪ್ರಥಮ ನಗರವೆಂದು ಘೋಷಿಸಿದನು. ಬೆಂಗಳೂರಿನಲ್ಲಿ ಮೊಟ್ಟ ಮೊದಲ ವಿದ್ಯುದೀಪ ಉರಿದಿದ್ದು ಸಿಟಿ ಮಾರುಕಟ್ಟೆಯಲ್ಲಿ.

೧೯೦೫ಕ್ಕೂ ಹಿಂದೆ ಬೆಂಗಳೂರಿನಲ್ಲಿ ಬೀದಿ ದೀಪಗಳಿಗೆ ಅಲ್ಲಲ್ಲಿ ಲಾಂದ್ರ ಕಂಬಗಳ ಮೇಲೆ ಸೀಮೆಎಣ್ಣೆಯಿಂದ ಉರಿಯುವ ಲಾಂದ್ರಗಳು ಉರಿಯುತ್ತಿದ್ದವು. ಪ್ರತಿದಿನ ಸಂಜೆ ಈ ದೀಪ ಹೊತ್ತಿಸಲು ಪ್ರತಿ ಏರಿಯಾದಲ್ಲಿ ಇಬ್ಬರು ಇರುತ್ತಿದ್ದರು. ಒಬ್ಬ ಮುಂದೆ-ಮುಂದೆ ಸೀಮೆ ಎಣ್ಣೆ ತುಂಬುತ್ತಾ ಸಾಗಿದರೆ ಹಿಂದಿನಿಂದ ಒಬ್ಬ ದೀಪ ಬೆಳಗಿಸುತ್ತಾ ಬರುತ್ತಿದ್ದ.[೬] ಬೀದಿದೀಪಗಳ ನಿರ್ವಹಣೆಗಾಗಿ ವಾರ್ಷಿಕ ೧೨೦೦೦ ರೂಪಾಯಿಗಳ ಗುತ್ತಿಗೆ ನೀಡಲಾಗಿತ್ತು. ೧೯೦೫ರಲ್ಲಿ ಬೆಂಗಳೂರಿಗೆ ವಿದ್ಯುತ್ ಆಗಮಿಸಿದ ನಂತರ, ವಿದ್ಯುತ್ ಬೀದಿದೀಪಗಳನ್ನು ಅಳವಡಿಸುವ ಸಿದ್ಧತೆಗಳು ನಡೆದವು. ಬೆಂಗಳೂರು ಪುರಸಭೆ ಗೋಮೆಡ್‌ಗೆ ವಾರ್ಷಿಕ ೧೫.೦೦೦ ರೂಪಾಯಿಗಳನ್ನು ನೀಡುವ ಒಪ್ಪಂದದೊಂದಿಗೆ ಬೀದಿದೀಪಗಳನ್ನು ವಿದ್ಯುದೀಕರಣ ಗೊಳಿಸಿತು.

೧೯೦೫ರ ಕೊನೆಯ ಹೊತ್ತಿಗೆ ಬೆಂಗಳೂರಿನಲ್ಲಿ ಒಟ್ಟು ೧೩೭೫ ವಿದ್ಯುತ್ ಬೀದಿದೀಪ ಅಳವಡಿಸಲಾಯಿತು. ನಂತರದ ದಿನಗಳಲ್ಲಿ ಪ್ರತಿ ಬೀದಿದೀಪದ ಅಳವಡಿಕೆಗೆ ೩೦ ರೂಪಾಯಿಗಳ ಒಪ್ಪಂದದೊಂದಿಗೆ ಬೀದಿದೀಪಗಳ ನಿರ್ವಹಣೆ ಗೋಮೆಡ್ ಗೆ ಸಂದಿತು. ೧೯೦೮ ರಿಂದ ಬೀದಿದೀಪಗಳ ನಿರ್ವಾಹಣಾ ವೆಚ್ಚ ವಾರ್ಷಿಕ ೨೦,೦೦೦ ರೂಪಾಯಿಗಳಿಗೇರಿತು.[೭]

ಅಲ್ಲದೇ ಗೃಹಬಳಕೆ, ವಾಣಿಜ್ಯ, ಧಾರ್ಮಿಕ, ಸಾರ್ವಜನಿಕ ಬಳಕೆಗೆ ಪ್ರತ್ಯೇಕ ದರಗಳಿದ್ದವು. ದೀಪಗಳ ಲೆಕ್ಕ, ತಿಂಗಳ ಬಾಡಿಗೆಯನ್ನು ನಿಗದಿಪಡಿಸಲಾಗಿತ್ತು. ಅಲ್ಲದೇ ಅತಿ ದುಬಾರಿಯಾಗಿತ್ತು. ೧೯೦೫ ಆಗಸ್ಟ್ ೫ರಂದು ಪ್ರಾರಂಭವಾದ ಬೆಂಗಳೂರು ವಿದ್ಯುತ್ ಸರಬರಾಜು ಕೆಲವೇ ಕಾಲದಲ್ಲಿ ಹಲವಾರು ಉದ್ಯಮಿಗಳನ್ನು ಆಕರ್ಷಿಸಿತ್ತು. ಬೆಂಗಳೂರಿನಲ್ಲಿ ಪ್ರಪ್ರಥಮವಾಗಿ ವಿದ್ಯುತ್ ಪಡೆದ ಕಾರ್ಖಾನೆ ಬಿನ್ನಿಮಿಲ್, ೧೪-೬-೧೯೦೬ ರಂದು ಬಿನ್ನಿಮಿಲ್ ವಿದ್ಯುತ್ ಪಡೆಯಿತು. ನಂತರ ಹಲವಾರು ಪವರ್ ಗ್ರಾಹಕರು ವಿದ್ಯುತ್ ಪಡೆದರು.

ಅ. ೧೯೧೨ರಲ್ಲಿ ಬೆಂಗಳೂರಿನ ಪ್ರಮುಖ ಪವರ್ ಗ್ರಾಹಕರು

೧. ಬಿನ್ನಿಮಿಲ್	೯೫೦ ಹೆಚ್.ಪಿ
೨. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್	೧೨೯ ಹೆಚ್.ಪಿ
೩. ಮೆಸರ್ಸ್ ಮೆಕೆಂಜಿ ಮತ್ತು ಕಂಪನಿ	೯ ಹೆಚ್.ಪಿ
೪. ರೈಲ್ವೆ ವರ್ಕ್‌ಶಾಪ್	೭೦ ಹೆಚ್.ಪಿ
೫. ಎಂ.ಎಸ್.ಎಂ. ರೈಲ್ವೆ ಪಂಪಿಂಗ್ ಸ್ಟೇಷನ್	೩.೫ ಹೆಚ್.ಪಿ
೬. ಮೆಸರ್ಸ್ ಕಾಳಪ್ಪ	೨.೫ ಹೆಚ್.ಪಿ
೭. ಸಿಟಿ ಟೊಬ್ಯಾಕೋ ಕಂಪನಿ	೫ ಹೆಚ್.ಪಿ
೮. ಮೆಸರ್ಸ್ ವಿ. ಕೃಷ್ಣಯ್ಯ	೨ ಹೆಚ್.ಪಿ
೯. ಮೆಸರ್ಸ್ ರಾಮಚಂದ್ರರಾವ್ ಸಿಬಿಯ	೪ ಹೆಚ್.ಪಿ

ಆ. ಇದೇ ತರಹ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ನಲ್ಲಿದ್ದ ಪವರ್ ಗ್ರಾಹಕರು.

೧. ಗವರ್ನಮೆಂಟ್ ಟೆಲಿಗ್ರಾಫ್ ಆಫೀಸ್	೨ ಹೆಚ್.ಪಿ
೨. ಮೋಟಾರ್ ಹೌಸ್	೦.೫ ಹೆಚ್.ಪಿ
೩. ಎಲೆಜಿನ್ ಹಿಟ್ಟಿನಗಿರಣಿ	೨೭ ಹೆಚ್.ಪಿ
೪. ಐವಾಟ್ ಬ್ರಿವರಿ	೩ ಹೆಚ್.ಪಿ
೫. ಜಾನಕೀರಾಂ ಮೊದಲಿಯಾರ್	೩ ಹೆಚ್.ಪಿ

ಆಧಾರ : ಗಜಾನನ ಶರ್ಮ, ಬೆಳಕಾಯಿತು ಕರ್ನಾಟಕ, ಸಾಗರ, ೨೦೦೩, ಪು.೭೬

ಹೀಗೆ ಅನೇಕ ಪವರ್ ಗ್ರಾಹಕರು ವಿದ್ಯುತ್ ಸಂಪರ್ಕವನ್ನು ಪಡೆದರು. ೧೯೧೫ರ ನಂತರ ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಕಾರ್ಖಾನೆಗಳು ಬೆಂಗಳೂರಿನಲ್ಲಿ ಸ್ಥಾಪನೆಗೊಂಡವು. ಅವುಗಳೆಂದರೆ

೧. ವಿದ್ಯುತ್ ಲ್ಯಾಬೋರೇಟರಿ

ವಿದ್ಯುತ್ ಇಲಾಖೆಯಲ್ಲಿ ಲ್ಯಾಬೋರೇಟರಿ ಶಾಖೆ ೧೯೨೦ರ ದಶಕದಲ್ಲಿಯೇ ಕಾರ್ಯಾರಂಭ ಮಾಡಿತು. ವಿವಿಧ ನಗರಗಳಲ್ಲಿ ವಿದ್ಯುತ್ ಬಳಕೆ ಹೆಚ್ಚಾಗುತ್ತಿದ್ದಂತೆ ಲ್ಯಾಬೋರೇಟರಿಯ ಜವಾಬ್ದಾರಿ ಹೆಚ್ಚಾಗತೊಡಗಿತು. ಬೆಂಗಳೂರಿನ ಕೆ.ಆರ್.ಸರ್ಕಲ್ ಬಳಿ ಇದ್ದ ಈ ಲ್ಯಾಬೋರೇಟರಿಯಲ್ಲಿ ಇಲಾಖೆಯ ತಾಂತ್ರಿಕ ಉಪಕರಣಗಳು, ಜನರೇಟರ್‌ಗಳು, ಟ್ರಾನ್ಸ್‌ಫಾರ್ಮರ್‌ಗಳು, ಯಂತ್ರಭಾಗಗಳು, ಮಾಪಕಗಳು, ರಿಲೇಗಳ ಪರೀಕ್ಷೆ, ರಿಪೇರಿಯಲ್ಲದೆ ಬೇರೆ ಬೇರೆ ಇಲಾಖೆಗಳ ಉಪಕರಣ, ಮೋಟಾರು ಇತ್ಯಾದಿಗಳ ರಿಪೇರಿಯೂ ನಡೆಯುತ್ತಿತ್ತು. ವಿದ್ಯುತ್ ಸೌಲಭ್ಯಪಡೆದ ಗ್ರಾಹಕರ ವೈರಿಂಗ್ ಮತ್ತು ಇತರ

ಉಪಕರಣಗಳ ಸುಸ್ಥಿತಿಯ ಬಗ್ಗೆ ದೃಢೀಕರಣ ಮುಂತಾದ ಕೆಲಸಗಳು ಲ್ಯಾಬೋರೇಟರಿ ವ್ಯಾಪ್ತಿಗೆ ಒಳಪಡುತ್ತಿತ್ತು.

೨. ಸರ್ಕಾರಿ ಪಿಂಗಾಣಿ ಕಾರ್ಖಾನೆ

ಸುಮಾರು ೧೯೨೦ರ ಅವಧಿಯಲ್ಲಿಯೇ ಮೈಸೂರು ಸರ್ಕಾರವು ರಾಜ್ಯದಲ್ಲಿ ದೊರೆಯುವ ಕಚ್ಚಾವಸ್ತುಗಳನ್ನು ಬಳಸಿ, ವಿದ್ಯುತ್ ಕ್ಷೇತ್ರಕ್ಕೆ ಅಗತ್ಯವಾದ ಇನ್ಸುಲೇಟರ್ ಮುಂತಾದ ಪಿಂಗಾಣಿ ವಸ್ತುಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಲು ಯೋಚಿಸತೊಡಗಿತು. ೧೯೩೨ರಲ್ಲಿ ಸುಮಾರು ೩,೭೩,೩೧೨ ರೂಪಾಯಿಗಳ ಬಂಡವಾಳದೊಂದಿಗೆ ಬೆಂಗಳೂರಿನಲ್ಲಿ ಸರ್ಕಾರಿ ಪಿಂಗಾಣಿ ಕಾರ್ಖಾನೆ ಸ್ಥಾಪನೆಯಾಯಿತು.[೮] ಇದರಲ್ಲಿ ಇನ್ಸುಲೇಟರ್‌ಗಳನ್ನು ಪರೀಕ್ಷಿಸುವ ಲ್ಯಾಬೋರೇಟರಿಯನ್ನು ಕೂಡ ಸ್ಥಾಪಿಸಲಾಯಿತು. ಈಗ ಇದು ಬಿ.ಹೆಚ್.ಇ.ಎಲ್. ಸಂಸ್ಥೆಗೆ ಸೇರಲ್ಪಟ್ಟಿದೆ.

೩. ಸರ್ಕಾರಿ ವಿದ್ಯುತ್ ಕಾರ್ಖಾನೆ

ವಿದ್ಯುತ್ ವಿತರಣಾ ವ್ಯವಸ್ಥೆಗೆ ಪೂರಕವಾಗಿ ಟ್ರಾನ್ಸ್‌ಫಾರ್ಮರ್‌ಗಳು ಅತ್ಯಾವಶ್ಯಕವಲ್ಲದೇ, ಅವುಗಳ ಮೌಲ್ಯ ದುಬಾರಿ ಹೊರಭಾಗದಿಂದ ಆಮದು ಮಾಡಿಕೊಳ್ಳಬೇಕಾಗುತ್ತಿತ್ತು. ಹೀಗಾಗಿ ಸರ್ಕಾರವು ೧೯೩೧ರ ಸಂದರ್ಭದಲ್ಲಿ ಹೊಸ ಟ್ರಾನ್ಸ್‌ಫಾರ್ಮರ್ ತಯಾರಿಕೆಗಾಗಿ, ಹಳೆಯ ಟ್ರಾನ್ಸ್ ಫಾರ್ಮರ್ ವೈಂಡಿಂಗ್, ಕಾರ್ಯಗಳ ಪ್ರಯೋಗಕ್ಕಾಗಿ ಒಟ್ಟು ೬,೬೦,೦೦೦ ರೂಪಾಯಿಗಳ ಬಂಡವಾಳ ಹೂಡಿ ೧೯೩೪ರಲ್ಲಿ ಒಂದು ಹೊಸ ಕಾರ್ಖಾನೆಯನ್ನು ಸ್ಥಾಪಿಸಿತು.[೯] ಆರಂಭದಲ್ಲಿ ೧.೫. ಕೆ.ವಿ.ಎ ಯಿಂದ ೧೫ ಕೆ.ವಿ.ಎ.ವರೆಗಿನ ೪೬೦೦ ವೋಲ್ಟ್ /೨೩೦ ವೋಲ್ಟ್ ೨೫ ಸೈಕಲ್ ಟ್ರಾನ್ಸ್‌ಫಾರ್ಮರ್ ತಯಾರಿಸುತ್ತಿದ್ದ ಕಾರ್ಖಾನೆ, ನಂತರ ೧೦೦ ಕೆ.ವಿ.ಎ ವರೆಗಿನ ಟ್ರಾನ್ಸ್‌ಫಾರ್ಮರ್ ತಯಾರಿಸಲು ಅಣಿಗೊಂಡಿತು.[೧೦] ಮುಂದೆ ಭಾರತದ ವಿವಿಧ ರಾಜ್ಯಗಳಿಗೂ ರಫ್ತು ಮಾಡಲಾಯಿತು. ಮುಂದೆ ಪವರ್ ಟ್ರಾನ್ಸ್‌ಫಾರ್ಮರ್, ಮೋಟಾರ್, ಸ್ವಿಚ್‌ಗೇರ್, ತಯಾರಿಕೆಗಾಗಿ ಹೊಸ ವಿದ್ಯುತ್ ಕಾರ್ಖಾನೆ (ಎನ್.ಜಿ.ಇ.ಎಫ್) ಪ್ರಾರಂಭವಾಯಿತು.

೪. ಮೈಸೂರು ಲ್ಯಾಂಪ್ಸ್

ಪಿಂಗಾಣಿ ಕಾರ್ಖಾನೆ, ಟ್ರಾನ್ಸ್‌ಫಾರ್ಮರ್ ತಯಾರಿಕೆಗೆ ಮುಂದಾದ ಸರ್ಕಾರ, ನಂತರ ವಿದ್ಯುತ್ ಬಲ್ಬುಗಳ ತಯಾರಿಕೆಯತ್ತಲೂ ಗಮನ ಹರಿಸಿತು. ೧೯೩೬ರಲ್ಲಿ ಬೆಂಗಳೂರಿನ ಕೈಗಾರಿಕಾ ವಲಯದಲ್ಲಿ ಲ್ಯಾಂಪ್ಸ್ ಕಾರ್ಖಾನೆ ಸ್ಥಾಪಿಸಿ, ವಿದ್ಯುತ್ ಕ್ಷೇತ್ರದಲ್ಲಿ ಮೈಸೂರು ರಾಜ್ಯವು ಸ್ವಯಂ ಪರಿಪೂರ್ಣವಾಗಲು ಯತ್ನಿಸಿತು. ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಸ್ಥಾಪನಾ ಬಂಡವಾಳ ೫ ಲಕ್ಷ ರೂಪಾಯಿಗಳು[೧೧]. ಉತ್ಪಾದಿಸಿದ ಬಲ್ಬುಗಳನ್ನು ಸಾರ್ವಜನಿಕ ಬೀದಿ ದೀಪಗಳಿಗೆ ಮತ್ತು ಗ್ರಾಹಕರಿಗೆ ವಿತರಿಸಲು ಈ

ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಮೈಸೂರು ಸಂಸ್ಥಾನದಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳ ಆಧಾರದ ಮೇಲೆ ಯಾವ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂಬುದನ್ನು ತೀರ್ಮಾನಿಸಲು ತಜ್ಞರ ಸಲಹೆಯನ್ನು ಬಳಸಿಕೊಳ್ಳಲಾಯಿತು.[೨] ಬೆಂಗಳೂರಿನಲ್ಲಿ ಕೈಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ ೧೯೨೪ ರಿಂದ ೧೯೪೫ರ ಕಾಲಾವಧಿಯು ಹೆಚ್ಚು ಮಹತ್ವಪೂರ್ಣವಾದದ್ದು, ಭಾರತ ಸರ್ಕಾರದ ವಾಣಿಜ್ಯ ನೀತಿ, ಕೈಗಾರಿಕೆಗಳ ಆಧುನೀಕರಣದ ಸಂದರ್ಭ ಸರ್ಕಾರಿ ಹಾಗೂ ಖಾಸಗೀ ಕ್ಷೇತ್ರಗಳ ಕೈಗಾರಿಕೆಗಳು ಪ್ರಾರಂಭವಾದವು. ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ಸಿಮೆಂಟ್, ಹತ್ತಿಬಟ್ಟೆ, ಸಿಲ್ಕ್ ಟೆಕ್ಸ್‌ಟೈಲ್ಸ್, ಬೆಂಗಳೂರು ಪ್ರಿಂಟಿಂಗ್ ಪ್ರೆಸ್, ವಿದ್ಯುಚ್ಛಕ್ತಿ, ಅರಗು ಮತ್ತು ಬಣ್ಣ, ರಾಸಾಯನಿಕ ವಸ್ತು ತಯಾರಿಕಾ ಕೈಗಾರಿಕೆಗಳು ಬೆಂಗಳೂರು ನಗರದಲ್ಲಿ ಸ್ಥಾಪಿಸಲ್ಪಟ್ಟಿದ್ದವು. ಪ್ರಮುಖವಾಗಿ ಕೈಗಾರಿಕೆಗಳಿಗೆ ವಿದ್ಯುತ್ ಅವಶ್ಯಕತೆಯಿತ್ತು. ಇದನ್ನು ಪೂರೈಸಲ್ಪಟ್ಟ ನಂತರ, ಮೇಲೆ ತಿಳಿಸಿದ ಎಲ್ಲಾ ಕೈಗಾರಿಕೆಗಳು ಪ್ರಾರಂಭಿಸಲ್ಪಟ್ಟವು. ಜನಸಂಖ್ಯೆ ಹೆಚ್ಚಾಗಿ ಎಲ್ಲ ರೀತಿಯ ಸೌಲಭ್ಯಗಳು ನಗರದಲ್ಲಿ ಲಭ್ಯವಿದ್ದು ಅಭಿವೃದ್ಧಿಯತ್ತ ಸಾಗಿತ್ತು.

೬.೩. ಮೈಸೂರು

೧೯೦೫ರಲ್ಲಿ ಬೆಂಗಳೂರಿಗೆ ವಿದ್ಯುತ್ ಪೂರೈಸಿದ ನಂತರ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಮೈಸೂರು ನಗರಕ್ಕೆ ವಿದ್ಯುತ್ ಪೂರೈಸಲಾಯಿತು. ಇದರ ಹಿಂದಿನ ಉದ್ದೇಶ ಕೈಗಾರಿಕೆಗಳಿಗೆ ಅಲ್ಲದೇ, ಮಹಾರಾಜರ ಅರಮನೆಗೆ, ಮೈಸೂರು ನಗರದಲ್ಲಿ ಆ ಸಂದರ್ಭದಲ್ಲಿ ಹೇಳಿಕೊಳ್ಳುವಂತಹ ಕೈಗಾರಿಕೆಗಳು ಇರಲಿಲ್ಲ. ಮೈಸೂರಿಗೆ ವಿದ್ಯುತ್ ಒದಗಿಸುವ ಕಾರಣಕ್ಕಾಗಿ ಶಿವನಸಮುದ್ರದಲ್ಲಿ ૩೬೫ ಕೆ.ವಿ.ಎ ಸಾಮರ್ಥ್ಯದ ೨೨೦೦/೨೨,೦೦೦ ವೋಲ್ಟ್‌ನ ಟ್ರಾನ್ಸ್‌ಫಾರ್ಮರ್ ಬ್ಯಾಂಕನ್ನು ಅದಕ್ಕೆ ಅಗತ್ಯ ಸ್ವಿಚಿಂಗ್ ಉಪಕರಣಗಳನ್ನು ಸ್ಥಾಪಿಸಲಾಯಿತು. ಅದೇ ರೀತಿ ಟ್ರಾನ್ಸ್‌ಫಾರ್ಮರ್ ಕಟ್ಟಡಗಳನ್ನು ನಿರ್ಮಿಸಲಾಯಿತು. ಮೈಸೂರು-ಶಿವನಸಮುದ್ರದ ನಡುವೆ ಉಕ್ಕಿನ ಕಂಬಗಳ ಮೇಲೆ ತಾಮ್ರತಂತಿಗಳ ಮಾರ್ಗವನ್ನು ನಿರ್ಮಿಸಲಾಯಿತು. ಮಾರ್ಗದ ಒಟ್ಟು ಉದ್ದ ೩೬ ಮೈಲುಗಳು. ಮೈಸೂರಿನ ವಿದ್ಯುತ್ ವ್ಯವಸ್ಥೆಗಾಗಿ ಅಂದು ಖರ್ಚು ಮಾಡಿದ ಮೊತ್ತ ಒಟ್ಟು ೧೬.೫ ಲಕ್ಷ ರೂಪಾಯಿಗಳು. ೧೯೦೮ರ ಸೆಪ್ಟೆಂಬರ್ ೨೬ನೇ ತಾರೀಖಿನಂದು ಮೈಸೂರಿನ ಅರಮನೆಯಲ್ಲಿ ಮೊಟ್ಟ ಮೊದಲ ವಿದ್ಯುದೀಪ ಬೆಳಗಿತು.[೩] ಈ ಮೊದಲು ಜನರೇಟರ್‌ನಿಂದ ಆರ್ಕ್‌ಲ್ಯಾಂಪನ್ನು ಅರಮನೆಗೆ ಬಳಸಲಾಗುತ್ತಿತ್ತು. ೧೯೦೧ರ ಜೂನ್ ಒಂದನೇ ತಾರೀಖಿನಿಂದ ಬೆಂಗಳೂರಿನ ದಂಡು ಪ್ರದೇಶ (ಕಂಟೋನ್ಮೆಂಟ್) ಕೂಡ ವಿದ್ಯುತ್ ಸರಬರಾಜು ಪಡೆಯಿತು. ಹೀಗೆ ವಿದ್ಯುತ್ ಉತ್ಪಾದನೆ ಆರಂಭವಾದ ಕೇವಲ ಆರು ವರ್ಷಗಳಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳು ವಿದ್ಯುತ್ ಸರಬರಾಜು ಪಡೆದವು. ಲಂಡನ್ ಮತ್ತು ನ್ಯೂಯಾರ್ಕ್ ಪಟ್ಟಣಗಳು ವಿದ್ಯುತ್ ಪಡೆದ ಎರಡು ದಶಕಗಳಲ್ಲೇ ರಾಜ್ಯದ ಎರಡು ಪ್ರಮುಖ ಪಟ್ಟಣಗಳು ವಿದ್ಯುತ್ ಸರಬರಾಜು ಪಡೆದ ಗೌರವಕ್ಕೆ ಪಾತ್ರವಾಯಿತು. ೧೯೩೪ರಲ್ಲಿ ನಂಜನಗೂಡಿನ ಬಳಿ ಕಾಗದದ ಕಾರ್ಖಾನೆ, ೨೫ ಲಕ್ಷ

ರೂಪಾಯಿಗಳ ಅಧಿಕೃತ ಬಂಡವಾಳದಿಂದ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲಾಯಿತು. ಇದಕ್ಕೂ ಹಿಂದೆ ೧೯೧೩ರಲ್ಲಿ ಶ್ರೀಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ೧,೨೪,೦೦೮ ರೂಪಾಯಿಗಳೊಂದಿಗೆ ಮರದ ಸಾಮಗ್ರಿಗಳು, ಕೆತ್ತನೆ ಕೆಲಸ, ಆನೆದಂತ ಮತ್ತು ಗಂಧದಮರ ಮಿಶ್ರಿತ ಕೆಲಸಗಳು ಪ್ರಾರಂಭಗೊಂಡವು.[೧೪] ನಂತರ ಶ್ರೀ ಕೃಷ್ಣರಾಜೇಂದ್ರ ಹತ್ತಿಗಿರಣಿ. ೨೦,೦೦,೦೦೦ ರೂಪಾಯಿ ವೆಚ್ಚದಲ್ಲಿ, ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ ೧೧,೨೦,೫೨೬ ರೂಪಾಯಿ ವೆಚ್ಚದಲ್ಲಿ ಮತ್ತು ಸರ್ಕಾರಿ ರೇಷ್ಮೆ ಕಾರ್ಖಾನೆಗಳು ಪ್ರಾರಂಭವಾದವು. ನಂತರಾವಧಿಯಲ್ಲಿ ಸಣ್ಣ-ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಯಿತು. ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಯಿತು.

೬.೪. ಭದ್ರಾವತಿ

೧೯೩೪ರಲ್ಲಿ ಎಂಟನೆಯ ವಿಸ್ತರಣೆ ಮುಗಿದ ಸಂದರ್ಭದಲ್ಲಿ ವಿದ್ಯುತ್ತನ್ನು ಕೇವಲ ಕೆ.ಜಿ.ಎಫ್, ಮೈಸೂರು, ಬೆಂಗಳೂರು, ಕೈಗಾರಿಕೆಗಳಿಗಲ್ಲದೆ ಇತರ ಕೈಗಾರಿಕಾ ಕೇಂದ್ರಗಳಿಗೂ ವಿಸ್ತರಿಸುವ ಪ್ರಸ್ತಾಪ ಬಂದಿತು. ಇವುಗಳಲ್ಲಿ ಮುಖ್ಯವಾಗಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಸ್ಥಾವರಕ್ಕೆ ವಿದ್ಯುತ್ ಒದಗಿಸುವುದಕ್ಕೆ ಪ್ರಥಮ ಪ್ರಾಶಸ್ತ್ಯ ದೊರೆಯಿತು. ಈ ಕಾರಣಕ್ಕಾಗಿ ೭೮.೦೦೦ ವೋಲ್ಟ್‌ನ ವಿದ್ಯುತ್ ಮಾರ್ಗವೊಂದನ್ನು, ಮೈಸೂರು-ಹಾಸನ ಮಾರ್ಗವಾಗಿ ಭದ್ರಾವತಿಯವರೆಗೂ ನಿರ್ಮಿಸಲು ಯೋಜಿಸ ಲಾಯಿತು. ಇದೇ ಮಾರ್ಗದಿಂದ ಹಾಸನ ಮತ್ತು ಕಾಡಮನೆ ಎಸ್ಟೇಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಯೋಜಿಸಲಾಯಿತು. ೧೯೧೮ರಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಕಾಗದ, ಸಿಮೆಂಟ್ ಕಾರ್ಖಾನೆಗಳು ಸ್ಥಾಪಿತವಾದವು. ಕಬ್ಬಿಣದ ಕಾರ್ಖಾನೆಗೆ ವಿದ್ಯುತ್ ಒದಗಿಸುವುದು ಆರ್ಥಿಕ ವಾಗಿ ಲಾಭದಾಯಕ ಎನ್ನುವುದು ಕೇವಲ ಒಂದು ಕಾರಣ. ಕಾರ್ಖಾನೆಗೆ ವಿದ್ಯುತ್ ಒದಗಿಸುವುದರಿಂದ ನಾವು ಅರಣ್ಯನಾಶವನ್ನು ತಪ್ಪಿಸಬಹುದಾಗಿದೆ. ಆಗ ಭದ್ರಾವತಿಯಲ್ಲಿ ಕಬ್ಬಿಣವನ್ನು ಕರಗಿಸಲು, ಮರದ ದಿಮ್ಮಿಗಳನ್ನು ಸುಟ್ಟು ತಯಾರಿಸುವ ಚಾಕ್ ಕೋಲನ್ನು ಬಳಸುತ್ತಿದ್ದರು. ಇದರಿಂದ ತೀವ್ರವಾದ ಅರಣ್ಯ ನಾಶವಾಗುತ್ತಿತ್ತು. ದಿನವೊಂದಕ್ಕೆ ಸಾವಿರಾರು ಟನ್‌ಗಳಷ್ಟು ಚಾರ್‌ಕೋಲ್ ಬಳಸಲಾಗುತ್ತಿತ್ತು. ಹಾಗಾಗಿ ಪರಿಸರದ ದೃಷ್ಟಿಯಿಂದ ಕೂಡ ವಿದ್ಯುತ್ ಬಳಕೆ ಅನಿವಾರ್ಯವಾಗಿತ್ತು. ಅಲ್ಲದೆ ಭದ್ರಾವತಿಯಲ್ಲಿ ಸಿಮೆಂಟ್ ಮತ್ತು ಕಾಗದ ಕಾರ್ಖಾನೆಗಳೂ ಕೂಡ ಆರಂಭವಾಗಿದ್ದವು. ಇವೆಲ್ಲವುಗಳ ಬಳಕೆಗೆ ವಿದ್ಯುತ್ ಸರಬರಾಜು ತುರ್ತು ಅಗತ್ಯವಾಗಿತ್ತು. ಗೋಮೆಡ್ ಭದ್ರಾವತಿ ವಿದ್ಯುತ್ ಸರಬರಾಜು ಮಾಡಲು ೧೩.೨೯.೨೦೦ ರೂಪಾಯಿಗಳ ಅಂದಾಜು ಪಟ್ಟಿ ತಯಾರಿಸಿತ್ತು. ದಿನಾಂಕ ೨೬-೩-೧೯೩೫ರಲ್ಲಿ ಅನುಮೋದನೆ ದೊರೆಯಿತು.[೧೫] ಇದರಲ್ಲಿ ೧೪೫ ಮೈಲುಗಳ ಉದ್ದದ ಮೈಸೂರು, ಭದ್ರಾವತಿ ಸಿಂಗಲ್ ಸರ್ಕ್ಯೂಟ್, ೭೮ ಕೆ.ವಿ. ಮಾರ್ಗ ನಿರ್ಮಾಣ ಮತ್ತು ಭದ್ರಾವತಿಗೆ ೫೦೦೦ ಕಿ.ವ್ಯಾ. ವಿದ್ಯುತ್ ಸರಬರಾಜಿಗೆ ಅಗತ್ಯ ಉಪಕರಣಗಳು ಮತ್ತು ಅವುಗಳ ಸ್ಥಾಪನೆಯ ಖರ್ಚು ಸೇರಿ ಇದೇ ಪ್ರಕರಣ

ಮಾರ್ಗವು ಹಾಸನ, ಹೊಳೆನರಸೀಪುರ, ಚಿಕ್ಕ ಮಗಳೂರು, ತರೀಕೆರೆ ಮತ್ತು ಶಿವಮೊಗ್ಗ ನಗರಗಳಿಗೆ ವಿದ್ಯುತ್ ವಿತರಣೆ ಮಾಡಿಲಾತು.[೧೬]

ಶಿವನಸಮುದ್ರ ಜಲವಿದ್ಯುತ್ ಯೋಜನೆಯಿಂದ ವಿದ್ಯುತ್ ಪಡೆದ ನಗರಗಳು ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಸಾಧಿಸಿದವು. ಕೈಗಾರಿಕೆಗಳ ಸ್ಥಾಪನೆಯಿಂದ, ಸರ್ಕಾರಕ್ಕೆ ಹೆಚ್ಚಿನ ತೆರಿಗೆ, ಜನಸಾಮಾನ್ಯರಿಗೆ ಉದ್ಯೋಗ, ಶಿಕ್ಷಣ, ಮೂಲಭೂತ ಸೌಲಭ್ಯಗಳು ಹೀಗೆ ಮತ್ತು ಹಲವು ಸೌಲಭ್ಯಗಳು ನಗರಗಳು ವಿಸ್ತೃತವಾಗಿ ಬೆಳವಣಿಗೆ ಹೊಂದುವುದಲ್ಲದೇ ಜಾಗತಿಕವಾಗಿ ತನ್ನನ್ನು ಗುರುತಿಸಿ ಕೊಳ್ಳುತ್ತವೆ. ಪ್ರಸ್ತುತ ಈ ನಿಟ್ಟಿನಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳು ಗುರುತಿಸಿಕೊಂಡಿವೆ.

ಅಡಿಟಿಪ್ಪಣಿಗಳು

೧. ಗೋಪಾಲಕೃಷ್ಣಯ್ಯ ಎಂ., ಹಿಸ್ಟರಿ ಆಫ್ ದಿ ಕಾವೇರಿ ಪವರ್ ಸ್ಕೀಂ, ಬೆಂಗಳೂರು, ೧೯೩೨, ಪು.೧೯

೨. ಗಜಾನನ ಶರ್ಮ, **ಬೆಳಕಾಯಿತು ಕರ್ನಾಟಕ**, ಸಾಗರ, ೨೦೦೩, ಪು.೪೪

೩. ಅದೇ, ಪು.೪೫

೪. ಶಾಮರಾವ್ ಎಂ., **ಮಾಡರ್ನ್ ಮೈಸೂರು ಸಂ.೨**, ಬೆಂಗಳೂರು, ೧೯೩೬, ಪು.೨೧೭

೫. ಸುಂದರ್‌ರಾವ್ ಬ.ನ., **ಬೆಂಗಳೂರಿನ ಇತಿಹಾಸ**, ಬೆಂಗಳೂರು, ೧೯೮೫, ಪು.೪೪೮

೬. ಶೇಷಗಿರಿರಾವ್ ಎಲ್.ಎಸ್.(ಸಂ), **ಬೆಂಗಳೂರು ದರ್ಶನ**, ಸಂ-೧, ಬೆಂಗಳೂರು, ೨೦೦೫, ಪು.೧೬೨

೭. ಗಜಾನನ ಶರ್ಮ, **ಪೂರ್ವೋಕ್ತ**, ಪು.೪೫

೮. ಗೌರ್ನಮೆಂಟ್ ಆಫ್ ಮೈಸೂರ್, **ಮೈಸೂರ್ ಅಂಡ್ ಮಾಡರ್ನ್ ಇಂಡಸ್ಟ್ರೀಸ್**, ಮೈಸೂರು, ೧೯೪೦, ಪು.೬೪

೯. ಅದೇ

೧೦. ಗೌರ್ನಮೆಂಟ್ ಆಫ್ ಮೈಸೂರ್, **ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಫ್ ದಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್**, ೧೯೩೬-೩೭, ಮೈಸೂರು, ಪು.೨

೧೧. ಜಿ.ಓ.ಎಂ., **ಮೈಸೂರ್ ಅಂಡ್ ಮಾಡರ್ನ್ ಇಂಡಸ್ಟ್ರೀಸ್**, ಪೂರ್ವೋಕ್ತ, ಪು.೭೩

೧೨. ನಂಜರಾಜ ಅರಸು ಮತ್ತು ಚಂದ್ರರಾಜ ಅರಸು (ಸಂ), **ನಾಲ್ವಡಿ ಕೃಷ್ಣರಾಜ ಒಡೆಯರ್ ಒಂದು ದರ್ಶನ**, ಮೈಸೂರು, ೧೯೯೬, ಪು.೬೧

೧೩. ಲಿಂಗಯ್ಯ ಎಂ.ಕೆ., **ಮೈಸೂರು ಒಂದು ಅಧ್ಯಯನ**, ಮೈಸೂರು, ಪು.೨೬

೧೪. ಅದೇ, ಪು.೧೮೪

೧೫. ಜಿ.ಓ.ಎಂ. ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ೧೯೩೪-೩೫, ಮೈಸೂರು, ಪು.೪

೧೬. ಅದೇ, ೧೯೩೬-೩೭, ಮೈಸೂರು, ಪು.೪

ಅಧ್ಯಾಯ ೭

ಜಲವಿದ್ಯುದಾಗರ ಅಂದು-ಇಂದು : ವಿಶ್ಲೇಷಣೆ

೭

ಜಲವಿದ್ಯುದಾಗರ ಅಂದು-ಇಂದು : ವಿಶ್ಲೇಷಣೆ

ಹಿಂದಿನ ಅಧ್ಯಾಯಗಳಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಆರಂಭ, ಅದರ ಬೆಳವಣಿಗೆ, ಯೋಜನೆಗೆ ಅರಸರು ಬ್ರಿಟೀಷರು ಮತ್ತು ದಿವಾನರ ಕೊಡುಗೆಗಳು ನಂತರದ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿದ್ದು ಇದು ವಿದ್ಯುದಾಗರದ ಅಂದಿನ ಮಹತ್ವವನ್ನು ತಿಳಿಸಿಕೊಟ್ಟಿದೆ.

೧೯೦೨ ರಿಂದ ೧೯೩೮ರವರೆಗೆ ಮೈಸೂರು ಸಂಸ್ಥಾನದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದ ಶಿವನಸಮುದ್ರ ಜಲವಿದ್ಯುತ್ ಯೋಜನೆಯು ಹಲವು ಹಂತಗಳಲ್ಲಿ ವಿಸ್ತರಣೆಗೊಳ್ಳುತ್ತಾ ವಿವಿಧ ಕೈಗಾರಿಕೆಗಳಿಗೆ, ನಗರಗಳಿಗೆ, ಪಟ್ಟಣಗಳಿಗೆ, ವಿದ್ಯುಚ್ಛಕ್ತಿಯನ್ನು ಪೂರೈಸಿ, ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಿಸಿದ ಕೈಗಾರಿಕೆಗಳು ತಂತ್ರಜ್ಞಾನ, ತಾಂತ್ರಿಕ ಶಿಕ್ಷಣಗಳು ಹೀಗೆ ವಿವಿಧ ಆಯಾಮಗಳಲ್ಲಿ ತನ್ನ ಜಾಲವನ್ನು ವಿಸ್ತರಿಸಿಕೊಂಡಿತು. ೧೯೪೦ರ ಸಂದರ್ಭದಲ್ಲಿ ನಗರ ಮತ್ತು ಕೈಗಾರಿಕೆಗಳ ಬೆಳವಣಿಗೆ ಇನ್ನಷ್ಟು ವಿದ್ಯುಚ್ಛಕ್ತಿಯ ಬೇಡಿಕೆಯನ್ನು ಸೃಷ್ಟಿಸಿತು. ಶಿವನಸಮುದ್ರ ಜಲವಿದ್ಯುತ್ ಯೋಜನೆಯಿಂದ ಉತ್ಪಾದಿಸಲಾದ ವಿದ್ಯುಚ್ಛಕ್ತಿ ನಿಗಧಿತ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗದ ನಿಮಿತ್ತ ತಜ್ಞರ ಸಮಿತಿ, ಶಿವನಸಮುದ್ರದಿಂದ ಕೆಲವೇ ಮೈಲಿ ದೂರದ ಶಿಂಷಾದಲ್ಲಿ ಮತ್ತು ಭದ್ರಾವತಿಯಲ್ಲಿನ ಕೈಗಾರಿಕೆಗಳಿಗೆ, ನಗರಗಳಿಗೆ ವಿದ್ಯುಚ್ಛಕ್ತಿ ಪೂರೈಸುವ ಸಲುವಾಗಿ ಜೋಗ ಜಲಪಾತದ ಬಳಿ ಜಲವಿದ್ಯುದಾಗರಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿತು. ಕಾಲಾನಂತರ ವಿವಿಧ ಜಲವಿದ್ಯುತ್ ಯೋಜನೆಗಳನ್ನು ಆರಂಭಿಸಲಾಯಿತು.

ಶಿವನಸಮುದ್ರದಲ್ಲಿ ೧೯೫೮-೫೯ರ ಆರ್ಥಿಕ ವರ್ಷದಲ್ಲಿ ೨೫ ಸೈಕಲ್ಸ್ ಗುಣಮಟ್ಟ ಮತ್ತು ೨೨೦೦ ವೋಲ್ಟ್ ಸಾಮರ್ಥ್ಯದ ವಿದ್ಯುದಾಗರದಲ್ಲಿ ೨೦೩ ದಶಲಕ್ಷ ಯೂನಿಟ್‌ಗಳನ್ನು ಉತ್ಪಾದಿಸಿದ ದಾಖಲೆ ಹೊಂದಿದೆ.[೧]

ಏಕೀಕರಣದ ನಂತರ ಮೈಸೂರು ರಾಜ್ಯವು, ಕರ್ನಾಟಕ ರಾಜ್ಯವೆಂಬ ಹೆಸರು ಮತ್ತು ಭೌಗೋಳಿಕವಾಗಿ ರಾಜ್ಯ ಇನ್ನಷ್ಟು ವಿಸ್ತಾರತೆ ಪಡೆಯಿತು. ಅದೇ ಕ್ರಮ ವಿದ್ಯುತ್ ಕ್ಷೇತ್ರದಲ್ಲಿ ಮುಂದುವರೆದು ವಿದ್ಯುಚ್ಛಕ್ತಿ ಉತ್ಪಾದನೆ, ಪ್ರಸರಣೆ, ವಿತರಣೆಗಳೆಂಬ ೩ ವರ್ಗಗಳ ಅಡಿಯಲ್ಲಿ ವಿವಿಧ ನಿಗಮಗಳು, ಮಂಡಳಿಗಳಾಗಿ ಬೆಳೆದು ಬಂದವು.

[illegible]

[illegible]

[illegible]

[illegible]

[illegible]

ಶಿವನಸಮುದ್ರ ವಿದ್ಯುದಾಗರದಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯ ಹೆಚ್ಚಿನ ಪ್ರಮಾಣ ಕೋಲಾರದ ಚಿನ್ನದ ಗಣಿಗೆ ಪೂರೈಸಲಾಗುತ್ತಿತ್ತು. ೧೯೯೯ರಲ್ಲಿ ಕೋಲಾರ ಚಿನ್ನದ ಗಣಿಯಲ್ಲಿ ಚಿನ್ನದ ಉತ್ಪತ್ತಿ ಪ್ರಮಾಣ ಶೂನ್ಯ ಮಟ್ಟಕ್ಕೆ ಇಳಿಮುಖವಾದಾಗ ಹಾಗೂ ೨೫ ಸೈಕಲ್ ವಿದ್ಯುತ್ ಗುಣಮಟ್ಟದ ವಿದ್ಯುತ್ ಬೇಡಿಕೆ ಇತರೆ ಸಾಮಾನ್ಯ ಉದ್ಯಮಿಗಳಿಗೆ ಪ್ರಯೋಜನವಿಲ್ಲದ ಕಾರಣ, ಕೇಂದ್ರ ವಿದ್ಯುತ್ ಅಕಾಡೆಮಿ (ಸಿ.ಇ.ಎ) ಇದರ ನೇತೃತ್ವದಲ್ಲಿ ರಾಷ್ಟ್ರೀಯ ಸಮಿತಿ ಮಾರ್ಗದರ್ಶನದಂತೆ ಪುನಃಶ್ಚೇತನ ಮತ್ತು ನವೀಕರಣಕ್ಕೆ ಸಲಹೆ ಮೇರೆಗೆ, ಜಲವಿದ್ಯುತ್ ಕೇಂದ್ರದ ಅಧೀನದಲ್ಲಿರುವ ಕರ್ನಾಟಕ ವಿದ್ಯುತ್ ಮಂಡಳಿಯವರು ದಿನಾಂಕ : ೨೩-೦೨-೧೯೯೯ ರಂದು ೬೮.೩೮ ಕೋಟಿ ರೂ. ಅಂದಾಜು ವೆಚ್ಚದ ಕೆಲಸಕ್ಕೆ ಅನುಮೋದಿಸಿ, ೨೦೦೦ ದಿಂದ ೨೦೦೪ರವರೆಗೆ ವಿದ್ಯುದಾಗರದಲ್ಲಿ ಕಾಮಗಾರಿ ನಡೆದವು.[೨]

ವಿದ್ಯುತ್ ಘಟಕಗಳ ಪುನರ್ ನವೀಕರಣ ನಡೆದ ದಿನಾಂಕ

೧.	ಘಟಕ ೧	೧೮-೦೮-೦೩
೨.	ಘಟಕ ೨	೧೪-೦೨-೦೩
೩.	ಘಟಕ ೩	೩-೧೨-೦೨
೪.	ಘಟಕ ೪	೧೧-೧೨-೦೩
೫.	ಘಟಕ ೫	೨೨-೦೬-೦೪
೬.	ಘಟಕ ೬	೨೩-೦೬-೦೪
೭.	ಘಟಕ ೭	೧೬-೧೦-೦೪
೮.	ಘಟಕ ೮	೨೨-೦೬-೦೪
೯.	ಘಟಕ ೯	೨೭-೧೧-೦೩
೧೦.	ಘಟಕ ೧೦	೧೨-೦೪-೦೩

ಆಧಾರ : ಶಿವನಸಮುದ್ರದಲ್ಲಿನ ಮಾಹಿತಿ ಫಲಕ

೧೯೦೨ ರಿಂದ ೨೫ ಸೈಕಲ್‌ನಲ್ಲಿ ಚಾಲಿತವಾದ ಜಲ ವಿದ್ಯುತ್ ಕೇಂದ್ರವನ್ನು ೫೦ ಸೈಕಲ್ ಗುಂಪಿನ ಜನರೇಟರುಗಳನ್ನು ಹೊಸದಾಗಿ ಸ್ಥಾಪಿಸಿ ಮತ್ತು ಟರ್ಬೈನ್ ಯಂತ್ರೋಪಕರಣಗಳು ನೂರು ವರ್ಷ ಹಳೆಯದಾಗಿದ್ದರೂ ಸಹ ಅದೇ ಟರ್ಬೈನ್ ಘಟಕಗಳನ್ನು ಸೂಕ್ತವಾಗಿ ಪುನಃ ನಿರ್ಮಿಸಿ ದಿನಾಂಕ ೨೫-೦೧-೨೦೦೩ ರಿಂದ ೫೦ ಸೈಕಲ್ ೧೧೦೦ ವೋಲ್ಟೇಜ್ ಪ್ರಮಾಣದ ವಿದ್ಯುತ್ ಶಕ್ತಿಯನ್ನು ಆರಂಭಿಸಿ ಅಕ್ಟೋಬರ್ ೨೦೦೪ರ ವೇಳೆಗೆ ೧೦ ಘಟಕಗಳಿಂದ ೪೨ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಪುನರಾರಂಭವಾಗಿರುವುದು.[೩]

ಶಿವನಸಮುದ್ರ ಜಲವಿದ್ಯುತ್ ಕೇಂದ್ರ ೧೯೯೯ ರವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧೀನದಲ್ಲಿ, ೨೦೦೬ರವರೆಗೆ ವಿಶ್ವೇಶ್ವರಯ್ಯ ವಿದ್ಯುತ್ ನಿಗಮದ ಅಧೀನದಲ್ಲಿ, ಪ್ರಸ್ತುತ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಅಧೀನದಲ್ಲಿ ಕಾರ್ಯನಿರ್ವಹಿಸಿಕೊಂಡು ಬಂದಿದೆ. ೨೦೦೮-೦೯ನೇ ವರ್ಷದಲ್ಲಿ ಗರಿಷ್ಟ ಮಟ್ಟದ ದಾಖಲಾತಿ ವಿದ್ಯುತ್ ಉತ್ಪಾದನೆ ೩೨೩.೬೮ ದಶಲಕ್ಷ ಯೂನಿಟ್. ಸುಮಾರು ೧೦೭ ವರ್ಷದ ಹಾದಿಯಲ್ಲಿ ಎಲ್ಲಾ ದೇಶದ ವಿವಿಧ ತಂತ್ರಜ್ಞರ ಹಾಗೂ ಆಗಿನ ಕಾಲದ ಉತ್ತಮ ಗುಣಮಟ್ಟದ ಸಾಮಗ್ರಿಗಳ ಬಳಕೆ ಶಿವನಸಮುದ್ರ ಜಲವಿದ್ಯುತ್ ಯೋಜನೆ ದೀರ್ಘಕಾಲದ ಅವಧಿ ಬೆಳೆದು ಈ ದಿನಗಳಲ್ಲೂ ಸಹ ೪೨ ಮೆಗಾವ್ಯಾಟ್ ಸಾಮರ್ಥ್ಯವನ್ನು ಸ್ಥಿರವಾಗಿ ಬಳಕೆಯಲ್ಲಿರುವುದು ಗಮನಿಸಬಹುದು. ಶಿವನಸಮುದ್ರದ ಉಸ್ತುವಾರಿಯನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಅಧೀಕ್ಷಕ ಇಂಜಿಯರ್‌ರವರು ವಹಿಸಿಕೊಂಡಿದ್ದಾರೆ. ಜಲವಿದ್ಯುದಾಗರ ಪ್ರಸ್ತುತ ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಲ್ಪಟ್ಟಿದೆ.

ಯೋಜನೆಯ ಸಮೀಪ ಕೆಲವು ಖಾಸಗಿ ಒಡೆತನದ ವಿದ್ಯುದಾಗರಗಳು ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕ ಸರ್ಕಾರವು ಈ ಯೋಜನೆಯ ಬಳಿಯಲ್ಲೇ ಸುಮಾರು ೨೫೦ ಮೆ.ವಾ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಮುಂದಾಗಿದೆ.[೪] ಇದೆಲ್ಲದರ ನಡುವೆ ಜಲವಿದ್ಯುದಾಗರ ಆರಂಭವಾಗಿ ೧೦೦ ವರ್ಷಗಳನ್ನು ಪೂರೈಸಿದ ನೆನಪಿಗೆ ಶತಮಾನೋತ್ಸವ ಆಚರಣೆಗಾಗಿ ಇಲ್ಲಿ ನೆನಪಿನ ಸ್ಮಾರಕಗಳು ಸಿದ್ಧಗೊಂಡಿವೆ. ಅಲ್ಲದೇ ವಿದ್ಯುದಾಗರ (ಬ್ಲಫ್)ಗೆ ಉತ್ತಮ ಸಾರಿಗೆ ಸಂಪರ್ಕ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರವಾಸಿ ಕೇಂದ್ರವಾಗಿ ವಿದ್ಯುದಾಗರದ ಬಳಿಯಲ್ಲೇ ಗಗನ ಚುಕ್ಕಿ, ಭರಚುಕ್ಕಿ ಜಲಪಾತಗಳಿವೆ. ಪ್ರಸ್ತುತ ಭದ್ರತಾ ದೃಷ್ಟಿಯಿಂದ ವಿದ್ಯುದಾಗರಕ್ಕೆ ಸಾರ್ವಜನಿಕ ಪ್ರವೇಶವನ್ನು ನಿಷೇಧಿಸಲಾಗಿದೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, **ಸುರಕ್ಷತಾ ಕೈಪಿಡಿ, ಶಿವನಸಮುದ್ರ,** ೨೦೦೯, ಪು.೧೪

೨. ಅದೇ, ಪು.೧೫

೩. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ, **ವಾರ್ಷಿಕ ವರದಿ,** ೨೦೦೪-೦೫, ಪು.೮೫

೪ **ಕ್ಷೇತ್ರಕಾರ್ಯ ವರದಿ.**

ಅಧ್ಯಾಯ ೮

ಸಮಾರೋಪ

೮

ಸಮಾರೋಪ

ಮಾಹಿತಿ ತಂತ್ರಜ್ಞಾನದ ಮಾಂತ್ರಿಕ ಸ್ಪರ್ಶದಿಂದ ಇಂದು ಇಡೀಜಗತ್ತು ಒಂದು ಪುಟ್ಟ ಗ್ರಾಮವಾಗಿ ಮಾರ್ಪಟ್ಟಿದೆ. ವೈವಿಧ್ಯಮಯ ವೈಜ್ಞಾನಿಕ ಸಾಧನಗಳಿಂದ ತರ-ತರದ ತಾಂತ್ರಿಕ ಪರಿಕರಗಳಿಂದ ಜ್ಞಾನದ ವಿವಿಧ ಶಾಖೆಗಳ ವಿಷಯ ವೈಶಿಷ್ಟ್ಯಗಳಿಂದ ಮನುಷ್ಯನ ಬದುಕು ನಾಗರೀಕತೆಯ ತುಟ್ಟತುದಿಯನ್ನು ಮುಟ್ಟಿನಿಂತಿದೆ. ಎಲ್ಲಾ ವೈಜ್ಞಾನಿಕ ಅವಿಷ್ಕಾರಗಳ ಹಿಂದಿನ ಆಂತರಿಕ ಚೈತನ್ಯ, ತಾಂತ್ರಿಕ ಪರಿಣತಿಗಳ ಹಿಂದಿನ ಜೀವ ದ್ರವ್ಯ "ವಿದ್ಯುತ್". ವಿದ್ಯುತ್ತಿನ ಅವಿಷ್ಕಾರದೊಂದಿಗೆ ಮನುಷ್ಯನ ಜೀವನ ಪರಿಯೇ ಬದಲಾಯಿತು. ಎಲ್ಲಾ ಸೌಲಭ್ಯಗಳಿಗೂ ಮೂಲಾಧಾರವಾಗಿ ಬದುಕನ್ನು ಅಮೂಲಾಗ್ರವಾಗಿ ಆವರಿಸಿ ನಿಂತಿರುವ ವಿದ್ಯುತ್ ಆಧುನಿಕ ಮನುಷ್ಯನ ಬದುಕಿನ ಅನಿವಾರ್ಯ ಅಗತ್ಯ.

ಪ್ರಸ್ತುತ ದೇಶವೊಂದರ ಪ್ರಗತಿಯ ಮಟ್ಟವನ್ನು ವಿದ್ಯುತ್ ಬಳಕೆಯ ಆಧಾರದ ಮೇಲೆ ಅಳೆಯಲಾಗುತ್ತದೆ. ಯಾವುದೇ ದೇಶ ತನ್ನ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಿಕೊಳ್ಳಬೇಕೆಂದರೆ ಅದಕ್ಕೆ ಅಗ್ಗವಾದ ಮತ್ತು ಹೇರಳವಾದ ವಿದ್ಯುತ್ ಲಭ್ಯವಿರಬೇಕು. ದೇಶದ ಆಡಳಿತ ಯಂತ್ರ ಆತಂಕವಿಲ್ಲದೇ ಚಾಲನೆಯಲ್ಲಿರಲು, ಕೃಷಿ, ಕೈಗಾರಿಕೆಗಳು ಅಡೆ-ತಡೆಗಳಿಲ್ಲದೇ ಸುರಕ್ಷಿತವಾಗಿ ಸಾಗಲು ನಿರಂತರವಾಗಿ ವಿದ್ಯುತ್ ಲಭಿಸುತ್ತಿರಬೇಕು. ವಿದ್ಯುಚ್ಛಕ್ತಿ ಬಳಕೆಯಿಂದ ಕಾರ್ಖಾನೆಗಳಲ್ಲಿ ಯಂತ್ರೋಪಕರಣಗಳ ಚಾಲನೆಗೆ, ರಾಸಾಯನಿಕ ಕ್ರಿಯೆಗಳಿಗೆ, ವಿದ್ಯುತ್ ಉಪಯೋಗಿಸಲ್ಪಟ್ಟು ನಂತರ ನಾಗರೀಕತೆ ಬೆಳೆದ ಹಾಗೆ ನಗರಗಳಲ್ಲಿ, ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಗೃಹಬಳಕೆಗೆ, ಕೃಷಿಗೆ ನೀರೋದಗಿಸಲು ಹೀಗೆ ವಿದ್ಯುತ್ ಮನುಷ್ಯನ ಜೀವನದ ಒಂದು ಅವಿಭಾಜ್ಯ ಅಂಗವಾಗಿ ಬೆಳೆದುಕೊಂಡಿದೆ ಎಂಬುದು ಅರ್ಥವಾಗುತ್ತದೆ.

ಆದರೆ ಕೇವಲ ೧೫೦ ವರ್ಷಗಳ ಹಿಂದೆ ವಿದ್ಯುತ್ ಬಳಕೆ ಪ್ರಾರಂಭವಾಗಿಯೇ ಇರಲಿಲ್ಲ. ನಂತರ ಅಮೇರಿಕಾ ಮತ್ತು ಯೂರೋಪ್ ಗಳಲ್ಲಿ ೧೮೮೦ರ ಸುಮಾರಿನಲ್ಲಿ ವಿದ್ಯುತ್ ಬಳಕೆ ಪ್ರಾರಂಭವಾಯಿತು. ಪಾಶ್ಚಿಮಾತ್ಯ ದೇಶದ ಈ ಅವಿಷ್ಕಾರ ಭಾರತಕ್ಕೆ ಕೇವಲ ೧೦ ವರ್ಷಗಳ ಅಂತರದಲ್ಲಿ ಕಾಲಿಟ್ಟಿತು. ಆಗ ಮೈಸೂರು ಸಂಸ್ಥಾನದವರು ಈ ಯೋಜನೆಯನ್ನು ತಮ್ಮ ರಾಜ್ಯದಲ್ಲಿ ಅನುಷ್ಠಾನಗೊಳಿಸಲು

[illegible]

[illegible]

[illegible]

[illegible]

[illegible]

ಮುಂದಾದರು. ೧೮೯೪ ರಿಂದ ೧೯೦೨ರವರೆಗೆ ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಯನ್ನು ಕಾರ್ಯಗತಗೊಳಿಸಲು ನಡೆಸಿದ ಪ್ರಯತ್ನದ ಫಲವೇ "ಶಿವನಸಮುದ್ರ ಜಲವಿದ್ಯುತ್ ಯೋಜನೆ" ಈ ಯೋಜನೆಯು ಏಷ್ಯಾದಲ್ಲಿ ಪ್ರಪ್ರಥಮ ಜಲವಿದ್ಯುತ್ ಯೋಜನೆ ಎಂಬ ಖ್ಯಾತಿಗಳಿಸಿದೆ.

ಪ್ರಸ್ತುತ ಅಂಶಿಕ ನಿಬಂಧವು "ಶಿವನಸಮುದ್ರ ಜಲವಿದ್ಯುತ್ ಯೋಜನೆ : ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆಯನ್ನು ಹೊಂದಿದೆ. ಪ್ರವೇಶ ರೂಪದಲ್ಲಿ ಈ ಯೋಜನೆ ಪ್ರಾರಂಭಕ್ಕೂ ಮುನ್ನ ಇದ್ದ ಮೈಸೂರು ರಾಜ್ಯದ ಸ್ಥಿತಿಗತಿಯನ್ನು ನಿಬಂಧದ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನದ ಉದ್ದೇಶ, ವಿಧಿ-ವಿಧಾನಗಳನ್ನು ಸರಳ ಮತ್ತು ಸಂಕ್ಷಿಪ್ತ ರೀತಿಯಲ್ಲಿ ವಿವರಿಸಲಾಗಿದೆ. ಚಾರಿತ್ರಿಕ ಹಿನ್ನೆಲೆಯಲ್ಲಿ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಮೈಸೂರಿನ ಆಡಳಿತ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆ ಆರಂಭಕ್ಕೂ ಮುನ್ನ ಬ್ರಿಟೀಷ್ ಅಧಿಕಾರಿ ವರ್ಗವು ಯೋಜನೆಯ ಕುರಿತ ಮಾಹಿತಿ ತಂತ್ರಜ್ಞಾನಗಳನ್ನು, ಪಾಶ್ಚಿಮಾತ್ಯ ದೇಶಗಳಿಂದ ತಿಳಿದುಬಂದು ಮೈಸೂರು ರಾಜ್ಯದಲ್ಲಿ ಅನುಷ್ಠಾನಕ್ಕೆ ಸೂಕ್ತ ಸ್ಥಳವಾಗಿ ಶಿವನಸಮುದ್ರವನ್ನು ಗುರುತಿಸಿ, ಇಲ್ಲಿ ಉತ್ಪಾದಿಸುವ ವಿದ್ಯುತ್ತನ್ನು ಆ ಸಂದರ್ಭದ ಏಕ ಮಾತ್ರ ಬೃಹತ್ ಕೈಗಾರಿಕೆ ಮತ್ತು ಹೆಚ್ಚಿನ ತೆರಿಗೆಯನ್ನು ಸರ್ಕಾರಕ್ಕೆ ನೀಡುತ್ತಿದ್ದ ಕೋಲಾರದ ಚಿನ್ನದಗಣಿಗೆ ವಿತರಿಸುವ ಕುರಿತು ಮಾತುಕತೆ ನಡೆದ ಬಗೆ, ಯೋಜನೆಯ ಪ್ರಾರಂಭಕ್ಕೆ ರಾಷ್ಟ್ರದಲ್ಲೇ ಪ್ರಪ್ರಥಮವಾಗಿ ಜಾಗತಿಕ ಟೆಂಡರ್‌ಗಳನ್ನು ಕರೆದದ್ದು ಮತ್ತು ಯೋಜನೆಯ ಆರಂಭಕ್ಕೆ ಮದ್ರಾಸ್‌ನ ವಿರೋಧ ಪ್ರಸ್ತುತ ಕಾವೇರಿ ನದಿ ವಿಚಾರದಲ್ಲಿ ಉಭಯ ರಾಜ್ಯಗಳು ಹೇಗೆ ಹಕ್ಕನ್ನು ಪ್ರತಿಪಾದಿಸುತ್ತವೆಯೋ ಅದೇ ರೀತಿ ನೂರು ವರ್ಷಗಳ ಹಿಂದಿನ ಘಟನೆಗಳು ಒಪ್ಪಂದದ ಮಹತ್ವವನ್ನು ತಿಳಿಸಲಾಗಿದೆ.

ಆಧುನಿಕತೆ ಎಂದರೇನು. ಆಧುನಿಕತೆಯ ಪ್ರಕ್ರಿಯೆ ಮೈಸೂರು ರಾಜ್ಯದಲ್ಲಿ ಹೇಗೆ ನಡೆಯಿತು. ಆಧುನಿಕತೆಯ ಪ್ರಭಾವ ಅರಸರ ಮೇಲೆ ಬೀರಿದ ಪರಿಣಾಮ, ಅರಸರಿಂದ ಯೋಜನೆಗೆ ಸಹಕಾರ, ಯೋಜನೆಯ ಕಾಮಗಾರಿ, ಯಂತ್ರೋಪಕರಣಗಳ ಆಮದು ಮಾಡಿಕೊಂಡು, ವಿದ್ಯುದಾಗರದ ಕಾಮಗಾರಿ ಆರಂಭಿಸಿ ಯೋಜನೆ ಪ್ರಾರಂಭಗೊಂಡ ಬಗೆಯನ್ನು ಮೂರನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಯೋಜನೆಯು ಕಾಲಾನುಗುಣವಾಗಿ ವಿವಿಧ ಹಂತಗಳಲ್ಲಿ ಬೆಳೆದು ಬಂದ ಬಗೆಯನ್ನು, ಅತ್ಯಾಧುನಿಕ ಯಂತ್ರೋಪಕರಣಗಳನ್ನು ವಿದ್ಯುದಾಗರದಲ್ಲಿ ಅಳವಡಿಸಿ ಹೆಚ್ಚಿನ ವಿದ್ಯುಚ್ಛಕ್ತಿ ಉತ್ಪಾದಿಸಿ ಅದನ್ನು ಹಲವು ನಗರಗಳಿಗೆ, ಕೈಗಾರಿಕೆಗಳಿಗೆ ಪೂರೈಸಿ ಆರ್ಥಿಕವಾಗಿ ಯೋಜನೆಯು ಸರ್ಕಾರಕ್ಕೆ ಮಾದರಿಯಾದ ಬಗೆ, ಕೃಷಿ, ಪ್ರಮುಖ ಪಟ್ಟಣಗಳಿಗೆ ವಿದ್ಯುತ್ ಪೂರೈಕೆ

ಮತ್ತು ಪ್ರತ್ಯೇಕ ಇಲಾಖೆ "ಗೋಮೆಡ್" ಸ್ಥಾಪಿಸಿದರ ಹಿನ್ನೆಲೆಯನ್ನು ಚರ್ಚಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ದಿವಾನರ ಆಡಳಿತ ಪ್ರಮುಖ ಅಭಿವೃದ್ಧಿ ಆಯಾಮಗಳು ಜಲವಿದ್ಯುತ್ ಯೋಜನೆಗೆ ಪೂರಕವಾಗಿ ದಿವಾನರು ಕೈಗೊಂಡ ಮುಂಜಾಗೃತ ಕ್ರಮಗಳ ಪರಿಣಾಮ ಕೃಷ್ಣರಾಜ ಸಾಗರ ನಿರ್ಮಾಣ, ಪಟ್ಟಣ ಗ್ರಾಮಗಳಿಗೆ ಪ್ರಪ್ರಥಮವಾಗಿ ವಿದ್ಯುತ್ ಪೂರೈಸಿದ ಖ್ಯಾತಿ, ಈ ಹಿನ್ನೆಲೆಯಾಗಿ ಯೋಜನೆಗೆ ದಿವಾನರ ಕೊಡುಗೆಗಳನ್ನು ಐದನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಶಿವನಸಮುದ್ರ ಜಲವಿದ್ಯುತ್ ಯೋಜನೆಯಿಂದ ಕೇವಲ ಕೈಗಾರಿಕೆಗಳಿಗೆ ವಿದ್ಯುತ್ ಪೂರೈಸದೇ ಸಂದರ್ಭಕ್ಕೆ ಅನುಗುಣವಾಗಿ ವಿವಿಧ ನಗರಗಳಿಗೆ ವಿದ್ಯುತ್ ಪೂರೈಸಿ, ನಂತರದ ಆ ನಗರಗಳ ಬದಲಾವಣೆಗಳ ಆಯಾಮಗಳು, ಕೈಗಾರಿಕೆಗಳು, ಸರ್ಕಾರಕ್ಕೆ ಆರ್ಥಿಕ ಮೂಲವಾಗಿ ನಗರಗಳು ಹೇಗೆ ಅಭಿವೃದ್ಧಿ ಹೊಂದಿದವು ಎಂಬುದನ್ನು ಆರನೇ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಶಿವನಸಮುದ್ರ ಜಲವಿದ್ಯುದಾಗರದ ಇಂದಿನ ಪರಿಸ್ಥಿತಿ ಅಂದರೆ ವಿದ್ಯುತ್ ಉತ್ಪಾದನೆ, ವಿವಿಧ ಬದಲಾವಣೆಗಳು ಯಂತ್ರೋಪಕರಣಗಳ ನವೀಕರಣ ಪ್ರಸ್ತುತ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಂಡ ಇಲಾಖೆ ಬಗೆಗಿನ ಸಂಕ್ಷಿಪ್ತ ಮಾಹಿತಿ ನೀಡಲಾಗಿದೆ.

ಒಟ್ಟಾರೆ ಅಭಿಪ್ರಾಯವೆಂದರೆ, ಚಾರಿತ್ರಿಕವಾಗಿ ಅತೀ ಮಹತ್ವಾಕಾಂಕ್ಷೆಯ ಈ ಯೋಜನೆಯು ಸುಮಾರು ೧೦೦ ವರ್ಷಗಳ ಹಿಂದೆ ಅನುಷ್ಠಾನಕ್ಕೆ ತರುವಲ್ಲಿ ಬ್ರಿಟೀಷರು, ಅರಸರು ಮತ್ತು ದಿವಾನರ ಆಸಕ್ತಿಯ ಫಲವಾಗಿ ಯೋಜನೆಯು ಯಶಸ್ವಿಯಾಗಿ ಆರಂಭವಾದದ್ದು, ನಂತರ ಇದರಿಂದ ಕೈಗಾರಿಕೆಗಳಿಗೆ, ಗೃಹಬಳಕೆಗೆ, ಕೃಷಿಗೆ ವಿನಾಯಿತ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸಾರ್ವಜನಿಕರಿಗೆ ಪೂರೈಸಲಾಗಿತ್ತು. ಭಾರತದ ವಿವಿಧ ಭಾಗಗಳಲ್ಲಿ ಖಾಸಗಿ ಒಡೆತನದ ಗುತ್ತಿಗೆದಾರರಿಂದ ಯೋಜನೆಗಳನ್ನು ಕೈಗೊಂಡರೆ, ರಾಜ್ಯದ ಶಿವನಸಮುದ್ರ ಜಲವಿದ್ಯುತ್ ಯೋಜನೆಯು ಸರ್ಕಾರದ ವತಿಯಿಂದ ಆರಂಭಗೊಂಡದ್ದು ವಿಶೇಷ. ಗವರ್ನಮೆಂಟ್ ಆಫ್ ಮೈಸೂರು ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಗೋಮೆಡ್ ಆ ಸಂದರ್ಭದಲ್ಲಿ ಭಾರತದಲ್ಲೇ ಮುಂಚೂಣಿಯಲ್ಲಿತ್ತು. ಅಖಿಲ ಭಾರತದ ವಿದ್ಯುಚ್ಛಕ್ತಿಯ ಸರಾಸರಿ ಬಳಕೆ ಮೈಸೂರು ರಾಜ್ಯದ ಮೂರನೇ ಒಂದರಷ್ಟಿತ್ತು. ಸರ್ಕಾರದವರು ರೈತರಿಗೆ ಪಂಪ್ ಸೆಟ್ ಗಳ ಮುಖಾಂತರ ೯೦ ವರ್ಷಗಳ ಹಿಂದೆಯೇ ವಿದ್ಯುತ್ ಪೂರೈಸಿದ ಮಾದರಿಗಳನ್ನು ಪ್ರಸ್ತುತ ಮುಂದುವರೆಸಿರುವುದು, ವಿದ್ಯುತ್‌ನಿಂದ ಆರ್ಥಿಕ ಪ್ರಗತಿಯನ್ನು ಸಾಧಿಸಬಹುದೆಂದು ತಿಳಿಸುತ್ತದೆ. ನೂರು ವರ್ಷಗಳ ಹಿಂದೆ ವಿದ್ಯುತ್ ಕ್ಷೇತ್ರದಲ್ಲಿ ಪ್ರಥಮವಾಗಿ ಗುರುತಿಸಿಕೊಂಡ ರಾಜ್ಯವು ಪ್ರಸ್ತುತ ತನ್ನ ನಿಗಧಿತ ವಿದ್ಯುಚ್ಛಕ್ತಿಯ ಬೇಡಿಕೆಯನ್ನು ಪೂರೈಸಿಕೊಳ್ಳಲಾಗದೇ, ವಿದ್ಯುಚ್ಛಕ್ತಿಯನ್ನು ಬೇರೆ ರಾಜ್ಯಗಳಿಂದ, ಕೇಂದ್ರ ಸರ್ಕಾರದ ವಿದ್ಯುಚ್ಛಕ್ತಿ ಮೂಲಗಳಿಂದ ವಿದ್ಯುತ್ ಪಡೆದರೂ ಕೊರತೆಯನ್ನು ಎದುರಿಸುತ್ತಿದೆ.

ಪ್ರಸ್ತುತ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಗೆ ಜಲವಿದ್ಯುತ್ ಯೋಜನೆಗಳನ್ನು ಹೆಚ್ಚಾಗಿ ಅವಲಂಬಿಸಲಾಗಿದೆ. ಕಾರಣ ಕಲ್ಲಿದ್ದಲು ಲಭ್ಯತೆಯ ಅಭಾವ. ಜಲವಿದ್ಯುತ್ ಯೋಜನೆಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ಕೈಗೊಳ್ಳಬಹುದು. ಕರ್ನಾಟಕವು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಜಲವಿದ್ಯುದಾಗರಗಳ ಬಳಕೆ ಹೊಂದಿದ್ದರು, ವಿದ್ಯುತ್ ಕೊರತೆ ಅನುಭವಿಸುವಂತಾಗಿದೆ. ವ್ಯವಸ್ಥಿತವಾಗಿ ಹೆಚ್ಚು ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಬೇಕಾಗಿದೆ.

ಮೈಸೂರು ರಾಜ್ಯದ ಅರಸರು, ದಿವಾನರ ಮುಂಜಾಗ್ರತೆಯಿಂದ ಪ್ರಾರಂಭವಾದ ನಮ್ಮ ವಿದ್ಯುತ್ ವ್ಯವಸ್ಥೆ ಸ್ವಾವಲಂಬನೆಯಿಂದ ಆರಂಭವಾಗಿ ಪರಾವಲಂಬನೆಯಲ್ಲಿ ಅಂತ್ಯವಾಗುತ್ತಿದೆ. ಈ ನೂರು ವರ್ಷಗಳಲ್ಲಿ ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ಆರಂಭಗೊಂಡು, ಪುಟ್ಟ ಮೈಸೂರು ರಾಜ್ಯ, ವಿಶಾಲ ಮೈಸೂರು ರಾಜ್ಯವಾಗಿ, ಮುಂದೆ ಕರ್ನಾಟಕವೆಂದು ಹೆಸರಾಗಿ, ಸಂಭವಿಸುತ್ತಾ ಸಾಗಿದವು. ಹಾಗೆಯೇ ವಿದ್ಯುತ್ ಬೇಡಿಕೆಯೂ ದಿನದಿಂದ ದಿನಕ್ಕೆ ಬೆಳೆಯುತ್ತಾ ಸಾಗಿದರೂ ಕೂಡ, ಶಿವನಸಮುದ್ರ ಜಲವಿದ್ಯುತ್ ಯೋಜನೆಯಿಂದ ಆರಂಭವಾಗಿ ಬೆಳೆದ ಬೃಹತ್ ವಿದ್ಯುತ್‌ಜಾಲಕ್ಕೆ ಪ್ರಸ್ತುತ ಅಲ್ಪಪ್ರಮಾಣದ ವಿದ್ಯುತ್ತನ್ನು ರಾಜ್ಯಕ್ಕೆ ಪೂರೈಸಿ ಯಶಸ್ವಿಯಾಗಿ ಮುಂದುವರೆಯುತ್ತಿದೆ.

ಪ್ರಸ್ತುತ ಅಧ್ಯಯನದಿಂದ ಹೆಚ್ಚಿನ ತೃಪ್ತಿ ತಂದರೂ ಸಹ, ಈ ವಿಷಯ ಕುರಿತು ಅಧ್ಯಯನ ಮಾಡುವ ದೃಷ್ಟಿಕೋನಗಳು ಇನ್ನೂ ಹಲವಾರು, ನನ್ನ ಅಧ್ಯಯನ ಮತ್ತು ಕಾಲದ ಮಿತಿಯಿಂದಾಗಿ ಅಧ್ಯಯನವನ್ನು ಇಷ್ಟಕ್ಕೆ ಸೀಮಿತಗೊಳಿಸಿಕೊಂಡು ಅಂತಿಮಗೊಳಿಸಲಾಗಿದೆ.

೧. ಅನುಬಂಧಗಳು

೨. ಪರಾಮರ್ಶನ ಗ್ರಂಥಗಳು

೩. ಛಾಯಾಚಿತ್ರಗಳು

ಅನುಬಂಧ ೧

೧೯೦೨ ರಿಂದ ೧೯೩೯ರ ಅಂತ್ಯ ವೇಳೆಯಲ್ಲಿ ಮೈಸೂರು ರಾಜ್ಯದಲ್ಲಿ ವಿದ್ಯುತ್ ಸಂಪರ್ಕ ಪಡೆದ ಪಟ್ಟಣ ಮತ್ತು ಗ್ರಾಮಗಳು

ಬೆಂಗಳೂರು ವಿಭಾಗ

ಕ್ರ. ಸಂ.	ವಿದ್ಯುತ್ ಸಂಪರ್ಕ ಪಡೆದ ದಿನಾಂಕ	ವಿದ್ಯುತ್ ಪಡೆದ ಪಟ್ಟಣ ಗ್ರಾಮಗಳ ಹೆಸರು	ತಾಲ್ಲೂಕು	ಜಿಲ್ಲೆ
೧	೧೨ ಮಾರ್ಚ್ ೧೯೩೩	ಅಗರ	ಬೆಂಗಳೂರು	ಬೆಂಗಳೂರು
೨.	೬ ಏಪ್ರಿಲ್ ೧೯೩೧	ಆನೇಕಲ್	ಆನೇಕಲ್	,,
೩.	೩ ಆಗಸ್ಟ್ ೧೯೩೧	ಅತ್ತಿಬೆಲೆ	,,	,,
೪.	೨ ನವೆಂಬರ್ ೧೯೩೩	ಬಿನಹಳ್ಳಿ	,,	,,
೫	೫ ಆಗಸ್ಟ್ ೧೯೦೫	ಬೆಂಗಳೂರು	ಬೆಂಗಳೂರು	ಬೆಂಗಳೂರು
೬	೨೯ ಮಾರ್ಚ್ ೧೯೩೩	ಬನ್ನೇರುಘಟ್ಟ	ಆನೇಕಲ್	ಬೆಂಗಳೂರು
೭	೫ ಜುಲೈ ೧೯೩೧	ಬೇಗೂರು	ಆನೇಕಲ್	ಬೆಂಗಳೂರು
೮.	೨೯ ಮಾರ್ಚ್ ೧೯೩೩	ಬೆಸ್ತಮನಹಳ್ಳಿ	,,	,,
೯.	೨೯ ಮಾರ್ಚ್ ೧೯೩೩	ಬಿದರಗುಪ್ಪೆ	,,	,,
೧೦.	೬ ಜೂನ್ ೧೯೩೮	ಬಿದರಹಳ್ಳಿ	ಹೊಸಕೋಟೆ	,,
೧೧.	೧೬ ಜೂನ್ ೧೯೩೭	ಬಿದಲೂರು	ದೇವನಹಳ್ಳಿ	,,
೧೨.	೬ ನವೆಂಬರ್ ೧೯೩೬	ಬ್ಯಾಟರಾಯನಪುರ	ಬೆಂಗಳೂರು	,,
೧೩.	೨೮ ಫೆಬ್ರವರಿ ೧೯೩೨	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಕೋಲಾರ
೧೪.	೧೨ ಜನವರಿ ೧೯೩೬	ಚಿಕ್ಕ ಬಾಣವಾರ	ಬೆಂಗಳೂರು	ಬೆಂಗಳೂರು
೧೫.	೯ ಸೆಪ್ಟೆಂಬರ್ ೧೯೩೩	ದೇವನಹಳ್ಳಿ	ದೇವನಹಳ್ಳಿ	ಬೆಂಗಳೂರು
೧೬	೧೭ ಮೇ ೧೯೩೩	ದಿಣ್ಣೆಹಳ್ಳಿ	ಚಿಕ್ಕಬಳ್ಳಾಪುರ	ಕೋಲಾರ
೧೭	೩೦ ಮಾರ್ಚ್ ೧೯೩೨	ದೊಡ್ಡಬಳ್ಳಾಪುರ	ದೊಡ್ಡಬಳ್ಳಾಪುರ	ಬೆಂಗಳೂರು
೧೮.	೧೬ ಮಾರ್ಚ್ ೧೯೩೪	ದೊಮ್ಮಸಂದ್ರ	ಆನೇಕಲ್	ಬೆಂಗಳೂರು

೧೯.	೨೦ ಸೆಪ್ಟೆಂಬರ್ ೧೯೩೨	ಗಂಗನಮಿದ್ದೆ	ಚಿಕ್ಕಬಳ್ಳಾಪುರ	ಕೋಲಾರ
೨೦.	೧೭ ಮೇ ೧೯೩೩	ಗೇರಹಳ್ಳಿ	,,	,,
೨೧.	೩೧ ಮೇ ೧೯೩೩	ಗೌರಿಬಿದನೂರು	ಗೌರಿಬಿದನೂರು	,,
೨೨.	೮ ಜೂನ್ ೧೯೩೫	ಘೊಟಿಕನಪುರ	,,	,,
೨೩.	೨೦ ಮಾರ್ಚ್ ೧೯೩೩	ಗೊಟ್ಟಿಗೆರೆ	ಆನೇಕಲ್	ಬೆಂಗಳೂರು
೨೪.	೧ ಆಗಸ್ಟ್ ೧೯೩೫	ಗೌಡಗೆರೆ	ಗೌರಿಬಿದನೂರು	ಕೋಲಾರ
೨೫.	೧೫ ಡಿಸೆಂಬರ್ ೧೯೩೪	ಗುಬ್ಬಿ	ಗುಬ್ಬಿ	ತುಮಕೂರು
೨೬.	೧೫ ಮೇ ೧೯೩೭	ಗುಲೂರು	ತುಮಕೂರು	,,
೨೭.	೨೪ ಮಾರ್ಚ್ ೧೯೩೪	ಹಗದೂರು	ಬೆಂಗಳೂರು	ಬೆಂಗಳೂರು
೨೮.	೨೯ ಮಾರ್ಚ್ ೧೯೩೩	ಹರಗದ್ದೆ	ಆನೇಕಲ್	,,
೨೯.	೨೧ ಡಿಸೆಂಬರ್ ೧೯೩೧	ಹೆಬ್ಬಾಳ	ಬೆಂಗಳೂರು	,,
೩೦.	೧೯ ಆಗಸ್ಟ್ ೧೯೨೮	ಹೂಡಿ	,,	,,
೩೧.	೨೮ ಅಕ್ಟೋಬರ್ ೧೯೩೨	ಹೊಸಕೋಟೆ	ಹೊಸಕೋಟೆ	,,
೩೨.	೧ ಜುಲೈ ೧೯೩೭	ಹಡೋನಹಳ್ಳಿ	ದೊಡ್ಡಬಳ್ಳಾಪುರ	,,
೩೩.	೨ ಫೆಬ್ರವರಿ ೧೯೩೮	ಹಿರೇಬಿದನೂರು	ಗೌರಿಬಿದನೂರು	ಕೋಲಾರ
೩೪.	೨೪ ಮಾರ್ಚ್ ೧೯೩೪	ಹಿಮ್ಮಡಹಳ್ಳಿ	ಹೊಸಕೋಟೆ	ಬೆಂಗಳೂರು
೩೫.	೨೯ ಮಾರ್ಚ್ ೧೯೩೩	ಹಿಂದಲಬೆಲೆ	ಆನೇಕಲ್	,,
೩೬.	೯ ಮೇ ೧೯೩೯	ಜಕ್ಕೂರು	ಬೆಂಗಳೂರು	,,
೩೭.	೨೯ ಮಾರ್ಚ್ ೧೯೩೩	ಜಿಗಣಿ	,,	,,
೩೮.	೧೨ ಅಕ್ಟೋಬರ್ ೧೯೩೩	ಕಡುಗುಡಿ	ಹೊಸಕೋಟೆ	ಬೆಂಗಳೂರು
೩೯.	೪ ಜೂನ್ ೧೯೩೨	ಕಂದವಾರ	ಚಿಕ್ಕಬಳ್ಳಾಪುರ	ಕೋಲಾರ
೪೦.	೧೮ ಅಕ್ಟೋಬರ್ ೧೯೩೫	ಕನ್ನಮಂಗಳ	ಹೊಸಕೋಟೆ	ಬೆಂಗಳೂರು
೪೧.	೨೯ ಮಾರ್ಚ್ ೧೯೩೩	ಕಾರಾಪುರ	ಆನೇಕಲ್	,,
೪೨.	೩೧ ಅಕ್ಟೋಬರ್ ೧೯೩೨	ಕೆನ್ನಗೆರೆ	ಬೆಂಗಳೂರು	,,
೪೩.	೧೭ ಫೆಬ್ರವರಿ ೧೯೩೯	ಕಿತ್ತಗಾನಹಳ್ಳಿ	ಆನೇಕಲ್	,,
೪೪.	೬ ಜುಲೈ ೧೯೩೫	ಕಾಯಸೋನಹಳ್ಳಿ	ಹೊಸಕೋಟೆ	,,

೪೫.	೭ ಜನವರಿ ೧೯೩೪	ಕೋಡಿಮನಗೊಂಡನಹಳ್ಳಿ	,,	,,
೪೬.	೪ ಮಾರ್ಚ್ ೧೯೩೬	ಕೊಪ್ಪ	ಆನೇಕಲ್	,,
೪೭.	೧೮ ಅಕ್ಟೋಬರ್ ೧೯೩೫	ಕೊಟ್ಟಮಂಡ್ಲು	ಹೊಸಕೋಟೆ	,,
೪೮.	೨೮ ಅಕ್ಟೋಬರ್ ೧೯೨೩	ಕೃಷ್ಣರಾಜಪುರಂ	ಬೆಂಗಳೂರು	,,
೪೯.	೭ ಏಪ್ರಿಲ್ ೧೯೩೩	ಕ್ಯಾತಸಂದ್ರ	ತುಮಕೂರು	ತುಮಕೂರು
೫೦.	೧೩ ಏಪ್ರಿಲ್ ೧೯೩೪	ಲಕ್ಷ್ಮಿಸಾಗರ	ಆನೇಕಲ್	ಬೆಂಗಳೂರು
೫೧.	೧ ಜುಲೈ ೧೯೩೭	ಲಕ್ಷ್ಮಿದೇವಿಪುರಂ	ದೊಡ್ಡಬಳ್ಳಾಪುರ	,,
೫೨.	೫ ಏಪ್ರಿಲ್ ೧೯೩೫	ಮಡಿವಾಳ	ಬೆಂಗಳೂರು	,,
೫೩.	೨೧ ಅಕ್ಟೋಬರ್ ೧೯೩೬	ಮೆಲ್ಲೂರು	ಶಿಡ್ಲಘಟ್ಟ	ಕೋಲಾರ
೫೪.	೩ ಮೇ ೧೯೩೭	ಮಾಗಡಿ	ಮಾಗಡಿ	ಬೆಂಗಳೂರು
೫೫.	೨೧ ಡಿಸೆಂಬರ್ ೧೯೩೩	ಮಂಚೆನಹಳ್ಳಿ	ಗೌರಿಬಿದನೂರು	ಕೋಲಾರ
೫೬.	೧೬ ಜೂನ್ ೧೯೩೪	,,	,,	,,
೫೭.	೨೯ ಮಾರ್ಚ್ ೧೯೩೩	ಮಾಯಸಂದ್ರ	ಆನೇಕಲ್ಲು	ಬೆಂಗಳೂರು
೫೮.	೧೬ ಏಪ್ರಿಲ್ ೧೯೩೬	ಮೇಲೂರು	ಶಿಡ್ಲಘಟ್ಟ	ಕೋಲಾರ
೫೯.	೨೧ ಅಕ್ಟೋಬರ್ ೧೯೩೬	ಮುತ್ತೂರು	,,	,,
೬೦.	೩೦ ಜನವರಿ ೧೯೩೩	ನಂದಿಬೆಟ್ಟ	ಚಿಕ್ಕಬಳ್ಳಾಪುರ	,,
೬೧.	೨ ಡಿಸೆಂಬರ್ ೧೯೩೪	ನೆಲಮಂಗಲ	ನೆಲಮಂಗಲ	ಬೆಂಗಳೂರು
೬೨.	೨೯ ಮಾರ್ಚ್ ೧೯೩೩	ಸರ್ಜಾಪುರ	ಆನೇಕಲ್	ಬೆಂಗಳೂರು
೬೩.	೫ ಫೆಬ್ರವರಿ ೧೯೩೩	ಸಿದ್ಧಾಪುರ	ಬೆಂಗಳೂರು	,,
೬೪.	೧೮ ಅಕ್ಟೋಬರ್ ೧೯೩೫	ಸೀಗೆಹಳ್ಳಿ	ಹೊಸಕೋಟೆ	,,
೬೫.	೨೫ ಫೆಬ್ರವರಿ ೧೯೩೬	ಸೊಂಡೆಕೊಪ್ಪ	ನೆಲಮಂಗಲ	,,
೬೬.	೮ ಡಿಸೆಂಬರ್ ೧೯೩೩	ಘಾಟಿ ಸುಬ್ರಮ್ಮಣ್ಯ	ದೊಡ್ಡಬಳ್ಳಾಪುರ	,,
೬೭.	೨೦ ಜನವರಿ ೧೯೩೩	ಸುಲ್ತಾನ್‌ಪೇಟೆ	ಚಿಕ್ಕಬಳ್ಳಾಪುರ	ಕೋಲಾರ
೬೮.	೧೫ ಮಾರ್ಚ್ ೧೯೩೩	ತಾವರೆಕೆರೆ	ಬೆಂಗಳೂರು	ಬೆಂಗಳೂರು
೬೯.	೮ ನವೆಂಬರ ೧೯೩೩	ತಿಂಡ್ಲು	ಆನೇಕಲ್ಲು	ಬೆಂಗಳೂರು
೭೦.	೧೭ ಮೇ ೧೯೩೩	ತಿಪ್ಪೇನಹಳ್ಳಿ	ಚಿಕ್ಕಬಳ್ಳಾಪುರ	ಕೋಲಾರ

೭೧.	೧೪ ಡಿಸೆಂಬರ್ ೧೯೩೬	ತೊಂಡನಬಾವಿ	ಗೌರಿಬಿದನೂರು	,,
೭೨.	೨೮ ಮೇ ೧೯೩೬	ತೂಬಗೆರೆ	ದೊಡ್ಡಬಳ್ಳಾಪುರ	ಬೆಂಗಳೂರು
೭೩.	೧೨ ಡಿಸೆಂಬರ್ ೧೯೩೯	ತುಮಕೂರು	ತುಮಕೂರು	ತುಮಕೂರು
೭೪.	೯ ಸೆಪ್ಟೆಂಬರ್ ೧೯೩೫	ವಡಿಗೇನಹಳ್ಳಿ	ದೇವನಹಳ್ಳಿ	ಬೆಂಗಳೂರು
೭೫.	೧೪ ಜೂನ್ ೧೯೩೩	ವರ್ತೂರು	ಬೆಂಗಳೂರು	ಬೆಂಗಳೂರು
೭೬.	೧೯ ಏಪ್ರಿಲ್ ೧೯೩೭	ವಿದುರಾಶ್ವತ	ಗೌರಿಬಿದನೂರು	ಕೋಲಾರ
೭೭.	೨೪ ಡಿಸೆಂಬರ್ ೧೯೨೮	ವೈಟ್‌ಫೀಲ್ಡ್	ಬೆಂಗಳೂರು	ಬೆಂಗಳೂರು
೭೮.	೨೬ ಆಗಸ್ಟ್ ೧೯೨೬	ಯಲಹಂಕ	,,	,,
೭೯.	೧೦ ಅಕ್ಟೋಬರ್ ೧೯೩೬	ಯಶವಂತಪುರ	,,	,,

ಮೈಸೂರು ವಿಭಾಗ

೧.	೧೦ ಜುಲೈ ೧೯೩೮	ಅರಕೆರೆ	ಮಂಡ್ಯ	ಮಂಡ್ಯ
೨.	೧ ಡಿಸೆಂಬರ್ ೧೯೩೩	ಬೆಳಗೊಳ	ಮೈಸೂರು	ಮೈಸೂರು
೩.	೨೨ ಜನವರಿ ೧೯೩೯	ಬೇಲೂರು	ಬೇಲೂರು	ಹಾಸನ
೪.	೭ ಆಗಸ್ಟ್ ೧೯೩೭	ಬೊಗಾದಿ	ಮೈಸೂರು	ಮೈಸೂರು
೫.	೨೨ ಜೂನ್ ೧೯೩೩	ಚಾಮಲಾಪುರಹುಂಡಿ	ನಂಜನಗೂಡು	ಮೈಸೂರು
೬.	೨೨ ಜೂನ್ ೧೯೩೩	ದೇವರಸನಹಳ್ಳಿ	,,	,,
೭.	೨೭ ಮೇ ೧೯೩೧	ಫ್ರೆಂಚ್‌ರಾಕ್	ಶ್ರೀರಂಗಪಟ್ಟಣ	ಮಂಡ್ಯ
೮.	೪ ಅಕ್ಟೋಬರ್ ೧೯೩೮	ಗರ್ಗೇಶ್ವರಿ	ಟಿ.ನರಸೀಪುರ	ಮೈಸೂರು
೯.	೧ ಡಿಸೆಂಬರ್ ೧೯೩೩	ಹಿನಕಲ್ಲು	ಮೈಸೂರು	,,
೧೦.	೪ ಸೆಪ್ಟೆಂಬರ್ ೧೯೩೮	ಹುಣಸೂರು	ಹುಣಸುರು	,,
೧೧.	೨೧ ಮೇ ೧೯೩೧	ಕಡಕೊಳ	ನಂಜನಗೂಡು	,,
೧೨.	೧೬ ಜನವರಿ ೧೯೩೩	ಕಳಲೆ	,,	,,
೧೩.	೪ ಜುಲೈ ೧೯೩೮	ಕಲಸ್ತವಾಡಿ	ಶ್ರೀರಂಗಪಟ್ಟಣ	ಮಂಡ್ಯ
೧೪.	೨೭ ಮೇ ೧೯೩೧	ಕೋಡಿಯಾಳ	,,	,,
೧೫.	೪ ಸೆಪ್ಟೆಂಬರ್ ೧೯೩೮	ಕೃಷ್ಣರಾಜನಗರ	ಕೃಷ್ಣರಾಜನಗರ	ಮೈಸೂರು
೧೬.	೨೩ ಜೂನ್ ೧೯೩೪	ಲಲಿತಾದ್ರಿಪುರ	ಮೈಸೂರು	,,

೧೭	೧ ಜನವರಿ ೧೯೩೩	ಮಲ್ಲೇನಹಳ್ಳಿ	ಮಂಡ್ಯ	ಮಂಡ್ಯ
೧೮.	೧೪ ಸೆಪ್ಟೆಂಬರ್ ೧೯೩೦	ಮಂಡ್ಯ	ಮಂಡ್ಯ	ಮಂಡ್ಯ
೧೯.	೨೭ ಮೇ ೧೯೩೦	ಮೇಲುಕೋಟೆ	ಶ್ರೀರಂಗಪಟ್ಟಣ	,,
೨೦.	೨೬ ಸೆಪ್ಟೆಂಬರ್ ೧೯೦೮	ಮೈಸೂರು	ಮೈಸೂರು	ಮೈಸೂರು
೨೧.	೧೮ ಸೆಪ್ಟೆಂಬರ್ ೧೯೩೪	ನಾಗೇನಹಳ್ಳಿ	ಶ್ರೀರಂಗಪಟ್ಟಣ	ಮಂಡ್ಯ
೨೨.	೨೮ ಸೆಪ್ಟೆಂಬರ್ ೧೯೩೩	,,	ಮೈಸೂರು	ಮೈಸೂರು
೨೩.	೨೭ ಸೆಪ್ಟೆಂಬರ್ ೧೯೩೫	ನರ್ಗಲೇ	ನಂಜನಗೂಡು	,,
೨೪.	೨೫ ಅಕ್ಟೋಬರ್ ೧೯೨೮	ನಂಜನಗೂಡು	,,	,,
೨೫.	೧೬ ಜೂನ್ ೧೯೩೩	ಪಾಲಹಳ್ಳಿ	ಶ್ರೀರಂಗಪಟ್ಟಣ	ಮಂಡ್ಯ
೨೬	೨೬ ಅಕ್ಟೋಬರ್ ೧೯೨೮	ಶ್ರೀರಂಗಪಟ್ಟಣ	,,	,,
೨೭	೯ ಜುಲೈ ೧೯೩೩	ತಾಂಡ್ಯ	ನಂಜನಗೂಡು	ಮೈಸೂರು
೨೮.	೨೪ ಅಕ್ಟೋಬರ್ ೧೯೩೮	ಟಿ.ನರಸೀಪುರ	ಟಿ.ನರಸೀಪುರ	,,

ಕನಕನಹಳ್ಳಿ(ಕನಕಪುರ) ವಿಭಾಗ

೧.	೪ ಜೂನ್ ೧೯೩೪	ಐಜೂರು	ಕ್ಲೋಸ್‌ಪೇಟೆ	ಬೆಂಗಳೂರು
೨	೪ ಜೂನ್ ೧೯೩೩	ಅರ್ಲಾಳ	ಕನಕನಹಳ್ಳಿ	,,
೩.	೪ ಜೂನ್ ೧೯೩೪	ಅರ್ಚಕರಹಳ್ಳಿ	ಕ್ಲೋಸ್‌ಪೇಟೆ	,,
೪.	೩ ಮಾರ್ಚ್ ೧೯೩೩	ಬೈರಪಟ್ಟಣ	ಚನ್ನಪಟ್ಟಣ	,,
೫	೫ ಜೂನ್ ೧೯೩೪	ಬನಂದೂರು	ಕ್ಲೋಸ್‌ಪೇಟೆ	,,
೬	೮ ಜುಲೈ ೧೯೩೫	ಬಿಡದಿ	,,	,,
೭	೨೯ ಜೂನ್ ೧೯೩೪	ಬ್ಯಾರಮಂಗಲ	,,	,,
೮.	೨೮ ಜುಲೈ ೧೯೨೮	ಚನ್ನಪಟ್ಟಣ	ಚನ್ನಪಟ್ಟಣ	,,
೯.	೬ ನವೆಂಬರ್ ೧೯೨೮	ಚಿಕ್ಕಮಾಲೂರು	ಕನಕನಹಳ್ಳಿ	,,
೧೦.	೨೬ ಜೂನ್ ೧೯೩೬	ಚಿಕ್ಕಮುದವಾಡಿ	,,	,,
೧೧.	೨೯ ಮೇ ೧೯೨೯	ಕ್ಲೋಸ್‌ಪೇಟೆ	ಕ್ಲೋಸ್‌ಪೇಟೆ	,,
೧೨.	೨೯ ಮಾರ್ಚ್ ೧೯೩೩	ದಲಿಂಬ	ಕನಕನಹಳ್ಳಿ	,,
೧೩.	೨೭ ಜುಲೈ ೧೯೨೮	ದೊಡ್ಡಮಾಲೂರು	ಕ್ಲೋಸ್‌ಪೇಟೆ	,,

೧೪.	೯ ಜೂನ್ ೧೯೩೭	ಹಾರೋಹಳ್ಳಿ	ಕ್ಲೋಸ್‌ಪೇಟೆ	ಬೆಂಗಳೂರು
೧೫	೨೯ ಜೂನ್ ೧೯೩೪	ಹೆಗ್ಗಡಗೆರೆ	ಕನಕನಹಳ್ಳಿ	,,
೧೬	೨೯ ಮೇ ೧೯೩೩	ಕಬ್ಬಾಳು	ಕ್ಲೋಸ್‌ಪೇಟೆ	,,
೧೭	೨೮ ಜನವರಿ ೧೯೩೩	ಕಾಚೂನಹಳ್ಳಿ	,,	,,
೧೮	೨೩ ಅಕ್ಟೋಬರ್ ೧೯೩೫	ಕಲ್ಲಹಳ್ಳಿ	,,	,,
೧೯.	೧ ಆಗಸ್ಟ್ ೧೯೨೬	ಕನಕನಹಳ್ಳಿ	ಕನಕನಹಳ್ಳಿ	,,
೨೦.	೭ ಮಾರ್ಚ್ ೧೯೩೫	ಕೇತಹಳ್ಳಿ	ಕ್ಲೋಸ್‌ಪೇಟೆ	,,
೨೧.	೨೦ ಫೆಬ್ರವರಿ ೧೯೩೬	ಕುರುಬಹಳ್ಳಿ	ಕನಕನಹಳ್ಳಿ	,,
೨೨.	೨೯ ಜೂನ್ ೧೯೩೭	ಕ್ಯಾಸಪ್ರುರ	ಚನ್ನಪಟ್ಟಣ	,,
೨೩.	೩ ಮಾರ್ಚ್ ೧೯೨೩	ಮತ್ತೀಕೆರೆ	,,	,,
೨೪.	೨೫ ಏಪ್ರಿಲ್ ೧೯೩೩	ಮಾಯಗಾನಹಳ್ಳಿ	ಕ್ಲೋಸ್‌ಪೇಟೆ	,,
೨೫	೧೨ ನವೆಂಬರ್ ೧೯೩೨	ಸಾತನೂರು	ಕನಕನಹಳ್ಳಿ	,,
೨೬	೩ ಮಾರ್ಚ್ ೧೯೩೩	ಶೆಟ್ಟಿಹಳ್ಳಿ	ಚನ್ನಪಟ್ಟಣ	,,
೨೭	೨೯ ಮೇ ೧೯೩೩	ಶಿವಹಳ್ಳಿ	ಕನಕನಹಳ್ಳಿ	,,
೨೮	೨೩ ಮೇ ೧೯೩೧	ಸುಗ್ಗೇನಹಳ್ಳಿ	ಕ್ಲೋಸ್‌ಪೇಟೆ	,,
೨೯.	೨೦ ಜನವರಿ ೧೯೩೬	ವೆಂಕಟರಾಯನ ದೊಡ್ಡಿ	ಕನಕನಹಳ್ಳಿ	,,

ಸೂಚನೆ : ಕ್ಲೋಸ್‌ಪೇಟೆ ಪ್ರಸ್ತುತ ರಾಮನಗರ

ಕೆ.ಜಿ.ಎಫ್ ವಿಭಾಗ

೧	೩೧ ಜನವರಿ ೧೯೩೨	ಬೆಲ್ಲಿಮಬುರಿ	ಕೋಲಾರ	ಕೋಲಾರ
೨	೧೮ ಮಾರ್ಚ್ ೧೯೩೧	ಬೆತ್ತಮಂಗಲ	ಬೋರಿಂಗ್‌ಪೇಟೆ	,,
೩.	೨೬ ಸೆಪ್ಟೆಂಬರ್ ೧೯೨೭	ಬೋರಿಂಗ್‌ಪೇಟೆ	,,	,,
೪.	೨೭ ನವೆಂಬರ್ ೧೯೩೩	ಚಿಂತಾಮಣಿ	ಚಿಂತಾಮಣಿ	,,
೫	೨೫ ಜುಲೈ ೧೯೩೬	ಚಿಕ್ಕತಿರುಪತಿ	ಮಾಲೂರು	,,
೬	೭ ಏಪ್ರಿಲ್ ೧೯೩೪	ದೊಡ್ಡಕಾಟೂರು	,,	,,
೭	೭ ಏಪ್ರಿಲ್ ೧೯೩೪	ದೊಡ್ಡಶಿವಾರ	,,	,,
೮.	೨೯ ಜೂನ್ ೧೯೩೧	ಗೋಗಲಕಷ್ಟಿ	ಮುಳಬಾಗಲು	,,

೯.	೧೬ ಜುಲೈ ೧೯೩೨	ಹೊನಗೇನಹಳ್ಳಿ	ಮಾಲೂರು	ಕೋಲಾರ
೧೦.	೧೦ ಮೇ ೧೯೩೪	ಕೈವಾರ	ಚಿಂತಾಮಣಿ	,,
೧೧.	೨೫ ಜುಲೈ ೧೯೩೬	ಕಲ್ಕೆರೆ	ಮಾಲೂರು	,,
೧೨.	೬ ನವೆಂಬರ್ ೧೯೩೧	ಕನ್ನಸಂದ್ರ	ಮುಳಬಾಗಲು	,,
೧೩.	೨೫ ಜನವರಿ ೧೯೩೫	ಕಪ್ಪಲಂದುಗು	ಮಾಲೂರು	,,
೧೪.	೨೪ ಏಪ್ರಿಲ್ ೧೯೩೧	ಕೋಡಿಕಣ್ಣೂರು	ಕೋಲಾರ	,,
೧೫.	೧೬ ಜುಲೈ ೧೯೦೨	ಕೆ.ಜಿ.ಎಫ್	ಬೋರಿಂಗ್‌ಪೇಟೆ	,,
೧೬.	೩೦ ಅಕ್ಟೋಬರ್ ೧೯೨೯	ಕೋಲಾರ ಸಿಟಿ	ಕೋಲಾರ	,,
೧೭.	೨೫ ಜುಲೈ ೧೯೩೬	ಲಕ್ಕೂರು	ಮಾಲೂರು	,,
೧೮.	೧೦ ಮೇ ೧೯೩೪	ಮೈಲಾಪುರ	ಚಿಂತಾಮಣಿ	,,
೧೯.	೨೩ ಆಗಸ್ಟ್ ೧೯೩೨	ಮಲ್ಲಿಕಾಂತನಹಳ್ಳಿ	ಮುಳಬಾಗಲು	,,
೨೦.	೩ ಸೆಪ್ಟೆಂಬರ್ ೧೯೩೨	ಮಾಲೂರು	ಮಾಲೂರು	,,
೨೧.	೨೩ ಆಗಸ್ಟ್ ೧೯೩೨	ಮಂಚಗಾನಹಳ್ಳಿ	ಮುಳಬಾಗಲು	,,
೨೨.	೯ ಅಕ್ಟೋಬರ್ ೧೯೩೦	ಮೊಟಕ್ಕಪಲ್ಲಿ	,,	,,
೨೩.	೧ ಅಕ್ಟೋಬರ್ ೧೯೩೨	ಮುಳಬಾಗಲು	,,	,,
೨೪.	೮ ಆಗಸ್ಟ್ ೧೯೩೦	ಪೆಟ್ಟನಹಳ್ಳಿ	ಕೋಲಾರ	,,
೨೫.	೯ ಅಕ್ಟೋಬರ್ ೧೯೩೦	ಪೊಡಕಾಷ್ಟಿ	ಮುಳಬಾಗಿಲು	,,
೨೬.	೨೩ ಆಗಸ್ಟ್ ೧೯೩೨	ಸೋನವಾಡಿ	,,	,,
೨೭.	೨ ಡಿಸೆಂಬರ್ ೧೯೩೨	ಸುಂದರಪಾಳ್ಯ	ಬೋರಿಂಗ್‌ಪೇಟೆ	,,
೨೮.	೫ ನವೆಂಬರ್ ೧೯೩೧	ಧಾಯಲೂರು	ಮುಳಬಾಗಿಲು	,,
೨೯.	೧೦ ಮೇ ೧೯೩೪	ತಲ್ಲವಾರ	ಚಿಂತಾಮಣಿ	ಕೋಲಾರ
೩೦.	೧೦ ಮೇ ೧೯೩೧	ತಿರುಮನಹಳ್ಳಿ	ಮುಳಬಾಗಲು	,,
೩೧.	೨೬ ಜುಲೈ ೧೯೩೨	ವಕ್ಕಲೇರಿ	ಕೋಲಾರ	,,
೩೨.	೩ ಜನವರಿ ೧೯೩೪	ವರದೇನಹಳ್ಳಿ	ಮಾಲೂರು	,,

ಶಿವನಸಮುದ್ರ ವಿಭಾಗ

೧.	೨ ಸೆಪ್ಟೆಂಬರ್ ೧೯೩೨	ಮದ್ದೂರು	ಮದ್ದೂರು	ಮೈಸೂರು
೨.	೧ ಏಪ್ರಿಲ್ ೧೯೩೦	ಮಳವಳ್ಳಿ	ಮಳವಳ್ಳಿ	,,

೩.	೭ ಜುಲೈ ೧೯೩೩	ನಿಡಘಟ್ಟ	ಮದ್ದೂರು	,,
೪.	೨೧ ಸೆಪ್ಟೆಂಬರ್ ೧೯೩೨	ಶಿವಪುರ	,,	,,
ಭದ್ರಾವತಿ ವಿಭಾಗ				
೧.	೯ ಸೆಪ್ಟೆಂಬರ್ ೧೯೩೭	ಭದ್ರಾವತಿ (ಹಳೆನಗರ)	ಶಿವಮೊಗ್ಗ	ಶಿವಮೊಗ್ಗ
೨.	೭ ಸೆಪ್ಟೆಂಬರ್ ೧೯೩೬	ಚಿಕ್ಕಮಗಳೂರು	ಚಿಕ್ಕಮಗಳೂರು	,,
೩.	೨ ಏಪ್ರಿಲ್ ೧೯೩೯	ದಾವಣಗೆರೆ	ದಾವಣಗೆರೆ	ಚಿತ್ರದುರ್ಗ
೪.	೯ ಸೆಪ್ಟೆಂಬರ್ ೧೯೩೬	ಹಾಸನ	ಹಾಸನ	ಹಾಸನ
೫.	೬ ಸೆಪ್ಟೆಂಬರ್ ೧೯೩೬	ಹೊಳೆನರಸೀಪುರ	ಹೊಳೆನರಸೀಪುರ	,,
೬.	೧೭ ಏಪ್ರಿಲ್ ೧೯೩೯	ಹೊಸಪಾಳ್ಯ	ಶಿವಮೊಗ್ಗ	ಶಿವಮೊಗ್ಗ
೭.	೨೮ ಮಾರ್ಚ್ ೧೯೩೭	ಕೆಂಪನಹಳ್ಳಿ	ಚಿಕ್ಕಮಗಳೂರು	ಶಿವಮೊಗ್ಗ
೮.	೩೦ ಮಾರ್ಚ್ ೧೯೩೭	ಕುಸುವಲಕ್ಕಿ	,,	,,
೯.	೧೮ ಮಾರ್ಚ್ ೧೯೩೯	ಮತ್ತೂರು	ಶಿವಮೊಗ್ಗ	ಶಿವಮೊಗ್ಗ
೧೦.	೨ ಜೂನ್ ೧೯೩೮	ನಿಡಿಗೆ	,,	,,
೧೧.	೫ ಸೆಪ್ಟೆಂಬರ್ ೧೯೩೬	ಶಿವಮೊಗ್ಗ	,,	,,
೧೨.	೨೧ ಸೆಪ್ಟೆಂಬರ್ ೧೯೩೬	ತರೀಕೆರೆ	ತರೀಕೆರೆ	,,
೧೩.	೩೦ ಮಾರ್ಚ್ ೧೯೩೭	ರಾಂಪುರ	ಚಿಕ್ಕಮಗಳೂರು	,,

ಆಧಾರ : Governament of his highness the Maharaja of Mysore, ELECTRICAL DEPARTMENT Adiministration Report for the year, 1938-39

ಅನುಬಂಧ ೨

ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿರುವ ವಿವಿಧ ಜಲ ವಿದ್ಯುದಾಗರಗಳ ಮಾಹಿತಿ

ಕ್ರ.. ಸಂ	ವಿದ್ಯುದಾಗರದ ಹೆಸರು	ವಿದ್ಯುತ್ ಜನಕಗಳ ಸಂಖ್ಯೆ ಮತ್ತು ಶಕ್ತಿ	ಒಟ್ಟು ಉತ್ಪಾದನಾ ಶಕ್ತಿ(ಮೆ.ವ್ಯಾ)	ಇರುವ ಜಿಲ್ಲೆ
೧.	ಶರಾವತಿ ವಿದ್ಯುದಾಗರ	೧೦x ೧೦೩.೫	೧೦೩೫.೦೦	ಶಿವಮೊಗ್ಗ
೨.	ನಾಗಝರಿ ವಿದ್ಯುದಾಗರ	೩x೧೩೫+೩x೧೫೦	೮೫೫.೦೦	ಉತ್ತರಕನ್ನಡ
೩.	ಗೇರುಸೊಪ್ಪ ಅಣೆಕಟ್ಟು ವಿದ್ಯುದಾಗರ	೪x೬೦	೨೪೦.೦೦	ಶಿವಮೊಗ್ಗ
೪.	ವರಾಹಿ ಭೂಗರ್ಭ ವಿದ್ಯುದಾಗರ	೨x೧೧೫	೨೩೦.೦೦	ಉಡುಪಿ
೫	ಕದ್ರಾ ಅಣೆಕಟ್ಟು ವಿದ್ಯಾದಾಗರ	೩x೫೦	೧೫೦.೦೦	ಉತ್ತರಕನ್ನಡ
೬	ಮಹಾತ್ಮಗಾಂಧಿ ಜಲವಿದ್ಯುದಾಗರ	೪x೨೧.೬+೪x೧೩..೨	೧೩೯.೨೦	ಶಿವಮೊಗ್ಗ
೭	ಕೊಡಸಳ್ಳಿ ಅಣೆಕಟ್ಟು ವಿದ್ಯುದಾಗರ	೩x೪೦	೧೨೦.೦೦	ಉತ್ತರಕನ್ನಡ
೮.	ಸೂಪಾ ಅಣೆಕಟ್ಟು ವಿದ್ಯುದಾಗರ	೨x೫೦	೧೦೦.೦೦	ಉತ್ತರಕನ್ನಡ
೯.	ಲಿಂಗನಮಕ್ಕಿ ಅಣೆಕಟ್ಟು ವಿದ್ಯುದಾಗರ	೨x೨೭.೫	೫೫.೦೦	ಶಿವಮೊಗ್ಗ
೧೦.	ಶ್ರೀ ಶೇಷಾದ್ರಿ ಅಯ್ಯರ್ ಜಲ ವಿದ್ಯುದಾಗರ, ಶಿವನಸಮುದ್ರ	೪x೬+೬x೩	೪೨.೦೦	ಮಂಡ್ಯ
೧೧.	ಘಟಪ್ರಭಾ ಅಣೆಕಟ್ಟು ವಿದ್ಯುದಾಗರ	೨x೧೬	೩೨.೦೦	ಬೆಳಗಾವಿ
೧೨.	ಭದ್ರಾ ಎಡದಂಡೆ ಕಾಲುವೆ ವಿದ್ಯುದಾಗರ	೨x೧೨+೧x೨	೨೬.೦೦	ಶಿವಮೊಗ್ಗ
೧೩.	ಶಿಂಷಾ ಜಲ ವಿದ್ಯುದಾಗರ	೨x೮.೬	೧೭.೨೦	ಮಂಡ್ಯ
೧೪.	ಭದ್ರಾ ಬಲದಂಡೆ ಕಾಲುವೆ ವಿದ್ಯುದಾಗರ	೧x೭..೨x೧x೬	೧೩.೨೦	ಶಿವಮೊಗ್ಗ
೧೫.	ಮಾಣಿ ಅಣೆಕಟ್ಟು ವಿದ್ಯುದಾಗರ	೨x೪.೫	೯.೦೦	ಶಿವಮೊಗ್ಗ
೧೬.	ಮಲ್ಲಾಪುರ ಕಿರುವಿದ್ಯುತ್ ಯೋಜನೆ	೨x೪.೫	೯.೦೦	ರಾಯಚೂರು
೧೭.	ಸಿರವಾರ ಕಿರುವಿದ್ಯುತ್ ಯೋಜನೆ	೧x೧	೧.೦೦	ರಾಯಚೂರು
೧೮.	ಕಲ್ಮಲ ಕಿರುವಿದ್ಯುತ್ ಯೋಜನೆ	೧x೦.೪೦	೦.೪೦	ರಾಯಚೂರು
೧೯.	ಗಣೇಕಲ್ಲು ಕಿರುವಿದ್ಯುತ್ ಯೋಜನೆ	೧x೦.೩೫	೦.೩೫	ರಾಯಚೂರು

ಆಧಾರ : ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ವಾರ್ಷಿಕ ವರದಿ ೨೦೦೬-೦೭, ಪು.೧೨೮

ಅನುಬಂಧ ೩

ಶಿವನಸಮುದ್ರ ವಿದ್ಯುದಾಗರದಲ್ಲಿ ೧೯೭೯ರಿಂದ ಇಲ್ಲಿಯವರೆಗೆ ಪ್ರತಿವರ್ಷದಲ್ಲಿ ಉತ್ಪಾದಿಸಿದ ವಿದ್ಯುತ್ ಮೆ.ವಾ.ಗಳಲ್ಲಿ

ಕ್ರ.ಸಂ.	ವರ್ಷ	ವಿದ್ಯುತ್ ಉತ್ಪಾದನೆ	ಸಾಮರ್ಥ್ಯ
೧.	೧೯೭೯-೮೦	೧೬೪.೦೩	೨೫ ಅಶ್ವಶಕ್ತಿ
೨.	೧೯೮೦-೮೧	೧೯೯.೨೮	,,
೩.	೧೯೮೧-೮೨	೧೭೨.೭೭	,,
೪.	೧೯೮೨-೮೩	೧೫೩.೭೯	,,
೫.	೧೯೮೩-೮೪	೧೨೮.೯೮	,,
೬.	೧೯೮೪-೮೫	೧೩೫.೯೮	,,
೭.	೧೯೮೫-೮೬	೧೨೫.೪೯	,,
೮.	೧೯೮೬-೮೭	೦೯೭.೭೩	,,
೯.	೧೯೮೭-೮೮	೧೨೮.೧೮	,,
೧೦.	೧೯೮೮-೮೯	೧೨೮.೨೬	,,
೧೧.	೧೯೮೯-೯೦	೧೨೫.೬೨	,,
೧೨.	೧೯೯೦-೯೧	೧೨೯.೪೬	,,
೧೩.	೧೯೯೧-೯೨	೧೩೬.೭೧	,,
೧೪.	೧೯೯೨-೯೩	೧೧೫.೨೧	,,
೧೫.	೧೯೯೩-೯೪	೦೯೦.೨೯	,,
೧೬.	೧೯೯೪-೯೫	೧೦೧.೪೨	,,
೧೭.	೧೯೯೫-೯೬	೧೩೨.೬೬	,,
೧೮.	೧೯೯೬-೯೭	೦೯೮.೫೬	,,
೧೯.	೧೯೯೭-೯೮	೧೧೦.೯೦	,,

೨೦.	೧೯೯೮-೯೯	೧೧೪.೧೪	,,
೨೧.	೧೯೯೯-೦೦	೧೩೩.೩೫	,,
೨೨.	೨೦೦೦-೦೧	೦೭೩.೦೯	,,
೨೩.	೨೦೦೧-೦೨	೦೦೪.೪೯	,,
೨೪.	೨೦೦೨-೦೩	೦೦೫.೫೪	೫೦ ಅಶ್ವಶಕ್ತಿ
೨೫.	೨೦೦೩-೦೪	೦೭೫.೭೪	,,
೨೬.	೨೦೦೪-೦೫	೦೯೪.೪೫	,,
೨೭.	೨೦೦೫-೦೬	೨೬೨.೩೦	,,
೨೮.	೨೦೦೬-೦೭	೩೧೮.೧೬	,,

ಆಧಾರ : ಶಿವನಸಮುದ್ರ ವಿದ್ಯುದಾಗರದಲ್ಲಿನ ಮಾಹಿತಿ ಫಲಕ

ಅನುಬಂಧ ೪

ಪ್ರಸ್ತುತ ಶಿವನಸಮುದ್ರ ವಿದ್ಯುದಾಗರದಲ್ಲಿರುವ ಜನರೇಟರ್‌ಗಳ ಉತ್ಪಾದನಾ ಸಾಮರ್ಥ್ಯ

೧.	ಜನರೇಟರ್	೦೧	೩ ಮೆ.ವ್ಯಾ
೨.	,,	೦೨	೬ ,,
೩.	,,	೦೩	೩ ,,
೪.	,,	೦೪	೩ ,,
೫.	,,	೦೫	೩ ,,
೬.	,,	೦೬	೩ ,,
೭.	,,	೦೭	೬ ,,
೮.	,,	೦೮	೩ ,,
೯.	,,	೦೯	೬ ,,
೧೦	,,	೧೦	೬ ,,
		ಒಟ್ಟು	೪೨ ಮೆ.ವ್ಯಾ

ಆಧಾರ : ಶಿವನಸಮುದ್ರ ವಿದ್ಯುದಾಗರದಲ್ಲಿನ ಮಾಹಿತಿ ಫಲಕ

ಪರಾಮರ್ಶನ ಗ್ರಂಥಗಳು

೧. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ ಎಂ., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು, ೧೯೭೦

೨. ಗಜಾನನ ಶರ್ಮ, ಬೆಳಕಾಯಿತು ಕರ್ನಾಟಕ, ಅಕ್ಷರ ಪ್ರಕಾಶನ, ಸಾಗರ, ೨೦೦೩

೩. ಗುಂಡಪ್ಪ ಡಿ.ವಿ., ಮೈಸೂರಿನ ದಿವಾನರುಗಳು, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೭೧

೪. ಗೋಪಾಲರಾವ್ ಎಚ್.ಎಸ್., ನಮ್ಮ ನಾಡು ಕರ್ನಾಟಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೩

೫. ಚಂದ್ರಮೌಳಿ ಕೆ., ಬೆಂಗಳೂರಿನ ನೋಟಗಳು, ಪ್ರಿಸಮ್ ಬುಕ್ಸ್ ಪ್ರೈವೇಟ್ ಲಿ, ಬೆಂಗಳೂರು, ೨೦೦೨

೬. ಚಂದ್ರಶೇಖರ ರಾ.ನಂ., ಇದು ನಮ್ಮ ಕರ್ನಾಟಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫

೭. ಚಂದ್ರಶೇಖರ್ ಎಸ್., ದಕ್ಷಿಣ ಭಾರತದ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦

೮. ಚಂದ್ರಶೇಖರ್ ಎಸ್.(ಸಂ), ಕರ್ನಾಟಕ ಚರಿತ್ರೆ, ಸಂಪುಟ-೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೯. ಚಿನ್ನಸ್ವಾಮಿ ಸೋಸಲೆ ಎನ್., ನಾಲ್ವಡಿ ಕೃಷ್ಣನ ಮೈಸೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೦. ಚಿನ್ನಸ್ವಾಮಿ ಸೋಸಲೆ ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೧. ಜಯಪ್ಪಗೌಡ ಡಿ.ಎಸ್., ವಿಶ್ವೇಶ್ವರಯ್ಯನವರ ಜೀವನ ದರ್ಶನ, ಶುಭೋದಯ ಪ್ರಕಾಶನ, ಮೈಸೂರು, ೨೦೦೭

೧೨. ತಂಬಂಡ ವಿಜಯ್ ಪೂಣಚ್ಚ(ಸಂ) ಚರಿತ್ರೆ ವಿಶ್ವಕೋಶ, ಸಂಪುಟ-೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೩. ತಿರುಮಲೆ ತಾತಾಚಾರ್ಯ ಶರ್ಮ, ಮೈಸೂರು ಇತಿಹಾಸದ ಹಳೆಯ ಪುಟಗಳು, ನವನೀತ ಪ್ರಕಾಶನ, ಬೆಂಗಳೂರು, ೧೯೯೬

೧೪. ದಯಾನಂದ ತೂರ್ಕೆ, ಮೈಸೂರಿನ ಒಡೆಯರು, ಕೀರ್ತಿ ಪ್ರಕಾಶನ, ಧಾರವಾಡ, ೧೯೭೬

೧೫. ದಿವಾಕರ್ ಆರ್.ಆರ್.(ಸಂ), ಕರ್ನಾಟಕ ಪರಂಪರೆ, ಸಂಪುಟ-೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೬. ನಂಜರಾಜ ಅರಸು ಪಿ.ವಿ., ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಪ್ರಕಾಶನ, ಮೈಸೂರು, ೨೦೦೭

೧೭. ನಂಜರಾಜ ಅರಸು ಪಿ.ವಿ., ಚಂದ್ರರಾಜ ಅರಸು ಎಸ್.ಆರ್.(ಸಂ) ನಾಲ್ವಡಿ ಕೃಷ್ಣರಾಜ ಒಡೆಯರ್ : ಒಂದು ದರ್ಶನ, ಅಖಿಲ ಕರ್ನಾಟಕ ಅರಸು ಪರಿಷತ್(ರಿ), ಮೈಸೂರು, ೧೯೯೬

೧೮. ನಾಯಕ್ ಹಾ.ಮಾ.(ಸಂ), ಕನ್ನಡ ವಿಷಯ ವಿಶ್ವಕೋಶಗಳು, ಸಂಪುಟ ೧ ಮತ್ತು ೨, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೫-೦೭

೧೯. ಪಂಚಮುಖಿ ಆರ್.ಎಸ್., ಕರ್ನಾಟಕದ ಅರಸು ಮನೆತನಗಳು, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೧೯೬೧

೨೦. ಪಾಟೀಲ ಎಂ.ಬಿ.(ಸಂ), ಕರ್ನಾಟಕ ಕೈಪಿಡಿ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ೧೯೯೬

೨೧. ಬರಗೂರು ರಾಮಚಂದ್ರಪ್ಪ(ಸಂ), ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳುರು, ೨೦೦೨

೨೨. ಮಹಾದೇವ ಬಣಕಾರ(ಸಂ), ಕರ್ನಾಟಕ ಉಜ್ವಲ ಪರಂಪರೆ, ಅನುಭವ ಮಂಟಪ ಪ್ರಕಾಶನ, ಬೆಂಗಳೂರು, ೧೯೭೩

೨೩. ಮೈಸೂರು ವಿದ್ಯಾನಿಧಿ ಶಾಖೆ ಪ್ರಕಟಿತ, ಮೈಸೂರು ಕೈಪಿಡಿ, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ೧೯೩೬

೨೪. ರಾಮಕೃಷ್ಣರಾವ್ ಬಿ., ಶ್ರೀಮನ್ಮಹರಾಜರ ವಂಶಾವಳಿ ಭಾಗ-೧, ಸರ್ಕಾರಿ ಮುದ್ರಣಾಲಯ, ಮೈಸೂರು, ೧೯೧೬

೨೫. ಲಿಂಗಯ್ಯ ಎಂ.ಕೆ., ಮೈಸೂರು ಒಂದು ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೨

೨೬. ವಿಶ್ವೇಶ್ವರಯ್ಯ ಎಂ.(ಕನ್ನಡಕ್ಕೆ:ಗಜಾನನ ಶರ್ಮ), ನನ್ನ ವೃತ್ತಿ ಜೀವನದ ನೆನಪುಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೫

೨೭. ವೆಂಕಟರಾಮಯ್ಯ ಸಿ.ಕೆ., ಆಳಿದ ಮಹಾಸ್ವಾಮಿಯವರು, ಬೆಂಗಳೂರು ಪ್ರೆಸ್, ಬೆಂಗಳೂರು, ೧೯೪೧

೨೮. ಶಿಂಗ್ರಯ್ಯ ಎಂ., ಮೈಸೂರನ್ನು ಆಳಿದ ಮಹಾಸ್ವಾಮಿಯವರಾದ ನಾಲ್ವಡಿ ಕೃಷ್ಣರಾಜ ಒಡೆಯರವರು, ವೆಸ್ಲಿಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು, ೧೯೪೧.

೨೯. ಶ್ರೀಪಾದ್ ಭಟ್, ಆಧುನಿಕೋತ್ತರವಾದ, ಪ್ರಸಾರಾಂಗ, ಮೈಸೂರು ವಿ.ವಿ.ಮೈಸೂರು, ೧೯೯೪

೩೦. ಶೇಷಗಿರಿರಾವ್ ಎಲ್.ಎಸ್.(ಸಂ), ಬೆಂಗಳೂರು ದರ್ಶನ, ಸಂಪುಟ ೧ ಮತ್ತು ೨, ಉದಯಭಾನು ಕಲಾಸಂಘ(ರಿ), ಬೆಂಗಳೂರು, ೨೦೦೫

೩೧. ಶೇಷ ನಾರಾಯಣ, ಕಾವೇರಿ, ಒಂದು ಚಿಮ್ಮು - ಒಂದು ಹೊರಳು, ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು, ೨೦೦೩

೩೨. ಸನತ್ ಕುಮಾರ್ ಬೆಳಗಲಿ, ನಾಲ್ವಡಿ ಕೃಷ್ಣರಾಜ ಒಡೆಯರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೪

೩೩. ಸ್ವಾಮಿರಾವ್ ಎಲ್., ಶ್ರೀ ಮನ್ನಾಲ್ವಡಿ ಕೃಷ್ಣರಾಜ ಒಡೆಯರವರ ಚರಿತ್ರೆ, ಸುಬೋಧ ವಿದ್ಯುತ್ ಮುದ್ರಣ, ಬೆಂಗಳೂರು, ೧೯೩೮

೩೪. ಸುಂದರರಾವ್ ಬ.ನ., ಬೆಂಗಳೂರಿನ ಇತಿಹಾಸ, ವಸಂತ ಸಾಹಿತ್ಯ ಗ್ರಂಥ ಮಾಲಾ, ಬೆಂಗಳೂರು, ೧೯೮೫

೩೫. ಸುರೇಶ್ ಮೂನ, ಬೆಂಗಳೂರು ನಗರ ನಿರ್ಮಾಪಕರು, ಸಾಧನಾ ಪ್ರಕಾಶನ, ಬೆಂಗಳೂರು, ೧೯೯೬

೩೬. ಸೂರ್ಯನಾಥ್ ಕಾಯತ್(ಸಂ), ಕರ್ನಾಟಕ ಗ್ಯಾಸೆಟಿಯರ್ ಸಂ.೨, ಕರ್ನಾಟಕ ಸರ್ಕಾರ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ೧೯೮೫

೩೭. ಸೆಬಾಸ್ಟಿಯನ್ ಜೋಸೆಫ್(ಸಂ), ಕರ್ನಾಟಕ ಚರಿತ್ರೆ ಸಂ.೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಇಂಗ್ಲೀಷ್ ಗ್ರಂಥಗಳು

1. Chandrashekhara N.S., **Dewan Sheshadri Iyer,** Publication Division, Govt of India, Delhi, 1981

2. Gopala Krishnaiya M., **History of the Cauvery Power Scheme,** Govt Press, Bangalore, 1932

3. Hayavadana Rao C., **Mysore Gazetter, Vol.II, Economic,** Govt Press, Bangalore, 1930

4. Lowise Rice B., **Mysore Gazetteer, Vol.II,** Asian Book Service, New Delhi, 2001

5. Shama Rao M., **Modern Mysore(1868 to the present time),** Printed by Higginbothams, Bangalore, 1936

6. Surendra Rao B., **The Modern in Modern,** Manual of I.C.H.R., 16th Confarence President Speech, Kolkatta, 2001

7. Suryanath U.Kamath(C.E), **Bangalore Dist Gazetteer,** Karntaka State Gazetteer Dept., Bangalore, 1990

8. Mysore State Gazetteer, **Mandya District,** Govt Press, Bangalore, 1967

9. Vikram Sampath, **Splendours of Royal Mysore,** Rupa Co. Publication, New Delhi, 2008

10. Vishveshwaraiah M., **Cauvery reservoir Project in Mysore,** Govt of Mysore P.W.D., Dept, Bangalore, 1911

11. Govt of Mysore, **Mysore and Modern Industries,** Issued by the public officer, Mysore, 1940

Administrative Report

Address of the Dewan of Myosre ot the Dasara Representative Assembly at Mysore October, 1904

Report of the Mysore Administration for the year 1904-1905

Report of the Mysore Administration for the Year 1913-14

Proceedings

Proceedings, Govt of his highness the Maharaja of Mysore, No.1217-21/6133-37, date Novermber 10, 1903

Proceedings of the Govt of his highness the Maharaja of Myosre, Public works, No.536, date October 22, 1914

Proceedings of the Govt of his higness the Maharaja of Mysore, Public works, No.383-7, C.P.S., date April 17, 1916

Proceedings of the Govt of his highness the Maharaja of Myosre, Public works No.511-14, C.P.S.date 30, 1917

Electrical Department Administration Reports

Govt of Mysore, Electrical Department Administration Report for the year 1913-14

Govt of Mysore, Electrical Department Administration Report for the year 1914-15

Govt of Mysore, Electrical Department Administration Report for the year 1915-16

Govt of Mysore, Electrical Department Administration Report for the year 1918-19

Govt of Mysore, Electrical Department Administration Report for the year 1922-23

Govt of Mysore, Electrical Department Administration Report for the year 1923-24

Govt of Mysore, Electrical Department Administration Report for the year 1925-26

Govt of Mysore, Electrical Department Administration Report for the year 1926-27

Govt of Mysore, Electrical Department Administration Report for the year 1931-31

Govt of Mysore, Electrical Department Administration Report for the year 1932-33

Govt of Mysore, Electrical Department Administration Report for the year 1933-34

Govt of Mysore, Electrical Department Administration Report for the year 1934-35

Govt of Mysore, Electrical Department Administration Report for the year 1936-37

Govt of Mysore, Electrical Department Administration Report for the year 1938-39

ವಾರ್ಷಿಕ ವರದಿಗಳು

ಕರ್ನಾಟಕ ಸರ್ಕಾರ, ಇಂಧನ ಇಲಾಖೆ - ೨೦೦೮-೦೮

ವಿಶ್ವೇಶ್ವರಯ್ಯ ವಿದ್ಯುತ್ ನಿಯಮ ನಿಯಮಿತ - ೨೦೦೫-೦೬

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ - ೨೦೦೬-೦೭

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ - ೨೦೦೭-೦೮

ದಿನಪತ್ರಿಕೆಗಳು

ವೃತ್ತಾಂತ

ಪ್ರಜಾವಾಣಿ

ವಿಜಯಕರ್ನಾಟಕ

ಛಾಯಾಚಿತ್ರಗಳು



ನಾಲ್ವಡಿ ಕೃಷ್ಣರಾಜ ಒಡೆಯರ್ ರವರು


ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಶ್ರಮಿಸಿದವರು



ದಿವಾನ್ ಕೆ. ಶೇಷಾದ್ರಿ ಅಯ್ಯರ್ ರವರು



ಎ.ಸಿ.ಜೆ. ಲಾಟ್‌ಬಿನೀರ್



ಸರ್.ಎಂ.ವಿಶ್ವೇಶ್ವರಯ್ಯನವರು




ಸರ್.ಎಂ.ಮಿರ್ಜಾಇಸ್ಮಾಯಿಲ್‌ರವರು



ವಿದ್ಯುದಾಗರಕ್ಕೆ ಜಲ ಪೂರೈಸುವ ಪವರ್ ಚಾನಲ್‌ಗಳು



ಪವರ್ ಚಾನಲ್‌ನಲ್ಲಿ ಬರುವ ಜಲ ಫೋರ್‌ಬೇಯಲ್ಲಿ



ಶಿವನಸಮುದ್ರ ಜಲವಿದ್ಯುದಾಗರದ ಸಮಗ್ರನೋಟ



ಶಿವನಸಮುದ್ರ ವಿದ್ಯುದಾಗರದಲ್ಲಿನ ಜನರೇಟರ್ ಹಾಲ್



ಶಿವನಸಮುದ್ರ ವಿದ್ಯುದಾಗರ ನಿಯಂತ್ರಣಾ ಕೊಠಡಿ



ಶಿವನಸಮುದ್ರದಲ್ಲಿ ಕಾರ್ಯನಿರ್ವಹಿಸಿದ ಹಳೆಯ ಯಂತ್ರೋಪಕರಣಗಳ ಸಂಗ್ರಹಾಲಯ



ಶಿವನಸಮುದ್ರ ವಿದ್ಯುದಾಗಾರದಲ್ಲಿನ ಕೋಲಾರ ಮಾರ್ಗದ ಟ್ರಾನ್ಸ್‌ಫಾರ್ಮರ್



ವಿದ್ಯುದಾಗರದಲ್ಲಿನ ಬೆಂಗಳೂರು ಮಾರ್ಗದ ಟ್ರಾನ್ಸ್‌ಫಾರ್ಮರ್‌ಗಳು



ಮೈಸೂರು ಮಾರ್ಗದ ಟ್ರಾನ್ಸ್‌ಫಾರ್ಮರ್‌ಗಳು



ಶಿವನಸಮುದ್ರ ಜಲವಿದ್ಯುದಾಗರದ ಸಮಗ್ರ ನೋಟ



ಶಿವನಸಮುದ್ರ ಜಲವಿದ್ಯುತ್ ಯೋಜನೆಯ ನೀಲ ನಕ್ಷೆ





ಶಿವನಸಮುದ್ರ ಜಲವಿದ್ಯುದಾಗಾರದಿಂದ ನಗರಗಳಿಗೆ ವಿದ್ಯುತ್ ಪೂರೈಸುವ ಪ್ರಸರಣ ಮಾರ್ಗಗಳು



ಶಿವನಸಮುದ್ರ ವಿದ್ಯುದಾಗರದಲ್ಲಿನ ಕಾರ್ಯಗಾರ ಕಟ್ಟಡ





ಶಿವನಸಮುದ್ರ ವಿದ್ಯುದಾಗರಕ್ಕೆ ತೆರಳಲು ಬಳಸುವ ಟ್ರಾಲಿ ಮನೆ ಮತ್ತು ಯಂತ್ರ



ಶಿವನಸಮುದ್ರ ವಿದ್ಯುದಾಗರ ೧೦೦ ವರ್ಷ ಪೂರೈಸಿದ ಸ್ಮರಣಾರ್ಥ ಸ್ಮಾರಕ